# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 24 ಸೋಮವಾರ 2025

ಸಂಪುಟ: 45 | ಸಂಚಿಕೆ: 334 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



## ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ

# ಹೊರಟ್ಟಿ ರಾಜೀನಾಮೆ ಇಂಗಿತ

## ರಾಜೀನಾಮೆ ಬಗ್ಗೆ ಮೂರ್ನಾಲ್ಕು ದಿನದಲ್ಲಿ ನಿರ್ಧಾರ

- ಇಂದಿನ ದಿನಗಳಲ್ಲಿ ಸದನಗಳನ್ನು ನಿರ್ವಹಿಸುವುದು ಕಷ್ಟ ಎಂಬುದು ಅರ್ಥವಾಗಿದೆ
- ಸದನದಲ್ಲಿ ನಡೆಯುತ್ತಿರುವ ಘಟನೆಗಳಿಂದ ನನಗೆ ಬೇಜಾರಾಗಿದೆ
- ಮೇಲ್ಮನೆಯಲ್ಲಿ ಸದಸ್ಯರು ಸಭಾಪತಿಗಳ ಸೂಚನೆಗಳಿಗೆ ಬೆಲೆಯೇ ಕೋಡೋದಿಲ್ಲ

ಬೆಂಗಳೂರು, ಮಾ.23– ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಉಪಸಭಾಪತಿ ಪ್ರಾಣೇಶ್ ಅವರಿಗೆ ಮಾ.18ರಂದು ಪತ್ರವನ್ನು ರವಾನಿಸಿದ್ದಾರೆ ಎಂಬ ಸುದ್ದಿ ವೈರಲ್ ಆಗಿತ್ತು.

ವೈಯಕ್ತಿಕ ಕಾರಣಗಳಿಂದ ನಾನು ನನ್ನ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ರಾಜೀನಾಮೆಯನ್ನು ಮಾರ್ಚ್ 31ರ ಒಳಗೆ ಸ್ವೀಕರಿಸಬೇಕು. ಏಪ್ರಿಲ್ 1ರಿಂದ ಅನ್ವಯವಾಗುವಂತೆ ಕ್ರಮಕೈಗೊಂಡು ನನ್ನನ್ನು ಈ ಹುದ್ದೆಯಿಂದ ಮುಕ್ತಿಗೊಳಿಸಬೇಕು ಎಂದು ಉಪಸಭಾಪತಿಗೆ ಬರೆದ ಪತ್ರದಲ್ಲಿ ಬಸವರಾಜ ಹೊರಟ್ಟಿ ಆಗ್ರಹಿಸಿರುವ ಪತ್ರ ಸಹ ಕೆಲ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು.

ಆದರೆ, ತಾವು ಇನ್ನೂ ರಾಜೀನಾಮೆ ಸಲ್ಲಿಸಿಲ್ಲ. ನನ್ನ ಸಹಿ ಇಲ್ಲದ ರಾಜೀನಾಮೆ ಪತ್ರ ವೈರಲ್ ಆಗಿದೆ. ಸಹಿ ಮಾಡಿರುವ ಪತ್ರ ನನ್ನ ಬಳಿಯೇ ಇದ್ದು, ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ 3–4 ದಿನದಲ್ಲಿ ತೀರ್ಮಾನ ಕೈಗೊಳ್ಳುತ್ತೇನೆ ಎಂದರು. ಇವತ್ತಿನ ರಾಜಕಾರಣಿಗಳನ್ನು ಸದನದಲ್ಲಿ ಸಂಭಾಳಿಸಲು ಸಾಧ್ಯವಿಲ್ಲ ಹಾಗೂ ನಾನು ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತೇನೆ ಎಂದು ಬಸವರಾಜ ಹೊರಟ್ಟಿ ಇಂದು (ಮಾ. 23) ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಹೇಳಿದರು.

ಇಂದಿನ ದಿನಗಳಲ್ಲಿ ಸದನಗಳನ್ನು ನಿರ್ವಹಿಸುವುದು ಕಷ್ಟ ಎಂಬುದು ಅರ್ಥವಾಗಿದೆ. ಸದನದಲ್ಲಿ ನಡೆಯುತ್ತಿರುವ ಘಟನೆಗಳಿಂದ ನನಗೆ ಬೇಜಾರಾಗಿದೆ. ಸಭಾಪತಿಗೆ ಹೇಳೋದಿಲ್ಲ ಕೇಳೋದಿಲ್ಲ? ಸದನದೊಳಗೆ ಪ್ರತಿಭಟನೆ ನಡೆಸುತ್ತಾರೆ. ಪ್ಲೇಕಾರ್ಡ್‌ಗಳನ್ನು ತರುತ್ತಾರೆ. ದಿನನಿತ್ಯ ಅಲ್ಲಿ ಏನೇನೋ ಚರ್ಚೆಗಳಾಗುತ್ತವೆ. ಆ ಚರ್ಚೆಗಳ ಬಗ್ಗೆಯಾಗಲೀ, ಪ್ರತಿಭಟನೆಗಳ ಬಗ್ಗೆಯಾಗಲೀ ನನಗೆ ಮಾಹಿತಿಯೇ ಇರುವುದಿಲ್ಲ. ದಿನನಿತ್ಯ ಚರ್ಚೆ ನಡೆಯುತ್ತಿವೆ ಅದನ್ನ ನಡೆಸುವ ಶಕ್ತಿ ಇಲ್ಲ ಅನ್ನಿಸುತ್ತಿದೆ ಎಂದು ಅವರು ಬೇಸರಿಸಿಕೊಂಡಿದ್ದಾರೆ.



ಬಸವರಾಜ ಹೊರಟ್ಟಿ

ಮೇಲ್ಮನೆಯಲ್ಲಿ ಕೆಲವೊಮ್ಮೆ ತುಂಬಾ ಮಹತ್ವದ ಮಸೂದೆಗಳ ಬಗ್ಗೆ ಚರ್ಚೆಗಳಾಗಬೇಕಿರುತ್ತದೆ. ಆದರೆ, ಮೇಲ್ಮನೆಯ ಸದಸ್ಯರು ಇವುಗಳಿಗೆ ಬೆಲೆಯೇ ಕೊಡೋದಿಲ್ಲ. ವಿನಾಕಾರಣ ಪ್ರತಿಭಟನೆಗೆ ಇಳಿಯುತ್ತಾರೆ. ಸಭಾಪತಿಗಳ ಸೂಚನೆಗಳಿಗೆ ಬೆಲೆಯೇ ಕೋಡೋದಿಲ್ಲ. ಗಲಾಟೆಗಳು ತಾರಕಕ್ಕೇರುತ್ತವೆ. ಮೊನ್ನೆ ನಾನು ಅಸಹಾಯಕನಾಗಿ 17 ನಿಮಿಷ ಸುಮ್ಮನೇ ಕುಳಿತುಬಿಟ್ಟಿದ್ದೆ. ನನಗೆ ಇಂಥ ಸಂದರ್ಭಗಳನ್ನು ನಿಭಾಯಿಸುವ ಯೋಗ್ಯತೆ ಇಲ್ಲ ಎಂದೆನಿಸುತ್ತಿದೆ. ಆದ್ದರಿಂದ ನಾನು ಸದನದಲ್ಲಿ ಇರಲೇಬಾರದು ಎಂದು ತೀರ್ಮಾನಿಸಿದ್ದೇನೆ ಎಂದು ಹೊರಟ್ಟಿ ತಿಳಿಸಿದ್ದಾರೆ.

ಸದನದಲ್ಲಿ ಹಿರಿಯರಿಗೆ ಗೌರವವಿಲ್ಲ ಎಂದು ಹೇಳಿರುವ ಅವರು, ನಾನು ಕಳೆದ 45 ವರ್ಷಗಳಿಂದಲೂ ರಾಜಕಾರಣದಲ್ಲಿದ್ದಾರೆ. ಆದರೆ, ನನ್ನ ಹಿರಿತನಕ್ಕೆ ಯಾವುದೇ ಬೆಲೆಯಿಲ್ಲ. ಇಂದಿನ ರಾಜಕಾರಣಿಗಳು ನಾನೊಬ್ಬ ಹಿರಿಯ ಎಂಬುದನ್ನೇ ಮರೆತಿದ್ದಾರೆ. ನನ್ನ ಮಾತಿಗೆ ಬೆಲೆ ಕೊಡುವುದಿಲ್ಲ. ಸದನದಲ್ಲಿ ನಾನು ಬೊಬ್ಬೆ ಹೊಡೆದುಕೊಳ್ಳುತ್ತಿದ್ದರೂ ಯಾರೂ ನನ್ನ ಕಡೆ ಗಮನ ಕೊಡೋದಿಲ್ಲ ಎಂದು ಅವರು ಹೇಳಿದ್ದಾರೆ.

ನಾನು ನನ್ನ ಮನಸ್ಸಿನಲ್ಲಿರುವುದನ್ನು ನಿಮ್ಮ ಮುಂದೆ (ಮಾಧ್ಯಮಗಳ) ಇಟ್ಟಿದ್ದೇನೆ. ಆದರೆ, ದುಡುಕಿ ಯಾವುದೇ ನಿರ್ಧಾರ ಕೈಗೊಳ್ಳಲ್ಲ. ನನ್ನ ಸ್ನೇಹಿತರು, ಆಪ್ತರ ಜೊತೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇನೆ. ಅವರು ಏನು ಮಾರ್ಗದರ್ಶನ ನೀಡುತ್ತಾರೋ ಅದರಂತೆ ಮುಂದುವರಿಯುತ್ತೇನೆ ಎಂದು ಹೇಳಿದ್ದಾರೆ.

## ಹನಿಟ್ರ್ಯಾಪ್ ಗದ್ದಲದ ನಡುವೆ ಕುತೂಹಲ ಮೂಡಿಸಿದ ಸಿಎಂ ಸಿದ್ದರಾಮಯ್ಯ-ಖರ್ಗೆ ಭೇಟಿ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದರು.

ಬೆಂಗಳೂರು, ಮಾ.23–ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಹನಿ ಟ್ರ್ಯಾಪ್ ಮಾಡಲು ಯತ್ನಿಸಿರುವುದು ಭಾರೀ ಸದ್ದು ಮಾಡುತ್ತಿದೆ. ಈ ಬಗ್ಗೆ ಸದನದಲ್ಲಿ ಗದ್ದಲವೇ ನಡೆದಿದೆ. ಸಿಬಿಐ ತನಿಖೆಗೆ ಬಿಜೆಪಿ ಆಗ್ರಹಿಸುತ್ತಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿಕೆಗಳನ್ನೂ ಕೊಡುತ್ತಿದ್ದಾರೆ. ಇದರ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ. ಈ ಭೇಟಿ ಕುತೂಹಲ ಮೂಡಿಸಿದೆ.

ಮಲ್ಲಿಕಾರ್ಜುನ ಖರ್ಗೆ ಅವರು ಸಿದ್ದರಾಮಯ್ಯರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಮೊಣಕಾಲು ನೋವಿನಿಂದ ಶೀಘ್ರವಾಗಿ ಚೇತರಿಸಿಕೊಳ್ಳುವಂತೆ ಹಾರೈಸಿದರು.

■ 6ನೇ ಪುಟಕ್ಕೆ

## ಪೊಲೀಸರು ಮೊಬೈಲ್ ಕ್ಯಾಮರಾದಲ್ಲಿ ಫೋಟೋ ತೆಗೆಯುತ್ತಿದ್ದಾರೆ

### ಕಾಲಹರಣ ಮಾಡುವ ಸಂಚಾರ ಪೊಲೀಸರಿಗೆ ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಫೋಟೋ ಕ್ಲಿಕ್ಕಿಸುವ ಕೆಲಸ

ಮೈಸೂರು, ಮಾ.23(ಆರ್‌ಕೆ)– ಕರ್ತವ್ಯಕ್ಕೆ ನಿಯೋಜನೆಗೊಂಡ ಸಂಚಾರ ಪೊಲೀಸರು ಟ್ರಾಫಿಕ್ ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಮೊಬೈಲ್ ನೋಡಿಕೊಂಡು ಸುಖಾ ಸುಮ್ಮನೆ ಕಾಲಹರಣ ಮಾಡುವುದಕ್ಕೆ ಬ್ರೇಕ್ ಹಾಕಲಾಗಿದೆ.

ಮೈಸೂರು ನಗರದಾದ್ಯಂತ ಎಲ್ಲಾ 52 ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಕೆಲಸ ಮಾಡುವ ಪೊಲೀಸರು, ಹೆಲ್ಮೆಟ್ ರಹಿತ ಬೈಕ್ ಚಾಲನೆ, ಬೆಲ್ಟ್ ಹಾಕದೇ ಕಾರು ಚಾಲನೆ, ಸಿಗ್ನಲ್ ಜಂಪ್, ದೋಷಪೂರಿತ ನಂಬರ್ ಪ್ಲೇಟ್, ಸೈಲೆನ್ಸರ್ ಪರಿವರ್ತನೆಯಂತಹ ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ನಂಬರ್ ಪ್ಲೇಟ್ ಸಮೇತ ಮೊಬೈಲ್‌ನಲ್ಲಿ ಫೋಟೋ ತೆಗೆದು ಸಂಚಾರ ಠಾಣೆ ಸರ್ವರ್‌ಗೆ ಅಪ್‌ಲೋಡ್ ಮಾಡಬೇಕೆಂದು ಹಿರಿಯ ಪೊಲೀಸ್ ಅಧಿಕಾರಿಗಳು ತಾಕೀತು ಮಾಡಿದ್ದಾರೆ. ಈ ಹಿಂದೆಯೂ ಈ ಪದ್ಧತಿ ಜಾರಿಯಲ್ಲಿತ್ತಾದರೂ, ಟ್ರಾಫಿಕ್ ಸಿಗ್ನಲ್ ಲೈಟ್

■ 6ನೇ ಪುಟಕ್ಕೆ



ಟ್ರಾಫಿಕ್ ಸಿಗ್ನಲ್‌ನಲ್ಲಿ ವಾಹನಗಳ ಫೋಟೋ ಕ್ಲಿಕ್ಕಿಸುತ್ತಿರುವ ಪೊಲೀಸ್ ಪೇದೆ.

## ಗ್ರಾಮೀಣ ಸೊಗಡು, ವನ್ಯ ಜೀವಿಗಳ ಆಕೃತಿಗಳೊಂದಿಗೆ ಕೈಬೀಸಿ ಕರೆಯುತ್ತಿದೆ ತಪೋನಂದನ ಉದ್ಯಾನ

- 50ಕ್ಕೂ ಹೆಚ್ಚು ಕಲಾಕೃತಿಗಳು ನಿರ್ಮಾಣ
- ಸೆಲ್ಫಿಸ್ಪಾಟ್‌ನಂತಾದ ಉದ್ಯಾನ



ಕುರಿ ಮೇಯಿಸುವ ರೈತನ ಆಕೃತಿ

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮಾ.23– ನಿರ್ವಹಣೆಯ ಕೊರತೆಯಿಂದಾಗಿ ಕಳೆಗುಂದಿರುವ ಉದ್ಯಾನವನಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ಮೈಸೂರಿನ ಕುವೆಂಪುನಗರದ ತಪೋನಂದನ ಉದ್ಯಾನವನ ವಿವಿಧ ಪ್ರಾಣಿಗಳ ಆಕೃತಿಯೊಂದಿಗೆ ಗ್ರಾಮೀಣ ವಾತಾವರಣ ಸೃಷ್ಟಿಯಿಂದಾಗಿ ಸಾರ್ವಜನಿಕರನ್ನು ಆಕರ್ಷಿಸುತ್ತಿದೆ.

ಸಾಂಸ್ಕೃತಿಕ ನಗರಿ ಮೈಸೂರಿನ ಉದ್ಯಾನವನಗಳಲ್ಲಿ ಹಲವು ಉದ್ಯಾನವನಗಳು ನಿರ್ವಹಣೆಯ ಕೊರತೆ ಎದುರಿಸುತ್ತಿವೆ. ಮತ್ತಷ್ಟು ಉದ್ಯಾನವನಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಪೂರಕ ವಾತಾವರಣವೇ ಇಲ್ಲದಂತಾಗಿದೆ. ಇಂತಹ ಸಂದರ್ಭದಲ್ಲಿ ತಪೋನಂದನ ಉದ್ಯಾನದಲ್ಲಿ 50ಕ್ಕೂ ವಿವಿಧ ಆಕೃತಿಗಳು ತಲೆ ಎತ್ತಿದ್ದು, ವಾಯು ವಿಹಾರಿ, ಮಕ್ಕಳು ಹಾಗೂ ಸಾರ್ವಜನಿಕರ ಮನ ಸೂರೆಗೊಳ್ಳುತ್ತಿದೆ. ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನ ಹಿಂಭಾಗ ನಾಲ್ಕು ಎಕರೆ ವಿಸ್ತೀರ್ಣದಲ್ಲಿರುವ ತಪೋನಂದನ ಉದ್ಯಾನವನ್ನು ಒಂದು ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಈ ಹಿಂದೆಯೇ ಆರಂಭಿಸಲಾಗಿತ್ತು. ಇದೀಗ ಅಂತಿಮ ಹಂತಕ್ಕೆ ಅಭಿವೃದ್ಧಿ ಕಾರ್ಯ ತಲುಪಿದ್ದು, ಗ್ರಾಮೀಣ ಸೊಗಡು ಪ್ರತಿಬಿಂಬಿಸುವ ಆಕೃತಿ, ಪ್ರಾಣಿಗಳ ಆಕೃತಿ ನಿರ್ಮಾಣವಾಗಿವೆ. ಉದ್ಘಾಟನೆಗೆ ಸಿದ್ಧವಾಗಿರುವ ಈ ತಪೋನಂದನ ಉದ್ಯಾನ ಈಗಾಗಲೇ ಜನರನ್ನು ತನ್ನ ಸೆಳೆಯುತ್ತಿವೆ. ಅಲ್ಲದೆ, ಉದ್ಯಾನದಲ್ಲಿ ಗ್ರಾಮೀಣ ಪ್ರದೇಶದ ಜನಜೀವನದ ಚಿತ್ರಣದೊಂದಿಗೆ ಕಾಡಿನ ಸೊಬಗನ್ನು ಕಣ್ತುಂಬಿಕೊಳ್ಳುವ ವಾತಾವರಣವನ್ನು ಅಲ್ಲಿ ನಿರ್ಮಿಸಿರುವ ಕಲಾಕೃತಿಗಳು ಸೃಷ್ಟಿಸಿವೆ.

**50ಕ್ಕೂ ಹೆಚ್ಚು ಕಲಾಕೃತಿ :** ತಪೋನಂದನ ಉದ್ಯಾನವನದಲ್ಲಿ ಚಿಣ್ಣರನ್ನು ಸೂಜಿಗಲ್ಲಿನಂತೆ ಸೆಳೆಯುವ ಛೋಟಾ ಭೀಮ್, ಮಿಕ್ಕಿ ಮೌಸ್, ಹುಲಿ, ಸಿಂಹ, ಜಿಂಕೆಗಳ ಕಲಾಕೃತಿಗಳನ್ನು ಸಿಮೆಂಟ್ ಮತ್ತು ಫೈಬರ್‌ನಿಂದ ನಿರ್ಮಿಸಲಾಗಿದೆ. ಅಲ್ಲದೆ, ಗ್ರಾಮೀಣ ಪ್ರದೇಶದ ಸೊಬಗನ್ನು ಬಿಂಬಿಸುವ ಮಹಿಳೆ ಬಾವಿಯಿಂದ ನೀರು ಸೇದುತ್ತಿರುವ, ರೈತರು ಜಮೀನಿನಲ್ಲಿ ಉಳುಮೆ ಮಾಡುತ್ತಿರುವ,

■ 6ನೇ ಪುಟಕ್ಕೆ



ಮೈಸೂರಿನ ಕುವೆಂಪುನಗರದ ತಪೋನಂದನ ಉದ್ಯಾನದಲ್ಲಿ ಪರಿಸರ ಸಂರಕ್ಷಣೆಯೊಂದಿಗೆ ಗ್ರಾಮೀಣ ಜನ ಜೀವನ, ಪ್ರಾಣಿಗಳ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ಈ ಆಕೃತಿಗಳು ನೈಜ ಸ್ವರೂಪದಂತೆ ಕಾಣುತ್ತಿವೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮೀಣ ಸೊಬಗು, ವನ್ಯ ಪ್ರಪಂಚವನ್ನು ವಾಯುವಿಹಾರಿಗಳಿಗೆ ಪರಿಚಯಿಸುವ ನಿಟ್ಟಿನಲ್ಲಿ ಈ ಆಕೃತಿಗಳು ಯಶಸ್ವಿಯಾಗಿವೆ. ಸಾಕಷ್ಟು ಮಂದಿ ಈಗಾಗಲೇ ಆಕೃತಿಗಳ ಮುಂದೆ ಫೋಟೊ ತೆಗೆಸಿಕೊಂಡು ಸಂಭ್ರಮಿಸುತ್ತಿದ್ದಾರೆ. ಉದ್ಯಾನವನದಲ್ಲಿ ಕಲಾ ಲೋಕವೇ ಉದ್ಯಾನದಲ್ಲಿ ನಿರ್ಮಾಣಗೊಂಡು ಜನರನ್ನು ಸೆಳೆಯುತ್ತಿದೆ.



- ಸಿ.ಎಸ್.ದೇವರಾಜು, ಶಿಲ್ಪ ಕಲಾವಿದ, ವಜ್ರಗಿರಿ ಆರ್ಟ್ ವರ್ಲ್ಡ್.



## ಶಾಸಕರ ಅಮಾನತು ಹಿಂಪಡೆಯಲು ಸ್ಪೀಕರ್‌ಗೆ

# ಬಿಜೆಪಿ ಒತ್ತಾಯ

ಬೆಂಗಳೂರು, ಮಾ.23– 18 ಶಾಸಕರನ್ನು ಆರು ತಿಂಗಳ ಕಾಲ ಅಮಾನತುಗೊಳಿಸಿದ ಆದೇಶವನ್ನು ಹಿಂಪಡೆಯುವಂತೆ ಸ್ಪೀಕರ್ ಯು.ಟಿ.ಖಾದರ್ ಅವರನ್ನು ಬಿಜೆಪಿ ಒತ್ತಾಯಿಸಿದೆ.

ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಸ್ಪೀಕರ್ ಅವರ ನಿರ್ಧಾರವನ್ನು ಕಾನೂನುಬಾಹಿರ, ಸಂವಿಧಾನಬಾಹಿರ, ಏಕಪಕ್ಷೀಯ ಎಂದು ಕರೆದರು. ಸ್ಪೀಕರ್ ಶಾಸಕರನ್ನು ಮಾತ್ರವಲ್ಲದೆ ಅವರ ಕ್ಷೇತ್ರದ ಜನರನ್ನು ಸಹ ಅವಮಾನಿಸಿದ್ದಾರೆ ಎಂದು ಅವರು ಹೇಳಿದರು. ಅಮಾನತುಗೊಂಡ ಶಾಸಕರನ್ನು ವಿಧಾನಸಭೆ ಲಾಬಿ ಅಥವಾ ಸಭಾಂಗಣಕ್ಕೆ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಅವರೇನು ಭಯೋತ್ಪಾದಕರೇ ಅಥವಾ ನಕ್ಸಲೀಯರೇ ಎಂದು ಪ್ರಶ್ನಿಸಿದರು. ಶಾಸಕರು ಸ್ಥಾಯಿ ಸಮಿತಿ ಸಭೆಗಳಿಗೆ ಹಾಜರಾಗುವುದನ್ನು ನಿಷೇಧಿಸುವ ಸ್ಪೀಕರ್ ನಿರ್ಧಾರಕ್ಕೂ ಅವರು ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಮಾತನಾಡಿ, ಬಿಜೆಪಿ ಶಾಸಕರು ವಿಧಾನಸಭೆಯ ಗೌರವವನ್ನು ರಕ್ಷಿಸಲು ಹೋರಾಡುತ್ತಿದ್ದಾರೆ. ಆದರೆ ಸ್ಪೀಕರ್ ಹಿಟ್ಲರ್‌ನಂತೆ ವರ್ತಿಸಿದ್ದಾರೆಂದು ಕಿಡಿಕಾರಿದರು. ನಾನು ಇಂದು ಬೆಳಿಗ್ಗೆ ಸ್ಪೀಕರ್ ಅವರೊಂದಿಗೆ ಮಾತನಾಡಿದೆ. ಅವರ ಈ ನಿರ್ಧಾರವು ವಿಧಾನ ಸಭೆಗೆ ಗೌರವವನ್ನು ತರುವುದಿಲ್ಲ ಎಂದು ಅವರಿಗೆ ತಿಳಿಸಿದ್ದೇನೆ. ಮೊದಲ ಬಾರಿಗೆ ಸದಸ್ಯರನ್ನು ಆರು ತಿಂಗಳ ಕಾಲ ಅಮಾನತುಗೊಳಿಸಲಾಗಿದೆ. ಸ್ಪೀಕರ್ ಮತ್ತು ಕಾಂಗ್ರೆಸ್‌ಗೆ ತಿಳುವಳಿಕೆ ಇದೆಯೇ ಎಂದು ವಾಗ್ದಾಳಿ ನಡೆಸಿದರು. ಅಮಾನತುಗೊಂಡ ಶಾಸಕರೊಂದಿಗೆ ದೃಢವಾಗಿ ನಿಲ್ಲುತ್ತೇವೆ. ನಾವೂ ವಿಧಾನಸಭೆಗೆ ಪ್ರವೇಶಿಸುವುದಿಲ್ಲ. ಸಮಿತಿ ಸಭೆಗಳಿಗೆ ಹಾಜರಾಗುವ ಬಗ್ಗೆ ಶೀಘ್ರದಲ್ಲೇ ನಿರ್ಧರಿಸುತ್ತೇವೆ ಎಂದು ತಿಳಿಸಿದರು. ಏಪ್ರಿಲ್ 1 ಅಥವಾ 2 ರಂದು ಸ್ಪೀಕರ್ ಬೆಂಗಳೂರಿಗೆ ಹಿಂತಿರುಗುವವರೆಗೆ ನಾವು ಅವರ ನಿರ್ಧಾರಕ್ಕಾಗಿ ಕಾಯುತ್ತೇವೆ. ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸುತ್ತೇವೆ ಎಂದು ಹೇಳಿದರು.

ಮೈಸೂರು ಮಿತ್ರ



## ಹಾಸನ ಮಿತ್ರ

# ಹಾಸನದಲ್ಲಿ ಉಪಟಳ ನೀಡುತ್ತಿದ್ದ ಕಾಡಾನೆಗಳ ಸೆರೆ: ಗ್ರಾಮಸ್ಥರು ನಿರಾಳ



ಹಾಸನ, ಮಾ.23–ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರು ಸುತ್ತಮುತ್ತ ಅನೇಕ ಗ್ರಾಮಗಳಲ್ಲಿ ತೀವ್ರ ಉಪಟಳ ನೀಡುತ್ತಿದ್ದ ಮೂರು ಕಾಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರ ಮಾಡಲಾಗಿದೆ ಎಂದು ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, ಹಾಸನ ಜಿಲ್ಲೆಯ ಸಕಲೇಶಪುರ, ಬೇಲೂರು ಸುತ್ತಮುತ್ತ ಜನರಿಗೆ ತೀವ್ರ ಉಪಟಳ ನೀಡುತ್ತಿದ್ದ ಆನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆ ಯಶಸ್ವಿಯಾಗಿದೆ. ಸಕಲೇಶಪುರ, ಬೇಲೂರು ಸುತ್ತಮುತ್ತ ಅನೇಕ ಗ್ರಾಮಗಳಿಗೆ ಸಮಸ್ಯೆಯಾಗಿದ್ದ ಆನೆಗಳ ಉಪಟಳ ತಡೆಯಲು ಅರಣ್ಯ ಇಲಾಖೆ ಮಾ.16ರಿಂದ ಕಾರ್ಯಾಚರಣೆ ಆರಂಭಿಸಿತ್ತು. ಇಂದು, ಹೆಬ್ಬನಹಳ್ಳಿ ಗ್ರಾಮದ ಬಳಿ 3ನೇ ಆನೆಯನ್ನೂ ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ಈ ಮೂಲಕ ಕಳೆದ ಒಂದು ವಾರದಲ್ಲಿ ಒಟ್ಟು 3 ಆನೆಗಳನ್ನು ಸೆರೆ ಹಿಡಿಯಲಾಗಿದ್ದು, ಈ ಭಾಗದ ಜನತೆ ನಿಟ್ಟುಸಿರು ಬಿಡುವಂತಾಗಿದೆ. ಪ್ರಾಣದ ಹಂಗು ತೊರೆದು ಪುಂಡಾನೆಗಳ ಸೆರೆ ಕಾರ್ಯಾಚರಣೆ ನಡೆಸಿರುವ ಅರಣ್ಯ ಇಲಾಖೆ ಅಧಿಕಾರಿಗಳು, ಮಾವುತರು, ಪಶುವೈದ್ಯರು, ಮುಂಚೂಣಿ ಕಾರ್ಯಕರ್ತರನ್ನು ಅಭಿನಂದಿಸುತ್ತೇನೆ. ಮಾನವ–ಆನೆ ಸಂಘರ್ಷ ನಿಯಂತ್ರಿಸಲು ಸರ್ಕಾರ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ ಎಂಬುದನ್ನು ಮತ್ತೊಮ್ಮೆ ಪುನರುಚ್ಚರಿಸುತ್ತೇನೆ ಎಂದು ಖಂಡ್ರೆ ತಿಳಿಸಿದ್ದಾರೆ.

# ಹೊಳೆನರಸೀಪುರದಲ್ಲಿ ಮಧ್ಯವರ್ತಿಗಳ ಕಾಟ

### ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ ಆರೋಪ

ಹೊಳೆನರಸೀಪುರ, ಮಾ.23– ಮನೆ, ನಿವೇಶನ, ಪಡಿತರ ಚೀಟಿ, ದರಖಾಸ್ತು ಜಮೀನು, ಖಾತೆ, ಪರವಾನಗಿ, ಇ–ಖಾತೆ, ಕಂದಾಯದಲ್ಲಿ ರಿಯಾಯಿತಿ, ಸರ್ಕಾರದಿಂದ ವೇತನಗಳನ್ನು ಕೊಡಿಸುತ್ತೇವೆಂದು ಹೇಳಿಕೊಂಡು ತಿರುಗುವ ಮಧ್ಯವರ್ತಿಗಳ ಕಾಟ ಹೆಚ್ಚಾಗಿದ್ದು, ಅನೇಕರು ವಂಚನೆಗೆ ಒಳಗಾಗುತ್ತಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಟಿ.ಲಕ್ಷ್ಮಣ ದೂರಿದ್ದಾರೆ.

ತಾಲ್ಲೂಕು ಕಚೇರಿ, ಪುರಸಭೆಗಳಲ್ಲಿ ಮಧ್ಯವರ್ತಿಗಳ ಕಾಟ ಹೆಚ್ಚಾಗಿದ್ದು, ಜನಪ್ರತಿನಿಧಿಗಳ ಹೆಸರನ್ನು ದುರುಪಯೋಗಪಡಿಸಿಕೊಂಡು ಮುಗ್ಧರಿಗೆ ವಂಚಿಸುತ್ತಿದ್ದಾರೆ. ಕೆಲವರು ಮಧ್ಯವರ್ತಿಗಳ ರೀತಿ ಕೆಲಸ ಮಾಡಿಸಿಕೊಟ್ಟು ಹಣವನ್ನೂ ಮಾಡಿಕೊಂಡಿದ್ದಾರೆ. ಕೆಲವರು ಖಾತೆ ಮಾಡಿಸಲು ಕೊಟ್ಟಾಗ, ಅವರಿಗೆ ಸಂಬಂಧ ಇಲ್ಲದಿದ್ದರೂ ಆಕ್ಷೇಪಣೆ ಸಲ್ಲಿಸಿ ಹಣ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದು, ಹಣ ಪಡೆದು ನಂತರ ಆಕ್ಷೇಪಣೆ ಹಿಂಪಡೆಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಇಂತಹ ವಂಚಕರ ಬಲೆಗೆ ಬೀಳದೆ, ಯಾವುದೇ ಕೆಲಸವಿದ್ದರೂ ತಾಲೂಕು ಕಚೇರಿಯಲ್ಲಿ ತಹಶೀಲ್ದಾರರನ್ನು, ಪುರಸಭೆಯಲ್ಲಿ ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಬೇಕು. ಸಕಾಲದಲ್ಲಿ ಅರ್ಜಿ ಸಲ್ಲಿಸಿ ಹಿಂಬರಹ ಪಡೆಯಬೇಕು. ಯಾವುದೇ ಸರ್ಕಾರಿ ನೌಕರರು ಹಣ ಕೇಳಿದರೆ ಲೋಕಾಯುಕ್ತರಿಗೆ ದೂರು ನೀಡಿ ಎಂದು ಸಲಹೆ ನೀಡಿದ್ದಾರೆ.

# ಸ್ಮಾರಕಗಳ ಸಂರಕ್ಷಣಾ ಜಾಗೃತಿ ಅಭಿಯಾನ




ನುಗ್ಗೇಹಳ್ಳಿ, ಮಾ.23– ಗ್ರಾಮದಲ್ಲಿರುವ ವಿಜಯನಗರ ಅರಸರ ಸಾಮಂತರ ಕಾಲದ ದೇವಾಲಯಗಳನ್ನು ಧಾರ್ಮಿಕ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಿದರೆ ಪ್ರವಾಸೋದ್ಯಮಕ್ಕೆ ಮಹತ್ವ ನೀಡಿದಂತಾಗುತ್ತದೆ ಎಂದು ಹಾಸನ ಸರ್ಕಾರಿ ಕಲಾ ವಾಣಿಜ್ಯ ಕಾಲೇಜು ಪ್ರಾಂಶುಪಾಲ ಡಾ.ಎಂ.ಬಿ.ಇರ್ಷಾದ್ ಸರ್ಕಾರಕ್ಕೆ ಒತ್ತಾಯಿಸಿದರು.


ಹೋಬಳಿ ಕೇಂದ್ರದ ಸಮುದಾಯ ಆರೋಗ್ಯ ಕೇಂದ್ರದ ಮುಂಭಾಗ ಹಾಸನ ಸರ್ಕಾರಿ ವಾಣಿಜ್ಯ ಕಾಲೇಜು ಹಾಗೂ ಗ್ರಾಮದ ವಿವಿಧ ಸಂಘ, ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸ್ಮಾರಕಗಳ ಸಂರಕ್ಷಣಾ ಜಾಗೃತಿ ಅಭಿಯಾನದಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಅಭಿಯಾನಕ್ಕೆ ಗ್ರಾಮದ ಪುರವರ್ಗ ಹಿರೇಮಠದ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿ ಮಾತನಾಡಿ, ಸ್ಮಾರಕಗಳ ಸಂರಕ್ಷಣೆಗೆ ಎಲ್ಲರೂ ಸಹಕರಿಸಬೇಕು ಎಂದರು. ಗ್ರಾಮದಲ್ಲಿರುವ ಪುರಾಣ ಪ್ರಸಿದ್ಧ ದೇವಾಲಯಗಳ ಸಂರಕ್ಷಣೆಗೆ ಡಾ.ಎಂ.ಬಿ. ಇರ್ಷಾದ್ ಹೆಚ್ಚು ಸಂಶೋಧನೆ ನಡೆಸಿದ್ದಾರೆ. ಗ್ರಾಮದ ಇತಿಹಾಸ ಜನರಿಗೆ ತಿಳಿಸುವ ಕೆಲಸ ಮಾಡಿದ್ದಾರೆ. ಇದರಿಂದ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ದೇವಾಲಯಗಳ ಬಗ್ಗೆ ಹೆಚ್ಚು ಮಾಹಿತಿ ದೊರಕಿದೆ. ಸರ್ಕಾರ ಈ ಬಗ್ಗೆ ಹೆಚ್ಚು ಗಮನಹರಿಸಬೇಕಿದೆ ಎಂದು ಒತ್ತಾಯಿಸಿದರು. ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಜೆ.ಸೋಮನಾಥ್ ಮಾತನಾಡಿದರು. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯ ಸಮಿತಿ ಅಧ್ಯಕ್ಷೆ ಛಾಯಾ ಕೃಷ್ಣಮೂರ್ತಿ, ಜಿಪಂ ಮಾಜಿ ಅಧ್ಯಕ್ಷೆ ಮಹದೇವಮ್ಮ ಶಂಕರ್, ಅರ್ಚಕ ರಾಜು, ಕಾಲೇಜು ಪ್ರಾಧ್ಯಾಪಕರಾದ ಗೋಪಾಲ್, ಬಸವೇಗೌಡ, ಲಿಂಗಮೂರ್ತಿ, ಪ್ರಮುಖರಾದ ರಮೇಶ್, ಚನ್ನೇಗೌಡ ಇತರರು ಇದ್ದರು.

## ಅಭಿನಂದನೆ...



ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ಅಧ್ಯಕ್ಷ ಕೆ.ಟಿ.ಮನು, ಉಪಾಧ್ಯಕ್ಷೆ ಶ್ರೀಮತಿ ಮಂಜುಳಾ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ನಿರ್ದೇಶಕರಾದ ರಾಜು ಪಟೇಲ್, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘದ ನಿರ್ದೇಶಕ ಒಂಟಿಕೊಪ್ಪಲ್ ಗುರುರಾಜ್, ಕೆ.ಜಿ.ಕೊಪ್ಪಲ್ ದೀಪು, ನಿಂಗೇಗೌಡ ಇತರರಿದ್ದರು.




ಮೈಸೂರು ಚಾಮುಂಡಿಬೆಟ್ಟದ ಪಾದದಲ್ಲಿರುವ ಆಟೋ ನಿಲ್ದಾಣದಲ್ಲಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ 20 ಸಾವಿರ ರೂ.ವೆಚ್ಚದಲ್ಲಿ ಟೈಲ್ಸ್‌ಗಳನ್ನು ಹಾಕಿಸಿಕೊಟ್ಟಿದ್ದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಬೆಟ್ಟಪಾದದ ಅಂಯ್ಯಪ್ಪಸ್ವಾಮಿ ದೇವಾಲಯ ಗುರುಗಳಾದ ರಾಮಣ್ಣಸ್ವಾಮಿ ಸನ್ಮಾನಿಸಿದರು. ಈ ವೇಳೆ ಡಾ.ರೂಪ, ಸುರೇಶ್, ಶಿವುನಾಯಕ್, ಸ್ವಾಮಿ, ಚಾಮುಂಡಿಪುರಂ ರಾಮಣ್ಣ, ಕೃಷ್ಣ ಮತ್ತು ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

# ಬಿಸಿಲಿನ ತಾಪ ಹೆಚ್ಚಳ; ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚನೆ




ಬೆಂಗಳೂರು, ಮಾ. 23– ಭಾರತ ಹವಾಮಾನ ಇಲಾಖೆಯು ಮಾರ್ಚ್‌ನಿಂದ ಮೇವರೆಗೆ ರಾಜ್ಯದ ಹಲವೆಡೆ ಅತೀ ಹೆಚ್ಚು ತಾಪಮಾನವಿರುತ್ತದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಕಂದಾಯ ಇಲಾಖೆ, ಅತಿ ಹೆಚ್ಚು ತಾಪಮಾನದಿಂದ ಉಂಟಾಗಬಹುದಾದ ಪ್ರತೀಕೂಲ ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿದೆ.

ಅತಿ ಹೆಚ್ಚು ತಾಪಮಾನದ ಹಿನ್ನೆಲೆಯಲ್ಲಿ ಮಧ್ಯಾಹ್ನ 12ರಿಂದ 3 ಗಂಟೆವರೆಗೆ ಬಿಸಿಲಿನಲ್ಲಿ ಹೊರ ಹೋಗುವುದನ್ನು ತಪ್ಪಿಸಬೇಕು. ಈ ಅವಧಿಯಲ್ಲಿ ಶ್ರಮದಾಯಕ ಕೆಲಸ ಮಾಡಬಾರದು. ಬಾಯಾರಿಕೆ ಇಲ್ಲದಿದ್ದರೂ ಸಾಕಷ್ಟು ನೀರು ಕುಡಿಯಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣೆಗಾಗಿ ಕನ್ನಡಕ, ಛತ್ರಿ ಅಥವಾ ಟೋಪಿ, ಬೂಟುಗಳು ಇಲ್ಲವೇ ಚಪ್ಪಲಿ ಬಳಸಬೇಕು.

ಬೆಳಗ್ಗೆ 11ರಿಂದ ಸಂಜೆ 4 ಗಂಟೆವರೆಗೆ ಹೊರಾಂಗಣ ಸಭೆಗಳು ಅಥವಾ ಚಟುವಟಿಕೆಗಳು ನಡೆಯುವ ಪ್ರದೇಶದಲ್ಲಿ ಸಾರ್ವಜನಿಕರಿಗೆ ಬಿಸಿಲಿನಿಂದ ರಕ್ಷಣೆ ನೀಡಲು ಅಗತ್ಯ ಶಾಮಿಯಾನ ಇಲ್ಲವೇ ಪೆಂಡಾಲ್ ವ್ಯವಸ್ಥೆ ಮಾಡಬೇಕು. ಸಭಿಕರಿಗೆ ಉತ್ತಮ ಗಾಳಿ ಬರುವಂತೆ ನೋಡಿಕೊಳ್ಳುವುದು ಹಾಗೂ ಕಡ್ಡಾಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ತಿಳಿಸಲಾಗಿದೆ.

ಪ್ರಯಾಣ ಮಾಡುವಾಗ ಜೊತೆಯಲ್ಲಿ ನೀರು ಕೊಂಡೊಯ್ಯಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯ ಸೇವಿಸಬಾರದು. ಸಾಧ್ಯವಾದಷ್ಟೂ ಬಿಸಿ ಆಹಾರ ಸೇವಿಸಬೇಕು. ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕುಪ್ರಾಣಿಗಳನ್ನು ಬಿಡಬಾರದು. ಮೂರ್ಛೆ ಅಥವಾ ಅನಾರೋಗ್ಯ ಅನಿಸಿದರೆ ತಕ್ಷಣವೇ ವೈದ್ಯರನ್ನು ಭೇಟಿ ಮಾಡಬೇಕು.

ನಿಂಬೆ ನೀರು, ಮಜ್ಜಿಗೆ ಮುಂತಾದ ಮನೆಯಲ್ಲಿ ತಯಾರಿಸಿದ ಪಾನೀಯಗಳು ಮತ್ತು ಓಆರ್‌ಎಸ್ ಸೇವಿಸುವುದು. ಹೆಚ್ಚಿನ ನೀರಿನಂಶ ಹೊಂದಿರುವ ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಸ್, ಸೌತೇಕಾಯಿ ಹಾಗೂ ಎಳನೀರು ಹೆಚ್ಚಾಗಿ ಸೇವಿಸಬೇಕು. ಸಾಕುಪ್ರಾಣಿಗಳನ್ನು ನೆರಳಿನಲ್ಲಿರಿಸಿ ಅವುಗಳಿಗೆ ಸಾಕಷ್ಟು ನೀರು ಒದಗಿಸುವುದು. ಮನೆಯನ್ನು ತಂಪಾಗಿರಿಸಲು ಪರದೆಗಳು, ಷಟರ್‌ಗಳು ಅಥವಾ ಸನ್‌ಶೇಡ್‌ಗಳನ್ನು ಬಳಸುವುದು.

### ಅನಾರೋಗ್ಯ ಲಕ್ಷಣ

**ಹೆಚ್ಚು ತಾಪಮಾನದಿಂದ ಶಾಖ ಸೆಳೆತ (ಹೀಟ್ ಕ್ರಾಂಪ್ಸ್) ಮತ್ತು ಮೂರ್ಛೆ ಹಾಗೂ 102 ಡಿಗ್ರಿ ಜ್ವರ, ಶಾಖದ ಬಳಲಿಕೆಯಿಂದ ಆಯಾಸ, ತಲೆ ತಿರುಗುವಿಕೆ, ತಲೆನೋವು, ವಾಕರಿಕೆ, ವಾಂತಿ, ಸ್ನಾಯುಸೆಳೆತ ಮತ್ತು ಬೆವರುವುದು ಉಂಟಾಗುತ್ತದೆ. ಶಾಖಾಘಾತದಿಂದ (ಸನ್ ಸ್ಟ್ರೋಕ್) ದೇಹದ ಉಷ್ಣತೆ 104 ಡಿಗ್ರಿ ಅಥವಾ ಅದಕ್ಕಿಂತ ಹೆಚ್ಚಾಗುವುದು. ಉಸಿರಾಟದಲ್ಲಿ ವ್ಯತ್ಯಯವಾಗಿ ಪ್ರಜ್ಞೆ ತಪ್ಪುವುದು.**

### ಪ್ರಥಮ ಚಿಕಿತ್ಸೆ

ಅತೀ ಹೆಚ್ಚು ತಾಪಮಾನದಿಂದ ಅನಾರೋಗ್ಯಕ್ಕೀಡಾದ ವ್ಯಕ್ತಿಯನ್ನು ನೆರಳಿನಲ್ಲಿ ತಂಪಾದ ಸ್ಥಳಕ್ಕೆ ಸ್ಥಳಾಂತರಿಸುವುದು. ಒದ್ದೆಯಾದ ಬಟ್ಟೆಯಿಂದ ಮೈ ಒರೆಸುವುದು ಹಾಗೂ ಉಷ್ಣತೆ ತಗ್ಗಿಸಲು ತಲೆಯ ಮೇಲೆ ನೀರನ್ನು ಹಾಕುವುದು. ವ್ಯಕ್ತಿ ಪ್ರಜ್ಞೆ ಹೊಂದಿದ್ದರೆ ನೀರು, ನಿಂಬೆ ರಸ ಅಥವಾ ಓಆರ್‌ಎಸ್ ನೀಡುವುದು. ವ್ಯಕ್ತಿಗೆ ತಂಪಾದ ಗಾಳಿ ವ್ಯವಸ್ಥೆ ಮಾಡುವುದು. ರೋಗ ಲಕ್ಷಣ ಉಲ್ಬಣಗೊಂಡರೆ ಅಥವಾ ವ್ಯಕ್ತಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು.

# ಮೈಸೂರು ಅಥ್ಲೆಟಿಕ್ ಕ್ಲಬ್‌ನಿಂದ ದತ್ತಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮುಖ್ಯ ವರದಿಗಾರ ಎಸ್.ಟಿ.ರವಿಕುಮಾರ್ ಹಾಗೂ ವಿಜಯವಾಣಿ ಮೈಸೂರು ಬ್ಯೂರೋ ಮುಖ್ಯಸ್ಥ ಎಂ.ಆರ್.ಸತ್ಯನಾರಾಯಣ ಅವರನ್ನು ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಮಾ.23(ಆರ್‌ಕೆ)– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ವಾರ್ಷಿಕ ದತ್ತಿ ಪ್ರಶಸ್ತಿ ಪುರಸ್ಕೃತರಾದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮುಖ್ಯ ವರದಿಗಾರ ಎಸ್.ಟಿ.ರವಿಕುಮಾರ್ ಹಾಗೂ ವಿಜಯವಾಣಿ ಮೈಸೂರು ಬ್ಯೂರೋ ಮುಖ್ಯಸ್ಥ ಎಂ.ಆರ್.ಸತ್ಯನಾರಾಯಣ ಅವರನ್ನು ಮೈಸೂರು ಅಥ್ಲೆಟಿಕ್ಸ್ ಕ್ಲಬ್ (ಎಂಎಸಿ) ವತಿಯಿಂದ ಇಂದು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಗುರು ರೆಸಿಡೆನ್ಸಿ ಹೋಟೆಲ್ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿದ್ದ ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಪಾದಕಿ, ಪದ್ಮಶ್ರೀ ಪುರಸ್ಕೃತ ಜಯಲಕ್ಷ್ಮಿ ಅವರು ದತ್ತಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತರನ್ನು ಸನ್ಮಾನಿಸಿದರು. ಸುಧರ್ಮಾ ಪತ್ರಿಕೆ ವರದಿಗಾರ ಶ್ರೀಧರ್, ಮೈಸೂರು ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ.ಕೃಷ್ಣ, ಉಪಾಧ್ಯಕ್ಷ ಡಾ. ಜೈನ್‌ಸಿಂಗ್ ರಾಜ್ ಪುರೋಹಿತ್, ಕಾರ್ಯದರ್ಶಿ ಮಾದಪ್ಪ ಯೋಗೇಂದ್ರ, ಜಂಟಿ ಕಾರ್ಯದರ್ಶಿಗಳಾದ ಮಹದೇವಯ್ಯ, ಹೆಚ್.ಆರ್. ರಾಮಸ್ವಾಮಿ, ಗುರು ರೆಸಿಡೆನ್ಸಿ ಹೋಟೆಲ್ ಮಾಲೀಕ ಗೋಪಾಲಕೃಷ್ಣ, ಡೆಕ್ಕನ್ ಹೆರಾಲ್ಡ್ ಪತ್ರಿಕೆ ಮೈಸೂರು ಬ್ಯೂರೋ ಮುಖ್ಯಸ್ಥ ಸತೀಶ್‌ಕುಮಾರ್, ಪ್ರಜಾವಾಣಿ ಬ್ಯೂರೋ ಮುಖ್ಯಸ್ಥ ನರಸಿಂಹಮೂರ್ತಿ, ಹಿರಿಯ ಕ್ರೀಡಾ ವರದಿಗಾರ ಸಿ.ಕೆ.ಮುರಳೀಧರ್, ವಿಜಯವಾಣಿ ಪತ್ರಿಕೆ ಹಿರಿಯ ವರದಿಗಾರ ಆರ್.ಕೃಷ್ಣ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಉಪಾಧ್ಯಕ್ಷ ಆನಂದ ಶೆಟ್ಟಿ, ಚಂದ್ರಶೇಖರ್, ಜವರಪ್ಪ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಭಾರತೀಯ ಭಾಷೆಗಳ ಅಭಿವೃದ್ಧಿಗೆ ತಂತ್ರಜ್ಞಾನದ ನೆರವು ಪಡೆಯಿರಿ

### ಭಾಷಾ ವಿಜ್ಞಾನಿ ಪ್ರೊ.ದೈವಸುಂದರಂ ನಾಯರ್ ಸಲಹೆ

ಮೈಸೂರು, ಮಾ.23(ಆರ್‌ಕೆ)–ಭಾರತೀಯ ಭಾಷೆಗಳ ಬೆಳವಣಿಗೆಗೆ ಕೃತಕ ಬುದ್ಧಿಮತ್ತೆಯಂತಹ ಆಧುನಿಕ ತಂತ್ರಜ್ಞಾನದ ನೆರವು ಪಡೆಯುವಂತೆ ಖ್ಯಾತ ಭಾಷಾ ವಿಜ್ಞಾನಿ ಪ್ರೊ.ದೈವಸುಂದರಂ ನಾಯರ್ ಭಾಷಾ ವಿಜ್ಞಾನಿಗಳು ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದಲ್ಲಿ 'ಕೃತಕ ಬುದ್ಧಿಮತ್ತೆ ಮಾನದಂಡಗಳು' ಕುರಿತ ಎರಡು ದಿನಗಳ ಸಮ್ಮೇಳನದಲ್ಲಿ ಸಂಸ್ಥಾನ ಅಭಿವೃದ್ಧಿಪಡಿಸಿರುವ 5 ವೆಬ್ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿ ಮಾತನಾಡಿ ಅವರು, 5 ದಶಕಗಳಲ್ಲಿ ಭಾಷಾ ವಿಜ್ಞಾನ ಬೆಳೆದಿದೆ. ಅದನ್ನು ಮುಂದಿನ ಪೀಳಿಗೆಗೆ ನೀಡಲು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದರು. ಭಾಷಾ ಸಂಪತ್ತನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಹಾಗೂ ನಿರೂಪಿಸಲು ಸಂಶೋಧಕರು, ವಿದ್ಯಾರ್ಥಿಗಳು ತಾಂತ್ರಿಕ ನೆರವು ಪಡೆಯಬೇಕು. ಆಗ ಮಾತ್ರ ಸೃಜನಶೀಲತೆ ಬರಲು ಸಾಧ್ಯ. ನಮ್ಮ ನಿಖರವಾದ ದತ್ತಾಂಶವನ್ನು ಸಂರಕ್ಷಿಸುವುದೂ ಅತ್ಯಗತ್ಯ ಎಂದರು. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪು ಸ್ವಾಮಿ, ಪ್ರೊ.ಪಿ.ಆರ್. ಧನಂಜಯ ಹಾಗೂ ಇತರರು ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದರು.

# ತಮಿಳುನಾಡಿಗೆ ಸಾಲ ತೀರಿಸುವ ಡ್ಯಾಂ ಕಬಿನಿ

### ನೀರಾವರಿ ಇಲಾಖೆ ಅಧೀಕ್ಷಕ ಇಂಜಿನಿಯರ್ ಕೆ.ಮಹೇಶ್ ಅಭಿಮತ

ಮೈಸೂರು, ಮಾ.23(ಎಸ್‌ಪಿಎನ್)– ಕಬಿನಿ ಜಲಾಶಯದಲ್ಲಿ 19 ಟಿಎಂಸಿ ನೀರು ಸಂಗ್ರಹವಾಗಬಹುದು. ಈ ಡ್ಯಾಂ ತಮಿಳುನಾಡಿಗೆ ತುರ್ತು ಸಂದರ್ಭದಲ್ಲಿ ನೀರು ಪೂರೈಕೆ ಮಾಡುವ ಮೂಲಕ ಸಾಲ ತೀರಿಸುವ ಡ್ಯಾಂ ಎಂದೇ ಖ್ಯಾತಿ ಪಡೆದಿದೆ ಎಂದು ಮೈಸೂರು ಕಬಿನಿ ಮತ್ತು ವರುಣ ವಲಯದ ಅಧೀಕ್ಷಕ ಇಂಜಿನಿಯರ್ ಕೆ.ಮಹೇಶ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ವತಿಯಿಂದ ನಡೆದ 'ವರ್ಲ್ಡ್ ವಾಟರ್ ಡೇ 2025' ಅಂಗವಾಗಿ ನಡೆದ ಹಿಮನದಿ ಸಂರಕ್ಷಣೆ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾವೇರಿ ನೀರಾವರಿ ನಿಗಮ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸರ್.ಎಂ.ವಿಶ್ವೇಶ್ವರಯ್ಯ ನೀರಾವರಿ ನಿಗಮ ಹಾಗೂ ಕೃಷ್ಣ ಜಲಭಾಗ್ಯ ನಿಗಮದ ವತಿಯಿಂದ ಕೃಷಿ ಜಮೀನು, ಕೈಗಾರಿಕೆ, ಪಟ್ಟಣ ಪ್ರದೇಶಗಳಲ್ಲಿನ ಮನೆಗಳಿಗೆ ಕುಡಿಯುವ ನೀರು ಸೇರಿದಂತೆ ಇತರೆ ಚಟುವಟಿಕೆಗಳಿಗೆ ನದಿ ನೀರನ್ನು ಬಳಸಲಾಗುತ್ತಿದೆ ಎಂದು ಹೇಳಿದರು.

ಕಾವೇರಿ ನೀರಾವರಿ ನಿಗಮದಡಿಯಲ್ಲಿ ಬರುವ ಕಾವೇರಿ ನದಿ ಪ್ರದೇಶದಲ್ಲಿ ಹಲವು ನೀರಾವರಿ ಯೋಜನೆಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ಲಕ್ಷಾಂತರ ಎಕರೆ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳಿಗೆ ನೀರು ಸರಬರಾಜಿನ ನಿರ್ವಹಣೆ ಮಾಡುತ್ತಿದೆ ಎಂದರು.

ಬೇಸಿಗೆಕಾಲದಲ್ಲಿ ಪ್ರತಿಯೊಂದು ಹನಿ ನೀರು ಉಳಿಸುವಲ್ಲಿ ಸಾರ್ವಜನಿಕ ಪಾತ್ರ ದೊಡ್ಡದಿದೆ. ಕೃಷಿ ಚಟುವಟಿಕೆಗಳಲ್ಲಿ ಹನಿ ನೀರಾವರಿ ಮೂಲಕ ನೀರು ಬಳಸಿ, ನಂತರ ನೀರು ಉಳಿಸಲು ಪ್ರೋತ್ಸಾಹಿಸಬೇಕು. ಅಲ್ಲದೆ, ಕೃಷಿ ಚಟುವಟಿಕೆಗಳಿಗೆ ಹೇಮಾವತಿ, ಕಾವೇರಿ, ಹಾರಂಗಿ, ಕಬಿನಿ, ಸುವರ್ಣಾವತಿ ಹಾಗೂ ತಾರಕ, ನುಗು ಜಲಾನಯನ ಪ್ರದೇಶದಲ್ಲಿ ಲಕ್ಷಾಂತರ ಕೃಷಿ ಜಮೀನು ನೀರು ಪೂರೈಕೆ ಯಾಗುತ್ತಿದೆ ಎಂದರು. ವೇದಿಕೆಯಲ್ಲಿ ಈರ ಡೀಮ್ಡ್ ವಿವಿ ವಿಶ್ರಾಂತ ಕುಲಪತಿ ಡಾ.ಡಿ.ಪಿ.ಗಿರಿಧರ್, ಎಂ.ರವಿ, ಎನ್.ಎಸ್.ಮಹದೇವ ಸ್ವಾಮಿ, ಬಿ.ಎಸ್.ಪ್ರಭಾಕರ್, ಎಂ.ಕೆ.ನಂಜಯ್ಯ, ಡಾ.ಮೋಹನ್ ಕೃಷ್ಣ ಇತರರಿದ್ದರು.



ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ವರ್ಲ್ಡ್ ವಾಟರ್ ಡೇ 2025' ಅನ್ನು ಮೈಸೂರು ಕಬಿನಿ ಮತ್ತು ವರುಣ ವಲಯದ ಅಧೀಕ್ಷಕ ಇಂಜಿನಿಯರ್ ಕೆ.ಮಹೇಶ್ ಉದ್ಘಾಟಿಸಿದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**24.03.2025 ಸೋಮವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ**

■ **ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** : ವಿಶ್ವ ಕ್ಷಯರೋಗ ದಿನಾಚರಣೆ, ಬೆಳಗ್ಗೆ 8 ಗಂಟೆಗೆ 'ಹೌದು ನಾವು ಕ್ಷಯರೋಗವನ್ನು ಕೊನೆಗಾಣಿಸಬಹುದು' ಘೋಷವಾಕ್ಯದಡಿ ಜಾಥಾ ಕಾರ್ಯಕ್ರಮ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಅರಮನೆ, ಬೆಳಗ್ಗೆ 10 ಗಂಟೆಗೆ ಜೆ.ಕೆ.ಮೈದಾನದಲ್ಲಿರುವ ಅಮೃತ ಮಹೋತ್ಸವ ಭವನದಲ್ಲಿ ವೇದಿಕೆ ಕಾರ್ಯಕ್ರಮ, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೌರವ ಉಪಸ್ಥಿತಿ: ಸಚಿವರಾದ ಕೆ.ವೆಂಕಟೇಶ್, ದಿನೇಶ್ ಗುಂಡೂರಾವ್, ಶಾಸಕರಾದ ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿ: ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್‌ಬೋಸ್

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಒಬೆಸಿಟಿ (ತೂಕ ಇಳಿಸುವಿಕೆ) ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಮೃತಾಂಶು ಟ್ರಸ್ಟ್, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆ.ಆರ್.ಆಸ್ಪತ್ರೆ, ಮೈಸೂರು:** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಲೆನ್ಸ್ ಅಳವಡಿಕೆ, ಸ್ಥಳ: 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ವಿಶ್ವ ಜಲ ದಿನಾಚರಣೆ–2025 ಕಾರ್ಯಕ್ರಮ, ಸಾನ್ನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ವಾಸುದೇವ್ ಮಹಾರಾಜ್ ಫೌಂಡೇಷನ್:** ಶ್ರೀ ವಾಸುದೇವ್ ಮಹಾರಾಜರ 88ನೇ ಜಯಂತ್ಯುತ್ಸವ ಅಂಗವಾಗಿ ಶ್ರೀ ವಾಸುದೇವ್ ಮಹಾರಾಜ್ ಸದ್ಭಾವನಾ ಪ್ರಶಸ್ತಿ–2025 ಪ್ರದಾನ ಸಮಾರಂಭ, ಉದ್ಘಾಟನೆ: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಪ್ರಶಸ್ತಿ ಪ್ರದಾನ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

## ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಗಜಾನನ ಶರ್ಮ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ–ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರು, ಚಿತ್ರ ಸಾಹಿತಿಗಳಾದ ಸಿ.ವಿ.ಶಿವಶಂಕರ್ ಅವರೊಂದಿಗೆ ಎಂ.ಶಂಕರಪ್ಪ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಉಷಾ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ. ಮತ್ತು ಚಿನ್ಮಯಿ. ಕೆ.ಎಸ್., 12.05–ವನಿತಾ ವಿಹಾರ, ಕಥೆ–ಬಿಡುಗಡೆ–ಪ್ರಸ್ತುತಿ: ಡಾ.ವೀಣಾ ಶಾಂತೇಶ್ವರ, ಮನಸಿನ ದೊಂಬರಾಟ. ಮಾತನಾಡುತ್ತಾರೆ ದೀಪಿಕಾ ಚಾಟೆ, ಪ್ರಸ್ತುತಿ: ಮಂಜುಳಾ ಪುರಾಣಿಕ್, 12.35–ದೇವರನಾಮ–ಡಿ.ಪುರುಷೋತ್ತಮ್, 12.45–ನಮ್ಮ ಆರೋಗ್ಯ–ವಿಶ್ವ ಕ್ಷಯರೋಗ ದಿನಾಚರಣೆ ಸಂದರ್ಭದಲ್ಲಿ ಕ್ಷಯ ಮುಕ್ತ ಭಾರತ, ಕ್ಷಯಮುಕ್ತ ಕರ್ನಾಟಕ ಕುರಿತು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಜಯಂತ್ ಎಂ.ಎಸ್. ಹಾಗೂ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ರೆಸ್ಪಿರೇಟರಿ ಮೆಡಿಸನ್ ವಿಭಾಗದ ಮುಖ್ಯಸ್ಥರಾದ ಡಾ.ಸಿ.ಪ್ರಶಾಂತ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಬೀದಿಬದಿಯ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ ಕುರಿತು ಮಾತನಾಡುತ್ತಾರೆ ಎಸ್.ವಿಶ್ವನಾಥಭಟ್, 1.20–ಭಾವಗೀತೆಗಳು–ಬಿ.ಜಿ.ವಿನುತ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್‌ಗುಡಿ ಜಿ. ಜೆ.ಆರ್.ಕೃಷ್ಣನ್ ಮತ್ತು ವಿಜಯಲಕ್ಷ್ಮಿ ಯುಗಳ ವೈಯೋಲಿನ್ ವಾದನ, 4.00– ಮಹಿಳಾರಂಗ–ಹೀಗಿದೆ ನೋಡಿ ನಮ್ ಜೋಡಿ, ಚಾರಣ ದಂಪತಿ ವೈದ್ಯನಾಥನ್ ಹಾಗೂ ವಿಜಯಲಕ್ಷ್ಮಿ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ–ಪ್ರಸ್ತುತಿ: ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಸಮಸ್ಯಾತ್ಮಕ ಮಣ್ಣಿನ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ, ಮಂಡ್ಯದ ವಿ.ಸಿ.ಫಾರಂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಅತೀಫಾ ಮುನಾವರಿ ಮತ್ತು ಮಂಡ್ಯ ತಾಲೂಕು ಜಯಪುರ ಗ್ರಾಮದ ಜೆ.ಕೆ.ಬಸವರಾಜ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಸಂಸತ್ ಸಮೀಕ್ಷಾ, 8.15–ಯುವವಾಣಿ–ಯುವಜನರು ಮತ್ತು ಪರಿಸರ ಪ್ರಜ್ಞೆ ಕುರಿತು ಮಾತುಕತೆ, ಭಾಗವಹಿಸುತ್ತಾರೆ–ಮೈಸೂರಿನ ಯುವರಾಜ ಕಾಲೇಜಿನ ವಿದ್ಯಾರ್ಥಿಗಳಾದ ಅಂಶು ಹೆಗಡೆ, ಚಂದನಾ. ಸಿ, ಧನುಷ್. ಡಿ.ಕೆ, ಮಾನಸಾ ಮತ್ತು ಸೃಜನ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ನೈವೇಲಿ ಸಂತಾನಗೋಪಾಲನ್–ಹಾಡುಗಾರಿಕೆ, 10.00–ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ:** ಏಳನೇ ಘಟಿಕೋತ್ಸವ, ದಿವ್ಯ ಸಾನ್ನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳು, ಮುಖ್ಯ ಅತಿಥಿ: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಉಪಸ್ಥಿತರು: ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್, ಸ್ಥಳ: ವಿವಿ ಆವರಣ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ಸಂಜೆ 4 ಗಂಟೆಗೆ.

■ **ಶ್ರೀ ಕೃಷ್ಣ ಗಾನಸಭಾ, ಸಂಗೀತ ಪ್ರೇಮಿಗಳ ಸಭಾ:** ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರ ಜಯಂತಿ ಮಹೋತ್ಸವ, ಸಂಗೀತ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾ ಭವನ, ಗೋಕುಲಂ, ಸಂಜೆ 6 ಗಂಟೆಗೆ.

### ಮೈಸೂರಲ್ಲಿ ಶರಣ ಸಾಹಿತ್ಯ ಸಮ್ಮೇಳನ

# ಅನುಭವ ಮಂಟಪದಲ್ಲಿ ನಡೆಯುತ್ತಿದ್ದಂತಹ ಚರ್ಚೆಗಳು ಸಂಸತ್ತು, ಶಾಸನ ಸಭೆಗಳಲ್ಲಿ ನಡೆಯುತ್ತಿಲ್ಲ

### ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ವಿಷಾದ

ಮೈಸೂರು, ಮಾ.23(ಎಂಟಿವೈ)– ಬಸವಣ್ಣರ ಕಾಲದ 12ನೇ ಶತಮಾನದ ಅನುಭವ ಮಂಟಪಕ್ಕೆ ಹೋಲಿಸುವ ಸಂಸತ್ತು ಹಾಗೂ ರಾಜ್ಯದ ಶಾಸನ ಸಭೆಗಳಲ್ಲಿ ಮೌಲ್ಯಯುತ ಚರ್ಚೆ ನಡೆಯುತ್ತಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಷಾದಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕ ಹಾಗೂ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಶರಣ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಸನ ಸಭೆಗಳಲ್ಲಿ ಸಮಾಜ ಅಭಿವೃದ್ಧಿಗೆ ಪೂರಕವಾದ ವಿಷಯ ಚರ್ಚೆಯಾಗದೆ ಉಪಯೋಗಕ್ಕೆ ಬಾರದ ಕಳಪೆ ವಿಚಾರಗಳು ಚರ್ಚೆಯಾಗುತ್ತಿದೆ. ಅನುಭವ ಮಂಟಪದಲ್ಲಿ ನಡೆಯುತ್ತಿದ್ದಂತಹ ಚರ್ಚೆಗಳು ಸಂಸತ್ ಹಾಗೂ ರಾಜ್ಯ ಸಭೆಗಳಲ್ಲಿ ಚರ್ಚೆಗಳು ನಡೆಯುತ್ತಿಲ್ಲ. ಪಾರ್ಲಿಮೆಂಟ್ ಹಾಗೂ ರಾಜ್ಯದ ಶಾಸನಸಭೆಯನ್ನು 12ನೇ ಶತಮಾನದ ಅನುಭವ ಮಂಟಪಕ್ಕೆ ಹೋಲಿಕೆ ಮಾಡಲಾಗುತ್ತದೆ. ಅನುಭವ ಮಂಟಪದ ಪ್ರೇರಣೆಯಿಂದಲೇ ಶಾಸನ ಸಭೆಗಳು ರೂಪುಗೊಂಡಿವೆ. ಆದರೆ ಈಗ ಪಾರ್ಲಿಮೆಂಟ್ ಹಾಗೂ ಶಾಸನ ಸಭೆಯಲ್ಲಿ ಅಂತಹ ಚರ್ಚೆ ನಡೆಯುತ್ತಿಲ್ಲ. ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭುವಿನಂತಹವರು ಈಗ ಯಾರೂ ಇಲ್ಲ. ಹಿಂದಿನ ದಶಕಗಳಲ್ಲಿ ಅಂತಹ ರಾಜಕಾರಣಿಗಳು, ರಾಜಕೀಯ ನಾಯಕರು ಇದ್ದರು. ಆದರೆ ಈಗ ಅಂತಹವರನ್ನು ಕಾಣುತ್ತಿಲ್ಲ. ಮೌಲ್ಯ ಕುಸಿಯುತ್ತಿದೆ. ಇದರಿಂದ ಸಾಂಸ್ಕೃತಿಕ ದಿವಾಳಿತನ ಎದ್ದು ಕಾಣುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ನಾಡಿನಲ್ಲಿ ಸುಖೀ ರಾಜ್ಯದ ಕಲ್ಪನೆ ಸಾಕಾರಗೊಳ್ಳಲು, ಸಮ ಸಮಾಜ ನಿರ್ಮಾಣ ಮಾಡಲು, ಮಾನವೀಯತೆಯ ವಾತಾವರಣ ಸೃಷ್ಟಿಯಾಗಬೇಕಾದರೆ ಸ್ವಾತಂತ್ರ್ಯ ಚಳವಳಿಯ ಮಾದರಿಯಲ್ಲಿ ಶರಣ ಸಾಹಿತ್ಯ ಚಳವಳಿ ನಡೆಯಬೇಕು. ಏಕೆಂದರೆ ಶರಣರು ಜಾತಿ ವ್ಯವಸ್ಥೆಯ ವಿರುದ್ಧವಾಗಿದ್ದರು. ಕಾಯಕ ತತ್ವವನ್ನು ಬೋಧಿಸಿದ್ದರು. ಮಹಿಳಾ ಸಮಾನತೆಯನ್ನು ಸಾರಿದ್ದರು. ಆದ್ದರಿಂದ ಶರಣ ಸಾಹಿತ್ಯ ಚಳವಳಿಯನ್ನು ಮತ್ತೆ ಆರಂಭಿಸಬೇಕು. ಸಂವಿಧಾನದ ಆಶಯವನ್ನು ಎತ್ತಿ ಹಿಡಿಯುವಂತಹ ಚಳವಳಿಯನ್ನು ಸಮಾಜ ಕಲ್ಯಾಣ ಇಲಾಖೆ ಸಹಕಾರದಿಂದಲೇ ರೂಪುಗೊಳಿಸುತ್ತೇವೆ ಎನ್ನುವುದಾದರೆ ಅದಕ್ಕೆ ತಾವು ಸದಾಕಾಲ ಸಹಕಾರ ನೀಡುತ್ತೇವೆ. ಇತ್ತೀಚೆಗೆ ನಡೆದ ಸಂವಿಧಾನ ಜಾಗೃತಿ ಮಾನವ ಸರಪಳಿ ಕಾರ್ಯಕ್ರಮವ ವಿಶ್ವದೆಲ್ಲೆಡೆ ಗಮನ ಸೆಳೆದಿದೆ. ಆದದ ಬಳಿಕ ಎಲ್ಲರಲ್ಲೂ ಸಂವಿಧಾನದ ಬಗ್ಗೆ ಅರಿವು ಉಂಟಾಗಿದೆ. ಇದೇ ಮಾದರಿಯಲ್ಲಿ ಶರಣ ಸಾಹಿತ್ಯ ಚಳವಳಿಯನ್ನು ರೂಪಿಸುವ ಅಗತ್ಯವಿದೆ. ಬಸವಣ್ಣ, ಶರಣರ ಸಾಹಿತ್ಯ, ಚಳವಳಿ ಯಾರ ಸ್ವತ್ತಲ್ಲ. ಅದು ಮಾನವೀಯತೆಯ ಸ್ವತ್ತು. ದೇಶದ ಸ್ವತ್ತು. ಈ ಹಿನ್ನೆಲೆಯಲ್ಲಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಶರಣ ಸಾಹಿತ್ಯವು ಎಲ್ಲರಿಗೂ ಪ್ರೇರಣೆಯಾಗಬೇಕು ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಶರಣ ಸಾಹಿತ್ಯ ಸಮ್ಮೇಳನವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಸವಣ್ಣರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು. ಚಿತ್ರದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಹಾಗೂ ಇನ್ನಿತರರನ್ನು ಕಾಣಬಹುದು.

ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಮಾತನಾಡಿ, ಶರಣ ಸಾಹಿತ್ಯದ ಆಳ, ಅಗಲ ಹಾಗೂ ಅದರ ಪ್ರಾಮುಖ್ಯತೆ ನಮಗೆ ಇಂದಿಗೂ ಅರ್ಥವಾಗಿಲ್ಲ. ಶರಣ ಸಾಹಿತ್ಯ ಕುರಿತು ಹೆಮ್ಮೆ ಪಡುವ ನಾವು ಶರಣರು ಹೇಳಿರುವ ಮಾತುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಕಡೆಗೆ ಗಮನ ಹರಿಸುತ್ತಿಲ್ಲ. ಶರಣ ಸಾಹಿತ್ಯ ನಮಗೆ ದೊರೆತಿರುವ ಅಮೂಲ್ಯ ವಾದ ಸಂಪತ್ತು ಆದರೆ ಮಕ್ಕಳು ಸಂಪತ್ತಿನ ಬೆಲೆ ಅರಿಯದೇ ಅದರೊಂದಿಗೆ ಆಟವಾಡುವ ಹಾಗೆ ಶರಣ ಸಾಹಿತ್ಯದ ಜತೆಗೆ ಮಕ್ಕಳ ರೀತಿಯಲ್ಲೇ ನಾವೂ ಸಹ ನಡೆದುಕೊಳ್ಳುತ್ತಿರುವುದು ಬೇಸರದ ಸಂಗತಿ ಎಂದರು.

ವಚನ ಸಾಹಿತ್ಯ ಅಥವಾ ಶರಣ ಸಾಹಿತ್ಯ ಯಾವ ಪ್ರಶ್ನೆಗಳನ್ನು ಮಾಡುತ್ತಿವೆ ಎಂಬ ಸ್ಪಷ್ಟವಾದ ಅರಿವೂ ಸಹ ನಮ್ಮ ಜನರಿಗೆ ಇಲ್ಲ. ಇಂಗ್ಲೀಷಿನ ಪ್ರಭಾವ ಇಲ್ಲದ, ಅನ್ಯ ಮತೀಯರ ದಾಳಿಯೂ ನಡೆಯದ ಹಾಗೂ ತಂತ್ರಜ್ಞಾನದ ಆರಂಭದ ಸ್ಥಿತಿಯ ಕಾಲದಲ್ಲಿ ಲಭ್ಯವಿದ್ದಂತಹ ಜ್ಞಾನ ಹಾಗೂ ಚಿಂತನೆಯನ್ನು ಒಳಗೊಂಡು ಬದುಕಿಗೆ ಬೇಕಾದ ಸಂಗತಿಗಳನ್ನು ಯಾವ ರೀತಿಯಲ್ಲಿ ಶರಣರು ನಮಗೆ ನೀಡಿದರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಶರಣರ ಸುಮಾರು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿನ ವಚನಗಳು ಪ್ರಕಟಿತ ರೂಪದಲ್ಲಿ ಲಭ್ಯವಿವೆ. ಇನ್ನೂ ಐದು–ಆರು ಸಾವಿರ ವಚನಗಳು ಸಂಗ್ರಹವಾಗಿವೆ. ಆದರೆ ಪ್ರಕಟವಾಗಿಲ್ಲ. ಇಷ್ಟು ಸಂಪನ್ಮೂಲ ವಿದ್ದರೂ ನಾವು ಸಭೆಗಳಲ್ಲಿ, ಭಾಷಣಗಳಲ್ಲಿ ಹತ್ತರಿಂದ ಇಪ್ಪತ್ತು ವಚನಗಳನ್ನು ಮಾತ್ರ ಬಳಕೆ ಮಾಡಿಕೊಳ್ಳುತ್ತವೆ. ಮಿಕ್ಕ ವಚನಗಳಲ್ಲಿ ಏನಿದೆ ಎನ್ನುವ ಕುತೂಹಲವೂ ನಮಗೆ ಇಲ್ಲ. ಆದ್ದರಿಂದ ಶರಣ ಸಾಹಿತ್ಯ ಪರಿಷತ್ತಿನಿಂದ ವಚನಗಳ ಡಿಜಿಟಲೀಕರಣ ಮಾಡಬೇಕಾದ ಅಗತ್ಯವಿದೆ. ಇದರಿಂದ ಎಲ್ಲರಿಗೂ ಸುಲಭವಾಗಿ ವಚನಗಳು ಸಿಗಲಿವೆ. ಅಲ್ಲದೇ ವಚನ ಸಾಹಿತ್ಯದಲ್ಲಿ ಬರುವ ಶಬ್ದಗಳ ಅರ್ಥವನ್ನು ತಿಳಿಸಲು ಅರ್ಥವಿವರಣೆಯುಳ್ಳ ಶಬ್ದಕೋಶವನ್ನು ರಚನೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ತಿಳಿಸಿದರು.

**ಕೃತಿಗಳ ಬಿಡುಗಡೆ:** ಕಾರ್ಯಕ್ರಮದಲ್ಲಿ ಸಮ್ಮೇಳನದ ಅಂಗವಾಗಿ ಕೂಡಲ ಸಂಗಮ (ಸಂಪಾದಕರು: ಪ್ರೊ.ಡಿ.ಎಸ್.ಸದಾಶಿವ ಮೂರ್ತಿ), ಸೋಮೇಶ್ವರ ಶತಕ (ಲೇಖಕರು: ಮಳಲಕೆರೆ ಗುರುಮೂರ್ತಿ), ಲಿಂಗಲೀಲಾ ವಿಲಾಸ ಹಾಗೂ ಲಿಂಗಾಂಗ ಸಂಯೋಗ (ಲೇಖಕರು :ವಿಜಯ ಕುಮಾರ ಸ್ವಾಮೀಜಿ), ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಶ್ರೀಗಳು ( ಲೇಖಕರು:ಡಾ.ಪುಟ್ಟಪ್ಪ ಮುಡಿಗುಂಡ), ವಚನ ಶ್ರಾವಣ (ಸಂಪಾದಕರು: ಮ.ಗು.ಸದಾನಂದಯ್ಯ) ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಸಮ್ಮೇಳನದ ಸಾನಿಧ್ಯವನ್ನು ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಜಲ ಸಾಹಸಿ ಅನನ್ಯ ಪ್ರಸಾದ್, ಶರಣ ಸಾಹಿತ್ಯ ಪರಿಷತ್ ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕಾರ್ಯದರ್ಶಿಗಳಾದ ದೇವರಾಜು ಪಿ.ಚಿಕ್ಕಳ್ಳಿ, ಟಿ.ಎಸ್. ಕುಮಾರಸ್ವಾಮಿ, ಖಜಾಂಚಿ ಬಿ.ಎನ್. ನಂದೀಶ್ವರ, ಸಂಚಾಲಕ ಎಂ.ಚಂದ್ರ ಶೇಖರ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

---

## ಅಭಿಮಾನಿಗಳ ರೋಮಾಂಚನಗೊಳಿಸಿದ ಖಾಟ ಕುಸ್ತಿ ಪಂದ್ಯಾವಳಿ



ಹಿನಕಲ್ ಮಾರಿಹಬ್ಬದ ಪ್ರಯುಕ್ತ 30 ಜೋಡಿ ಖಾಟ ಕುಸ್ತಿ ಪಂದ್ಯಾವಳಿ ನಡೆಯಿತು.

ಮೈಸೂರು, ಮಾ.23(ಎಂಕೆ)– ರಂಗೇರಿದ ಕುಸ್ತಿ ಅಖಾಡದಲ್ಲಿ ಬಲಾಬಲ ಪ್ರದರ್ಶನದೊಂದಿಗೆ ತೊಡೆತಟ್ಟಿ ಗೆದ್ದು ಬೀಗಿದ ಪೈಲ್ವಾನರು..!

ನಗರದ ದೊಡ್ಡಕೆರೆ ಮೈದಾನದಲ್ಲಿರುವ ಶ್ರೀ ಜಯಚಾಮರಾಜ ಒಡೆಯರ್ ಅಖಾಡ ಸಾಹುಕಾರ ಚೆನ್ನಯ್ಯ ಕ್ರೀಡಾಂಗಣದಲ್ಲಿ ಹಿನಕಲ್ ಹತ್ತು ಜನಗಳ ಗರಡಿ ಟ್ರಸ್ಟ್, ಮೈಸೂರು ಜಿಲ್ಲಾ ಕುಸ್ತಿ ಸಂಘ ಸಹಯೋಗದಲ್ಲಿ ಮಾರಿ ಹಬ್ಬದ ಪ್ರಯುಕ್ತ ನಡೆದ 30 ಜೋಡಿ ಖಾಟ ಕುಸ್ತಿ ಪಂದ್ಯಾವಳಿಯ ರೋಚಕ ಹಣಾಹಣಿಯನ್ನು ಕುಸ್ತಿ ಅಭಿಮಾನಿಗಳು ಕಣ್ತುಂಬಿಕೊಂಡರು.

ಅರಮನೆ ಸಮೀಪದ ಮಾರಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಹಿರಿಯ ಪೈಲ್ವಾನರಾದ ಪೈ.ಕುಳ್ಳನಾಯಕ ಹಾಗೂ ಪೈ.ಮಹದೇವ್ ಕ್ರೀಡಾ ಜ್ಯೋತಿಯನ್ನು ಸಾಹುಕಾರ ಚೆನ್ನಯ್ಯ ಕ್ರೀಡಾಂಗಣಕ್ಕೆ ತೆಗೆದುಕೊಂಡು ಬಂದು ಅಮ್ಮತಾಯಿ(ಮಟ್ಟಿ)ಗೆ ಪೂಜೆ ಸಲ್ಲಿಸಿದರು. ನಂತರ ಅಂತರ ರಾಷ್ಟ್ರೀಯ ಕುಸ್ತಿ ಪಟು ಆರ್.ಆರ್.ಮಠಪತಿ ಪಂದ್ಯಾವಳಿಗೆಗೆ ಚಾಲನೆ ನೀಡಿದರು.

ನಂತರ ಎರಡು ಜೊತೆ ಮಹಿಳಾ ಕುಸ್ತಿ, ಸವಾಲ್ ಕುಸ್ತಿ ಮಟ್ಟಿ ಕುಸ್ತಿ ನಂತರ ಪಾಯಿಂಟ್ ಆಧಾರದ ಮೇಲೆ ಕುಸ್ತಿ ಪಂದ್ಯಗಳನ್ನು ನಡೆಸುವ ಮೂಲಕ ಕುಸ್ತಿಪಟುಗಳಲ್ಲಿ ಕ್ರೀಡಾ ಉತ್ಸಾಹ ಹೆಚ್ಚಿಸಲಾಯಿತು. ದಸರಾ ಕಂಠೀರವ ಪ್ರಶಸ್ತಿ ಪುರಸ್ಕೃತ ಪೈ.ಕಿರಣ್ ಭದ್ರಾವತಿ ಹಾಗೂ ಪೈ.ಶಿವಯ್ಯ, ಪೈ.ಮಂಜು ಕೆಂಚ ಹಾಗೂ ಪೈ.ನಿತಿನ್, ಪೈ.ಉಪೇಂದ್ರ, ಹಾಗೂ ಪೈ.ಸೂರಜ್ ಮಟ್ಟಿ ನಡುವಿನ ಹಣಾಹಣಿ ರೋಚಕತೆಯಿಂದ ಕೂಡಿತ್ತು.

ಅಖಾಡದಲ್ಲಿ ತೊಡೆತಟ್ಟಿದ ಕುಸ್ತಿಪಟುಗಳಿಗೆ ಬಂಡೂರು ಟಗರು, 10 ಸಾವಿರ ರೂ.ಗಳ ಹೀರೋ ಸೈಕಲ್, ನಾಟಿಕೋಳಿ, ಬಾದಾಮಿ ಕಿಟ್ ಹಾಗೂ ನಗದು ಬಹುಮಾನದ ಜೊತೆಗೆ ಸ್ಮರಣಿಕೆಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು. ಈ ವೇಳೆ ಹಿನಕಲ್ ಮುಖಂಡ ಲೋಹಿತ್ ಅರಸ್ ಮಾತನಾಡಿ, ಹಿನಕಲ್ ಮಾರಮ್ಮ ಹಬ್ಬ ಉತ್ಸವಕ್ಕೆ ತನ್ನದೆ ಪರಂಪರೆ ಇದ್ದು, ಹಬ್ಬದ ಪ್ರಯುಕ್ತ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ. ಕುಸ್ತಿಗೆ ತನ್ನದೇಅಭಿಮಾನಿಗಳ ಇತಿಹಾಸವಿದ್ದು, ಮೈಸೂರು ಜನತೆ, ಜನಪ್ರತಿನಿಧಿಗಳು ಕುಸ್ತಿಗೆ ಪ್ರೋತ್ಸಾಹ ನೀಡಿಬೇಕು ಎಂದು ಮನವಿ ಮಾಡಿದರು.

ಕುಸ್ತಿ ಆಯೋಜಕ ಹಿನಕಲ್ ಹತ್ತು ಜನಗಳ ಗರಡಿ ಟ್ರಸ್ಟ್‌ನ ಅಧ್ಯಕ್ಷ ಪಟೇಲ್ ಚನ್ನೇಗೌಡ, ಮೈಸೂರು ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಪೈ.ಚಂದ್ರಶೇಖರ್, ಕುಸ್ತಿ ಪಂದ್ಯಾವಳಿ ಆಯೋಜಕರಾದ ಪೈ. ಸ್ಟಾರ್ ವೆಂಕಟೇಶ್, ಪೈ.ಗಿರೀಶ್, ಪೈ.ಬಸವರಾಜು, ಪೈ.ಚೌಡನಾಯಕ, ಪೈ.ಚಂದ್ರೇಗೌಡ, ಪೈ.ವೆಂಕಟೇಶ್, ಪೈ.ಜನಾರ್ಧನ್, ಪೈ.ಮಹಾದೇವಸ್ವಾಮಿ, ಪೈ.ಉಮೇಶ್, ಪೈ.ಚಂದನ್, ಹಿನಕಲ್ ಶ್ರೀನಿವಾಸ್, ವಿಜಯನಗರ ಗಿರೀಶ್, ರಾಣಿ ವೆಂಕಟೇಶ್ ಉಪಸ್ಥಿತರಿದ್ದರು.

---

## ನಾವು ಬಸವವಾದಿಗಳಷ್ಟೇ ಆಗದೇ ಬಸವ ಅನುಯಾಯಿಗಳಾಗುವುದು ಅತ್ಯಂತ ಅಗತ್ಯ

### ಶ್ರೀ ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ

ಮೈಸೂರು, ಮಾ.23(ಪಿಎಂ)– ಇಂದು ನಾವೆಲ್ಲಾ ಬಸವವಾದಿಗಳಾಗಿದ್ದೇವೆ. ಆದರೆ ಅಷ್ಟಕ್ಕೆ ಸೀಮಿತವಾಗದೇ ಬಸವ ಅನುಯಾಯಿಗಳಾಗುವುದು ಅತ್ಯಂತ ಮುಖ್ಯ ಎಂದು ಬೆಂಗಳೂರು ಶ್ರೀ ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ಜಿಲ್ಲಾ ಮತ್ತು ನಗರ ಘಟಕ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಶರಣ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಡೆ–ನುಡಿಯಲ್ಲಿ ಪರಿಪೂರ್ಣತೆಯ ಅದ್ಭುತ ಆಯಾಮವು ಶರಣದಲ್ಲಿ ಕಂಡು ಬರುವ ವಿಶಿಷ್ಟ ಗುಣಲಕ್ಷಣ. ಇದನ್ನು ನಾವು ಗಮನಿಸಬೇಕು. ಇಂದು ನಾವೆಲ್ಲಾ ಬಸವವಾದಿಗಳಾಗಿದ್ದೇವೆ. ಆದರೆ ಬಸವ ಅನುಯಾಯಿಗಳಾಗುವುದು ಅತ್ಯಂತ ಮುಖ್ಯ. ಬಸವಣ್ಣ ಸೇರಿದಂತೆ ಎಲ್ಲಾ ಶರಣರ ಬಗ್ಗೆ ನಾವು ಆದರ್ಶದ ಮಾತುಗಳನ್ನಾಡುತ್ತೇವೆ. ಆದರೆ ಅದು ನಮ್ಮ ಹೃದಯದ ಪ್ರತಿಬಿಂಬವಾಗಿ ಮೂಡಿಬರಬೇಕು. ಇಲ್ಲವಾದರೆ ಅದು ಶಬ್ಧದಲ್ಲೇ ಕಳೆದು ಹೋಗುತ್ತದೆ ಎಂದು ವಿಶ್ಲೇಷಿಸಿದರು.

ಶರಣರ ಮಾರ್ಗದಲ್ಲಿ ಒಂದು ಹೆಜ್ಜೆಯನ್ನಾದರೂ ಹಾಕುತ್ತೇವೆಂಬ ಪ್ರಯತ್ನ ಅಗತ್ಯ. ಈ ನಿಟ್ಟಿನಲ್ಲಿ ಅಂತಹ ಜಾಗೃತಿ ಮೂಡಿಸಲು ಇಂತಹ ಸಮ್ಮೇಳನಗಳು ಮುಖ್ಯ ಪಾತ್ರ ವಹಿಸಲಿವೆ. ಈ ನೆಲೆಯಲ್ಲಿ ಬದುಕಿನ ಉದ್ದಕ್ಕೂ ಸಂಪೂರ್ಣ ರೀತಿಯಲ್ಲಿ ಶರಣರ ನೆಲೆಗಟ್ಟನ್ನು ಆಳವಾಗಿ ಅಧ್ಯಯನ ಮಾಡಿ ಅವರ ಹೃದಯ ಮಿಡಿತಗಳನ್ನು ಬರವಣಿಗೆಯಲ್ಲಿ ಬರೆದ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರನ್ನು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಮಾಡಿಕೊಂಡಿರುವುದು ಸ್ವಾಗತಾರ್ಹ. ಸಮ್ಮೇಳನದಲ್ಲಿ ಅವರ ಒಂದೊಂದು ನುಡಿಗಳು ನಮ್ಮ ಮುಂದಿನ ಭವಿಷ್ಯಕ್ಕೆ ದಾರಿದೀಪ ಎಂಬುದನ್ನು ನಾವು ಗಮನಿಸಬೇಕು ಎಂದು ತಿಳಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಶರಣ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾನುವಾರ ವಿವಿಧ ಕ್ಷೇತ್ರ ಸಾಧಕರಿಗೆ 'ಶರಣಶ್ರೀ' ಗೌರವ ಪುರಸ್ಕಾರ ನೀಡಲಾಯಿತು.

ಬಸವಣ್ಣ, ಅಕ್ಕಮಹಾದೇವಿ ಸೇರಿದಂತೆ ಶರಣರ ವಚನಗಳನ್ನು ಉಲ್ಲೇಖಿಸುತ್ತಾ ಮಾತನಾಡಿದ ಶಿವರುದ್ರ ಶ್ರೀಗಳು, ಶರಣರು ಪ್ರತಿಯೊಂದು ಹಂತದಲ್ಲೂ ತಮ್ಮನ್ನು ತಾವು ಪರೀಕ್ಷೆಗೆ ಒಡ್ಡಿಕೊಂಡರು. ದುಡಿಮೆ ಮಾಡದೇ ಮಾಡುವ ಅಭಿಷೇಕ ದೇವರಿಗೆ ಇಷ್ಟವಾಗುವುದಿಲ್ಲ. ಸುಸಂಸ್ಕೃತರು ಹೂವಿಟ್ಟರೆ ದೇವರಿಗೆ ಇಷ್ಟವಾಗುತ್ತದೆ. ಜೊತೆಗೆ ಭಾವನೆಗಳು ಶುದ್ಧ ಇಲ್ಲದಿದ್ದರೆ, ಪ್ರಯೋಜನವಿಲ್ಲ. ಅರಿವಿನ ಬೆಳಕು ಅಂತರಂಗದಲ್ಲಿ ಇಲ್ಲವಾದರೂ ಅಷ್ಟೇ. ಈ ಅಂಶಗಳು ವಾಸ್ತವದ ನೆಲೆಗಟ್ಟಿನಲ್ಲಿ ಶರಣರು ನೀಡಿರುವ ಸಂದೇಶಗಳಾಗಿವೆ ಎಂದು ವಿವರಿಸಿದರು.

**ಹಲವು ದೃಷ್ಟಿಯಲ್ಲಿ ವಚನ ಅರಿಯಬೇಕು:** ಸಾಹಿತಿ, ವಿಮರ್ಶಕರೂ ಆದ ಸಮ್ಮೇಳನಾಧ್ಯಕ್ಷ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಮಾತನಾಡಿ, ಒಂದೇ ವಚನವನ್ನು ಹಲವು ದೃಷ್ಟಿಗಳಿಂದ ನೋಡುವುದು ಹೇಗೆ ಎಂದು ಹೇಳಿಕೊಡಬೇಕು ಎಂಬುದು ನನ್ನ ನಿಲುವು. ಶಿವರುದ್ರ ಶ್ರೀಗಳು ಈಗ ತಾನೆ, ವಚನಗಳನ್ನು ಅನು ಭಾವ ಸಾಹಿತ್ಯವೆಂದು ನೋಡಿದಾಗ, ಅದನ್ನು ಹೇಗೆ ಅರ್ಥ ಮಾಡಿಕೊಳ್ಳ ಬೇಕೋ ಅದನ್ನು ಬಿಟ್ಟು ನಾವು ವೈಜ್ಞಾನಿಕ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯಕ ಎಂದೆಲ್ಲಾ ನೋಡುತ್ತಾ ಹೋಗುತ್ತಿದ್ದೇವೆ. ಅಂತಹದ್ದಕ್ಕೆ ಏನಾದರೂ ಮಾಡಬಹುದಾ? ಎಂದು ಕೇಳಿದರು. ಇದು ಬಹಳ ಮುಖ್ಯ ಪ್ರಶ್ನೆ ಎಂದರು.

ವಚನಗಳು ಒಂದೊಂದು ಕಾಲದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಂಡುಕೊಂಡು ಬಂದಿವೆ. ಅಲ್ಲದೆ, ಎಲ್ಲಾ ವಚನಗಳು ಅನುಭಾವ ವಚನಗಳೆಂದು ನನಗೆ ಅನ್ನಿಸುವುದಿಲ್ಲ. ಜೊತೆಗೆ ಅನುಭಾವವೆಂದು ನೋಡಿದಾಗ ಒಂದು ರೀತಿಯಲ್ಲಿ ಕಂಡರೆ, ಧಾರ್ಮಿಕವೆಂದು ನೋಡಿದರೆ ಮತ್ತೊಂದು ರೀತಿಯಲ್ಲಿ ಕಾಣುತ್ತದೆ. ಕಾವ್ಯವೆಂದು ನೋಡಿದಾಗ ಬೇರೆ ರೀತಿ ಕಾಣುತ್ತದೆ. ಒಂದೇ ವಚನ ನಾವು ನೋಡುವ ದೃಷ್ಟಿಯನ್ನು ಅನುಸರಿಸಿ ಬೇರೆ ಬೇರೆ ರೀತಿಯಲ್ಲಿ ಕಾಣಬಹುದು. ಇದನ್ನು ಒಪ್ಪಿಕೊಳ್ಳಬೇಕು. ನಮಗೆ ಆ ಕ್ಷಣದ ಮನೋಭಾವ ಹೇಗೆ ಇರುತ್ತದೋ ಹಾಗೆ ವಚನಗಳೇ ಆಗಲಿ, ಮತ್ತೊಂದೇ ಆಗಲಿ ಅರ್ಥವಾಗುತ್ತದೆ. 'ಅರ್ಥ' ಎನ್ನುವುದು ಮಾಡಿಕೊಳ್ಳುವವರ ಜವಾಬ್ದಾರಿಯೇ ಹೊರತು ಎದುರುಗಡೆ ಇರುವ ವಸ್ತುವಿನ ಜವಾಬ್ದಾರಿಯಲ್ಲ. ವಚನಗಳೂ ಅಷ್ಟೇ ಎಂದು ವಿಶ್ಲೇಷಿಸಿದರು.

ಇದಕ್ಕೂ ಮುನ್ನ ಶರಣ ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಪ್ರೊ.ಹೆಚ್.ಎಸ್.ಹರಿಶಂಕರ್, ಎಂ.ಎ.ನೀಲಾಂಬಿಕಾ, ಪ್ರಭಾಮಣಿ, ಜ್ಯೋತಿರ್ಲಿಂಗನಗೌಡ ಪಾಟೀಲ್, ಡಿ.ಜಿ.ಸೋಮಶೇಖರಮೂರ್ತಿ ಅವರಿಗೆ 'ಶರಣಶ್ರೀ' ಗೌರವ ಪುರಸ್ಕಾರ ನೀಡಲಾಯಿತು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಪರಿಷತ್ತಿನ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಸಮ್ಮೇಳನದ ಸ್ವಾಗತ ಸಮಿತಿ ಸಂಚಾಲಕ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

---

## ಟೀಂ ಮೈಸೂರಿನಿಂದ ಪಂಜಿನ ಮೆರವಣಿಗೆ ಮೂಲಕ ಸ್ವಾತಂತ್ರ್ಯ ಸೇನಾನಿಗಳಿಗೆ ಶ್ರದ್ಧಾಂಜಲಿ



ಟೀಂ ಮೈಸೂರು ವತಿಯಿಂದ ಪಂಜಿನ ಮೆರವಣಿಗೆ ನಡೆಸಿ, ಸ್ವಾತಂತ್ರ್ಯ ಸೇನಾನಿಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಮಾ.23(ಎಂಕೆ)– ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಭಗತ್ ಸಿಂಗ್, ಸುಖದೇವ್, ರಾಜ್‌ಗುರು ಅವರ ಬಲಿದಾನ ದಿನದ ಅಂಗವಾಗಿ ಟೀಂ ಮೈಸೂರು ವತಿಯಿಂದ ಪಂಜಿನ ಮೆರವಣಿಗೆ ನಡೆಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಿಂದ ಆರಂಭಗೊಂಡ ಪಂಜಿನ ಮೆರವಣಿಗೆ ಶಿವಾರಂಪೇಟೆ ರಸ್ತೆ ಮೂಲಕ ಸಾಗಿ ಆಂಜನೇಯಸ್ವಾಮಿ ದೇವಸ್ಥಾನ ಅಡ್ಡ ರಸ್ತೆ ಮೂಲಕ ಡಿ.ದೇವರಾಜ ಅರಸು ರಸ್ತೆ ಮಾರ್ಗವಾಗಿ ವಾಪಸ್ ನಂಜರಾಜ ಬಹದ್ದೂರ್ ಛತ್ರದವರೆಗೆ ಸಾಗಿತು.

ಮೆರವಣಿಗೆಯಲ್ಲಿ ನೂರಾರು ಮಂದಿ ಭಗತ್‌ಸಿಂಗ್, ಸುಖದೇವ್ ಹಾಗೂ ರಾಜ್‌ಗುರು ಅವರ ಭಾವಚಿತ್ರ ನಾಮಫಲಕ ಹಾಗೂ ಪಂಜು ಹಿಡಿದು ಹುತಾತ್ಮ ವೀರರಿಗೆ ಅಮರ್‌ರಹೇ ಘೋಷಣೆ ಮೊಳಗಿಸಿದರು. ಮೆರವಣಿಗೆಗೂ ಮುನ್ನ ಮಾತನಾಡಿದ ಬಿಜೆಪಿ ಮುಖಂಡ ಫಣೀಶ್, ದೇಶಕೋಸ್ಕರ ಬದುಕಿದ ಮಹಾನ್ ನಾಯಕರನ್ನು ಸ್ಮರಿಸುವುದರ ಜೊತೆಗೆ ದೇಶಕೋಸ್ಕರ ಬದುಕು ಸಂಕಲ್ಪವಾಗಬೇಕು. ಭಾರತ ಮಾತೆಯ ಈ ಪರಾಕ್ರಮಿ ಸುಪುತ್ರರ ತ್ಯಾಗ, ಹೋರಾಟ ಮತ್ತು ಆದರ್ಶಗಳ ಕಥೆ ದೇಶವಾಸಿಗಳಲ್ಲಿ ಸದಾ ಸ್ಪೂರ್ತಿ ತುಂಬುವಂತದ್ದಾಗಿದೆ. ದೇಶದ ಸ್ವಾತಂತ್ರಕ್ಕಾಗಿ ನಗುನಗುತ್ತಲೇ ಪ್ರಾಣ ತ್ಯಾಗ ಮಾಡಿದ ಭಗತ್ ಸಿಂಗ್, ರಾಜ್‌ಗುರು, ಸುಖದೇವ್ ಅವರ ಧೈರ್ಯ, ಸಾಹಸ ಯುವ ಪೀಳಿಗೆಗೆ ಮಾದರಿ ಎಂದರು. ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್, ಎ.ಯು.ಸುಬ್ಬಯ್ಯ, ಮುಖಂಡ ಸ್ಮಾರ್ಟ್ ಮಂಜು, ಟೀ ಮೈಸೂರಿನ ಗೋಕುಲ್ ಗೋವರ್ಧನ್, ಪ್ರಸನ್ನ ಮತ್ತಿತರರಿದ್ದರು.

---

## ಬಿಜೆಪಿ ಶಾಸಕರು ತಪ್ಪಿನ ಅರಿವಾಗಿ ಮನವಿ ಮಾಡಲಿ, ನಂತರ ಅಮಾನತು ಅವಧಿ ಕಡಿಮೆ ಮಾಡುತ್ತೇನೆ: ಸ್ಪೀಕರ್ ಯು.ಟಿ ಖಾದರ್



ಬೆಂಗಳೂರು, ಮಾ.23– ತಪ್ಪಿನ ಅರಿವಾಗಿ ಮನವಿ ಮಾಡಲಿ. ನಂತರ 18 ಬಿಜೆಪಿ ಶಾಸಕರ ಆರು ತಿಂಗಳ ಅಮಾನತು ಅವಧಿಯನ್ನು ಕಡಿಮೆ ಮಾಡುತ್ತೇನೆಂದು ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿದ ಕಾಗದಗಳನ್ನು ನನ್ನ ಮೇಲೆ ಎಸೆದು ಕುರ್ಚಿಗೆ ಅಗೌರವ ತೋರಿದ್ದರು. ಅವರ ಕುರ್ಚಿಯ ಮೇಲೆ ಹತ್ತಿ ನಿಂತು ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿದ್ದರು. ಅಶಿಸ್ತಿನ ವರ್ತನೆ ಮತ್ತು ಸ್ಪೀಕರ್ ಕುರ್ಚಿಗೆ ಅಗೌರವ ತೋರಿದ್ದಕ್ಕಾಗಿ ಶಾಸಕರನ್ನು ಸದನದಿಂದ ಅಮಾನತುಗೊಳಿಸಲಾಗಿದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ನಿಯಮ 348 ರ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಶಾಸಕರ ಮೇಲಿನ ಕೋಪ ಅಥವಾ ದ್ವೇಷದಿಂದ ಅವರನ್ನು ಅಮಾನತುಪಡಿಸಿಲ್ಲ. 18 ಶಾಸಕರು ಮನವಿ ಮಾಡಿಕೊಂಡರೆ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇನೆ. ಶಾಸಕರ ಅಮಾನತ್ತಿನ ನಿರ್ಧಾರದಲ್ಲಿ ಯಾವ ಒತ್ತಡವೂ ಇರಲಿಲ್ಲ ಎಂದು ಸ್ಪಷ್ಟಪಡಿಸಿದರು.

ಜನಪ್ರತಿನಿಧಿಗಳು ಜನರಿಂದ ಆಯ್ಕೆಯಾಗಿರುತ್ತಾರೆ ಎಂಬುದು ಗೊತ್ತಿದೆ. ಅದಕ್ಕೆ ತಕ್ಕಂತೆ ಶಾಸಕರು ನಡೆದುಕೊಳ್ಳಬೇಕಲ್ಲವೇ? ಬಿಜೆಪಿ ಶಾಸಕರು ಎರಡನೇ ಬಾರಿ ಈ ರೀತಿ ನಡೆದುಕೊಂಡಿರುವುದು. ಸಚಿವರ ಹನಿಟ್ರ್ಯಾಪ್ ಸಂಬಂಧ ಸದನದಲ್ಲಿ ಉಂಟಾದ ಗದ್ದಲದಿಂದ ಸದನದ ಪೀಠದ ಆದೇಶವನ್ನು ಲೆಕ್ಕಿಸದೆ ಕಾರ್ಯಕಲಾಪ ಗಳಿಗೆ ಅಡ್ಡಿಯುಂಟು ಮಾಡಿ ಅಶಿಸ್ತಿನಿಂದ, ಅಗೌರವದಿಂದ ನಡೆದುಕೊಂಡಿದ್ದರಿಂದ ಆರು ತಿಂಗಳ ಅವಧಿಗೆ ಅಮಾನತುಪಡಿಸಲಾಗಿದೆ. ಸದಸ್ಯರು ಮುಂದೆ ಈ ರೀತಿಯ ವರ್ತಿಸದಿರಲು ಇದು ಎಚ್ಚರಿಕೆ ಗಂಟೆಯಾಗಿದೆ.

ತಾವು ತಪ್ಪು ಮಾಡಿದ್ದೇವೆ ಎಂಬ ಭಾವನೆಯಾದರೂ ಅವರಿಗೆ ಬರಬೇಕಿತ್ತಲ್ಲವೇ? ಸ್ವಲ್ಪವಾದರೂ ತಮ್ಮ ತಪ್ಪಿನ ಅರಿವು ಇರಬೇಕಿತ್ತಲ್ಲವೇ? ಮತ್ತೆ ಕಲಾಪ ಪ್ರಾರಂಭವಾದ ನಂತರವೂ ಅದೇ ವರ್ತನೆ ಮುಂದುವರಿಸಿದರು. ಸದನದಲ್ಲಿ ಹೀಗೆ ಮಾಡುವ ಶಾಸಕರು ಮುಂದೆ ಜಿಲ್ಲಾಮಟ್ಟದ ಸಭೆಗಳಲ್ಲೂ ಇದೇ ರೀತಿ ವರ್ತಿಸಿದರೆ ಹೇಗೆ?

ಕಾನೂನು ಹೋರಾಟ ಮಾಡುವುದು ಶಾಸಕರಿಗೆ ಬಿಟ್ಟ ವಿಚಾರ. ಈಗ ಆರು ತಿಂಗಳ ಅವಧಿಗೆ ಅಮಾನತ್ತಾಗಿದೆ. ಇದೇ ರೀತಿ ಮುಂದುವರಿದರೆ ಮುಂದೆ ಒಂದು ವರ್ಷ ಅಮಾನತ್ತಾಗಬೇಕಾಗುತ್ತದೆ ಎಂಬುದು ಅರ್ಥವಾಗಬೇಕು. ಹನಿಟ್ರ್ಯಾಪ್ ವಿಚಾರದಲ್ಲಿ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಏಕಾಏಕಿ ಮಾತನಾಡಲು ಮುಂದಾದಾಗಲೂ ಅವಕಾಶ ನೀಡಿದ್ದೇನೆ. ಸಚಿವರು ಉತ್ತರಿಸಿದರು. ಗೃಹ ಸಚಿವರು, ಸಿಎಂ ಸಹ ದೂರು ಬಂದ ಮೇಲೆ ತನಿಖೆ ನಡೆಸುವುದಾಗಿ ಭರವಸೆ ನೀಡಿದರು. ಹೀಗಿದ್ದೂ ಕಲಾಪಕ್ಕೆ ಅಡ್ಡಿ ಪಡಿಸುವುದು ಎಷ್ಟು ಸರಿ? ಎಂದು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು.

---

## ರಾಜ್ಯದಾದ್ಯಂತ ಹೋಟೆಲ್, ಮೆಸ್, ಬೇಕರಿ ಮೇಲೆ ಎಫ್‌ಡಿಎ ದಾಳಿ; ಚಹಾ ಪುಡಿ, ಮಸಾಲೆ ಪದಾರ್ಥಗಳಲ್ಲಿ ಕಲಬೆರಕೆ ಪತ್ತೆ

ಬೆಂಗಳೂರು, ಮಾ.23– ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ (ಎಫ್‌ಡಿಎ) ಇಡ್ಲಿ ಮತ್ತು ಹೋಳಿಗೆ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಹಾಳೆಗಳ ಬಳಕೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿದ ನಂತರ, ಆಹಾರದ ಗುಣಮಟ್ಟದ ಕುರಿತು ಇಲಾಖೆಗೆ ಸಾಕಷ್ಟು ದೂರುಗಳು ಕೇಳಿಬರುತ್ತಿವೆ. ಇದರ ಪರಿಣಾಮವಾಗಿ, ರಾಜ್ಯದಾದ್ಯಂತ ಹೋಟೆಲ್‌ಗಳು, ಮೆಸ್‌ಗಳು ಮತ್ತು ಬೇಕರಿಗಳಲ್ಲಿ ಎಫ್‌ಡಿಎ ತಪಾಸಣೆಗಳನ್ನು ಪ್ರಾರಂಭಿಸಿದೆ.

ಚಹಾ ಪುಡಿ ಸೇರಿದಂತೆ ಹಲವಾರು ವಸ್ತುಗಳು ಕಲಬೆರಕೆಯಾಗಿರುವುದು ಕಂಡುಬಂದಿದ್ದು, ಕಡಿಮೆ ದರ್ಜೆಯ ಚಹಾ ಮತ್ತು ಈ ಹಿಂದೆ ತಯಾರಿಸಿದ ಚಹಾ ಪುಡಿಯನ್ನೇ ಒಣಗಿಸಲಾಗುತ್ತದೆ ಮತ್ತು ಕೃತಕ ಬಣ್ಣ ಬಳಸಿ ಅವುಗಳನ್ನೇ ಬಳಸಲಾಗುತ್ತಿದೆ. ಹೆಚ್ಚಿನ ಅಂಗಡಿಗಳು ಕುದಿಸಿದ ಚಹಾ ಪುಡಿಯನ್ನು ಇತರ ತ್ಯಾಜ್ಯದೊಂದಿಗೆ ಬೆರೆಸುವುದಿಲ್ಲ. ಬದಲಿಗೆ, ಅದನ್ನು ಒಣಗಿಸಿ ಮರುಬಳಕೆ ಮಾಡುತ್ತವೆ ಎಂದು ಅಧಿಕಾರಿ ಹೇಳಿದರು.

ಇದಲ್ಲದೆ, ಅನೇಕ ಆಹಾರ ಪದಾರ್ಥಗಳನ್ನು ಕಲಬೆರಕೆ ಮಸಾಲೆಗಳನ್ನು ಬಳಸಿ ತಯಾರಿಸಲಾಗುತ್ತದೆ. ಹೆಚ್ಚಿನ ಬೇಡಿಕೆಯಿರುವ ಮತ್ತು ಪುಡಿ ರೂಪದಲ್ಲಿರುವ ಅರಿಶಿನ, ಮೆಣಸಿನ ಪುಡಿ ಮತ್ತು ಕೊತ್ತಂಬರಿ ಪುಡಿಗಳು ಸಾಮಾನ್ಯವಾಗಿ ಕಲಬೆರಕೆಯಾಗಿರುತ್ತವೆ ಎಂದು ಇಲಾಖೆಯ ಅಧಿಕಾರಿ ಹೇಳಿದರು.

---

### ದೆಹಲಿ ಜಡ್ಜ್ ಮನೆಯಲ್ಲಿ ನಗದು ಪತ್ತೆ ಕೇಸ್

## ತನಿಖಾ ವರದಿ ಬಿಡುಗಡೆ ಮಾಡಿದ ಸುಪ್ರೀಂಕೋರ್ಟ್; ತನಿಖೆಗೆ ತ್ರಿಸದಸ್ಯ ಸಮಿತಿ ರಚನೆ

ನವದೆಹಲಿ, ಮಾ.23– ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಯಲ್ಲಿ ಭಾರಿ ಪ್ರಮಾಣದ ನಗದು ಪತ್ತೆಯಾದ ಫೋಟೋಗಳು ಮತ್ತು ವಿಡಿಯೋಗಳು ಲಭ್ಯವಾಗಿದ್ದು, ಅವುಗಳನ್ನು ಸುಪ್ರೀಂ ಕೋರ್ಟ್ ತನ್ನ ವೆಬ್‌ಸೈಟ್‌ನಲ್ಲಿ ಶನಿವಾರ ರಾತ್ರಿ ಪ್ರಕಟಿಸಿದೆ. ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೀಡಿದ ಆಂತರಿಕ ತನಿಖಾ ವರದಿಯನ್ನೂ ಬಹಿರಂಗಪಡಿಸಿದೆ.



ಜಡ್ಜ್ ಮನೆಯಲ್ಲಿ ನೋಟಿನ ಕಂತೆಗಳು ಪತ್ತೆಯಾಗಿವೆ ಎಂಬ ಆರೋಪದ ಕುರಿತು ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ.ಉಪಾಧ್ಯಾಯ ಆಂತರಿಕ ತನಿಖೆ ನಡೆಸಿದ್ದಾರೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆಯ ಅಗತ್ಯವಿದೆ. ಹಣ ಪತ್ತೆಯಾದ ಬಗ್ಗೆ ಸಾಕ್ಷ್ಯಗಳಿವೆ ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ 25 ಪುಟಗಳ ವರದಿಯಲ್ಲಿ ತಿಳಿಸಿದ್ದಾರೆ.

ವರ್ಮಾ ಅವರ ನಿವಾಸದಲ್ಲಿ ಹೊತ್ತಿಕೊಂಡ ಬೆಂಕಿಯಲ್ಲಿ ಹಣದ ಕಂತೆಗಳು ಸುಟ್ಟುಹೋಗಿವೆ. ಅವುಗಳ ಕುರುಹುಗಳು ಪತ್ತೆಯಾಗಿವೆ. ಹಣ ಇದ್ದ ಕೋಣೆಯಲ್ಲಿ ಮನೆ ಕೆಲಸಗಾರರು ಇದ್ದರು. ಬೇರೆಯವರಿಗೆ ಪ್ರವೇಶವೇ ಇರಲಿಲ್ಲ. ಹೀಗಾಗಿ, ಪ್ರಕರಣ ಹೆಚ್ಚಿನ ತನಿಖೆಗೆ ಅರ್ಹವಾಗಿದೆ ಎಂದು ನ್ಯಾಯಮೂರ್ತಿ ಉಪಾಧ್ಯಾಯ ಅವರು ಮಾರ್ಚ್ 21ರಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

**ತ್ರಿಸದಸ್ಯ ತನಿಖಾ ಸಮಿತಿ ರಚನೆ:** ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್.ಸಂಧವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾದ ಅನು ಶಿವರಾಮನ್ ಅವರನ್ನೊಳಗೊಂಡ ತ್ರಿಸದಸ್ಯ ತನಿಖಾ ಸಮಿತಿಯನ್ನು ಸುಪ್ರೀಂ ಕೋರ್ಟ್ ರಚಿಸಿದೆ.

ಗಂಭೀರ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರಿಗೆ ಯಾವುದೇ ನ್ಯಾಯಾಂಗ ಕೆಲಸ ನೀಡದಂತೆ ಸೂಚಿಸಲಾಗಿದೆ. ಜೊತೆಗೆ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗ ಮಾಡಲು ಕೊಲಿಜಿಯಂ ತೀರ್ಮಾನಿಸಿದೆ ಎಂದು ಸುಪ್ರೀಂ ಕೋರ್ಟ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

**ಆರೋಪ ನಿರಾಕರಿಸುತ್ತಿರುವ ಜಡ್ಜ್:** ಈ ಬಗ್ಗೆ ಪ್ರತಿಕ್ರಿಯಿಸಿರುವ ನ್ಯಾಯಮೂರ್ತಿ ವರ್ಮಾ, ನಾನು ಅಥವಾ ನನ್ನ ಕುಟುಂಬ ಸದಸ್ಯರು ಆ ಕೋಣೆಯಲ್ಲಿ ಯಾವುದೇ ಹಣವನ್ನು ಇರಿಸಿಲ್ಲ ಎಂದು ನಾನು ನಿಸ್ಸಂದಿಗ್ಧವಾಗಿ ಹೇಳುತ್ತೇನೆ. ಆಪಾದಿತ ನಗದು ನಮಗೆ ಸೇರಿದೆ ಎಂಬುದನ್ನು ಬಲವಾಗಿ ಖಂಡಿಸುತ್ತೇನೆ. ಈ ನಗದನ್ನು ನಾವು ಸಂಗ್ರಹಿಸಿದ್ದೇವೆ ಎಂಬ ಕಲ್ಪನೆಯೇ ಸಂಪೂರ್ಣವಾಗಿ ಅಸಂಬದ್ಧವಾಗಿದೆ ಎಂದು ಹೇಳಿದ್ದಾರೆ.

ಸಿಬ್ಬಂದಿ ಕ್ವಾರ್ಟರ್ಸ್ ಬಳಿ ಅಥವಾ ಔಟ್‌ಹೌಸ್‌ನಲ್ಲಿ ತೆರೆದ, ಮುಕ್ತವಾಗಿ ಪ್ರವೇಶಿಸಬಹುದಾದ ಮತ್ತು ಸಾಮಾನ್ಯವಾಗಿ ಬಳಸುವ ಸ್ಟೋರ್‌ರೂಂನಲ್ಲಿ ಹಣ ಸಂಗ್ರಹಿಸಬಹುದು ಎಂಬ ಆರೋಪ ನಂಬಲಾಗದಂತಿದೆ ಎಂದಿದ್ದಾರೆ. ಇದು ನನ್ನ ವಾಸಸ್ಥಳದಿಂದ ಪ್ರತ್ಯೇಕವಾಗಿರುವ ಕೋಣೆಯಾಗಿದೆ. ಗೋಡೆಯೊಂದು ನನ್ನ ವಾಸಸ್ಥಳವನ್ನು ಆ ಔಟ್‌ಹೌಸ್‌ನಿಂದ ಪ್ರತ್ಯೇಕಿಸುತ್ತದೆ. ಪತ್ರಿಕೆಗಳಲ್ಲಿ ನನ್ನ ಮೇಲೆ ಆರೋಪ ಹೊರಿಸಿ ಮಾನಹಾನಿಯಾಗುವ ಮೊದಲು ಮಾಧ್ಯಮವು ಸ್ವಲ್ಪ ವಿಚಾರಣೆ ನಡೆಸಬೇಕಿತ್ತು ಎಂದು ನಾನು ಬಯಸುತ್ತೇನೆ ಎಂದು ನ್ಯಾ. ವರ್ಮಾ ಹೇಳಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಈ ಟಾನಿಕ್ ಅನ್ನು ದಿನ ಎರಡು ಸ್ಪೂನ್ ತಗೋಬೇಕು.
ರೋಗಿ : ಆದರೆ ಡಾಕ್ಟರ್, ನಮ್ಮ ಮನೆಯಲ್ಲಿ ಇರೋದೆ ಒಂದು ಸ್ಪೂನ್ ಮಾತ್ರ.

ಮೈಸೂರು ಮಿತ್ರ
ಸೋಮವಾರ, 24 ಮಾರ್ಚ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ.........

ಇದ್ದರೆ ನೆರಳಿನಂತೆ ಇರಿ, ತಲೆಯ ಮೇಲೆ ಬೀಳುವ ಕೊಂಬೆಯಂತಲ್ಲ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಂಕುಳಲ್ಲಿ ದೊಣ್ಣೆ / ಕೈಯಲ್ಲಿ ಶರಣಾರ್ಥಿ

# ಶಿಸ್ತಿಗಾಗಿ ಮಕ್ಕಳನ್ನು ಶಿಕ್ಷಿಸುವುದು ಎಷ್ಟು ಸರಿ...?



ಮಕ್ಕಳು ವಿದ್ಯಾವಂತರಾಗಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಏರಬೇಕು, ಹೆತ್ತವರಿಗೆ ಮತ್ತು ಹುಟ್ಟಿದ ಊರಿಗೆ ಒಳ್ಳೆಯ ಹೆಸರು ತರಬೇಕು ಎನ್ನುವುದು ಎಲ್ಲಾ ಪೋಷಕರ ಹೆಬ್ಬಯಕೆ. ಶಿಸ್ತುಬದ್ಧ ಜೀವನದಿಂದ ಮಕ್ಕಳನ್ನು ಬೆಳೆಸಿ ಪೂರಕ ವಾತಾವರಣ ಕಲ್ಪಿಸಿಕೊಡುವುದರಿಂದ ಮಕ್ಕಳು ಏನಾಗಬೇಕೆಂದು ಬಯಸುತ್ತೇವೆಯೋ ಅದು ಆಗುವುದರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಆಗೇ ಆಗುವುರು. ಮಕ್ಕಳನ್ನು ಶಿಸ್ತುಬದ್ಧತೆಯಿಂದ ವಿವೇಚನಾಶೀಲರಾಗಿ ಬೆಳೆಸಬೇಕೆಂದರೆ ಅವರನ್ನು ದಂಡಿಸಬೇಕೆ ಅಥವಾ ಬೇಡವೆ? ಎಂಬುದು ಪ್ರಶ್ನೆ. ಶಿಸ್ತು ಪಾಲನೆಗೆ ನಿಯಮಗಳು ಇರುತ್ತವೆ, ನಿಯಮಗಳು ಕಠಿಣವಾದರೆ ಪಾಲಿಸಲು ಕಷ್ಟವಾಗುತ್ತದೆ, ಪಾಲಿಸದಿದ್ದರೆ ಶಿಸ್ತನ್ನು ಕಾಣಲಾಗದು, ಶಿಸ್ತು ಇಲ್ಲದಿದ್ದರೆ ಒಳ್ಳೆಯ ಮಕ್ಕಳನ್ನಾಗಿ ಬೆಳೆಸುವುದು ಅಸಾಧ್ಯ, ಓ... ಇದೊಂದು ಸಂಕೀರ್ಣವಾದ ಸಮಸ್ಯೆಯಂತೆ ಕಾಣುವುದಲ್ಲ!.

ಶಿಸ್ತನ್ನು ಮಕ್ಕಳಲ್ಲಿ ಬಲವಂತವಾಗಿ ಹೇರುವುದರಿಂದ ಅವರಿಗೆ ಹೊರೆಯಾಗುವುದು, ಪ್ರೀತಿಗೆ ಏನು ಬೇಕಾದರು ಮಾಡುವ ಶಕ್ತಿ ಇದೆ. ಪ್ರೀತಿಯಿಂದ ಶಿಸ್ತನ್ನು ಮಕ್ಕಳಲ್ಲಿ ತರುವುದಕ್ಕೆ ಸಾಧ್ಯವಿದೆ, ಕೋಪವನ್ನು ಶಮನಗೊಳಿಸಿ ಪ್ರೀತಿ ತಂದುಕೊಳ್ಳುವುದರಿಂದ ಮಕ್ಕಳಿಗೂ ಕಿರಿಕಿರಿ ಆಗದು ಹಾಗೂ ಪೋಷಕರು ಪಶ್ಚಾತ್ತಪಕ್ಕೆ ಒಳಗಾಗುವ ಪ್ರಮೇಯವೂ ಇರುವುದಿಲ್ಲ.

ನಾವು ಚಿಕ್ಕವರಿದ್ದಾಗ ಮೈಮೂಳೆ ಮುರಿಯುವಂತೆ ತಂದೆ ತಾಯಿಯರಿಂದ ಹೊಡೆಸಿಕೊಂಡಿದ್ದೇವೆ. ಹೊಡೆತ ತಾಳಲಾರದೆ ತಪ್ಪಿಸಿಕೊಂಡು ಓಡಿಹೋಗಿದ್ದು ಇದೆ. ಕೆಲವು ಮಕ್ಕಳು ನೋವು ತಡೆಯಲಾರದೆ ಮನೆಯನ್ನು ಬಿಟ್ಟು ಹೋಗಿರುವ ಪ್ರಕರಣಗಳೂ ಇವೆ. ಹಿಂಸೆ ಸಹಿಸಲಾರದೆ ಮನಸ್ಸಿನಲ್ಲಿ ಇವರಿಗೆ ಮಕ್ಕಳಾಗಿ ಹುಟ್ಟಬಾರದಿತ್ತು ಎಂದೆನಿಸುವುದುಂಟು. ಶಾಲೆಗೆ ಹೋದರೆ ಅಲ್ಲಿಯೂ ನಮಗೆ ಮೊದಲು ಕಾಣುತ್ತಿದ್ದದ್ದು ಮೇಷ್ಟ್ರ ಕೈಯಲ್ಲಿನ ಕೋಲು.

ಇಂದಿನ ಕಾಲದ ಮಕ್ಕಳು ಪುಣ್ಯವಂತರು. ಶಾಲೆಗಳಲ್ಲಿ ಗುರುಗಳು ಕೈಯಲ್ಲಿ ಕೋಲನ್ನು ಹಿಡಿಯುವಂತಿಲ್ಲ, ಕೋಲನ್ನು ಕ್ಲಾಸ್ ರೂಂಗೆ ತರದಂತೆ ನಿಯಮವನ್ನೇ ಸರ್ಕಾರ ಮಾಡಿದೆ, ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಕೈಯಲ್ಲಿ ಹೊಡೆಯುವುದಿರಲಿ ಮುಟ್ಟಲು ಹೆದರುತ್ತಾರೆ. ಗುರುಗಳು ಹೆಣ್ಣು ಮಕ್ಕಳಿಗೆ ಲೈಂಗಿಕ ಹಿಂಸೆ ನೀಡುತ್ತಾರೆ ಎಂಬ ಸುದ್ದಿಗಳು ಮಾಧ್ಯಮಗಳಲ್ಲಿ ಆಗಾಗ್ಗೆ ಬರುತ್ತಿರುವುದರಿಂದ ಹೆದರಿ ಹೆಣ್ಣು ಮಕ್ಕಳಿಂದ ಮಾರು ದೂರ ನಿಂತು ಮಾತನಾಡುವ ಸ್ಥಿತಿಯಲ್ಲಿ ಇದ್ದಾರೆ.

ಮಕ್ಕಳನ್ನು ಹೆತ್ತು ಈಗ ಪೋಷಕರಾಗಿರುವವರು ಮೂರು-ನಾಲ್ಕು ದಶಕಗಳ ಹಿಂದೆ ಮಕ್ಕಳಾಗಿದ್ದವರೇ, ಆಗಿನ ಮಕ್ಕಳು ಮನೆಯಲ್ಲೂ ಹೆತ್ತವರಿಂದ ಹೊಡೆತ, ಶಾಲೆಗಳಲ್ಲೂ ಟೀಚರ್‌ಗಳಿಂದ ಚಡಿ ಏಟು, ಹೊಡೆತ ತಿನ್ನದ ದಿನಗಳಿಲ್ಲ ಹಾಗೂ ಹೊಡೆಸಿಕೊಳ್ಳದಿದ್ದ ಮಕ್ಕಳಿರಲಿಲ್ಲ. ಮಾತಿ ಮಾತಿಗೂ ಬೈಗುಳಗಳು, ತಪ್ಪು ಮಾಡಿದನೆಂದರೆ ಆ ಮಗುವಿಗೆ ಶಿಕ್ಷೆ ಗ್ಯಾರಂಟಿ. ಕ್ಲಾಸ್ ರೂಂಗೆ ಟೀಚರ್‌ಗಳಿಗಿಂತ ಮೊದಲು ಹೊಡೆಯುವ ಬೆತ್ತ ಬರುತ್ತಿತ್ತು ಎಷ್ಟೋ ಬಾರಿ ಗೆರೆ ಹಾಕುವ ರೂಲ್ ದೊಣ್ಣೆಯಲ್ಲಿ ಹೊಡೆದಿದ್ದನ್ನು ನಾನು ಕಂಡಿದ್ದೇನೆ.

ಟೀಚರ್‌ಗಳು ಹೊಡೆದರೆಂದು ಮನೆಯಲ್ಲಿ ದೂರು ಸಲ್ಲಿಸುವಂತಿರಲಿಲ್ಲ. ಅಲ್ಲಿ ಅಪ್ಪ ಅಮ್ಮನಿಗೆ ಹೇಳಿದರೆ ಏನ್ ತಪ್ಪು ಮಾಡ್ದೆ ಎಂದು ಮನೆಯಲ್ಲೂ ಏಟು ಬೀಳುತ್ತಿದ್ದವು. ಸಣ್ಣಪುಟ್ಟ ತಪ್ಪುಗಳಿಗೆಲ್ಲ ಎರಡೂ ಕಡೆಗಳಲ್ಲಿ ಮಕ್ಕಳು ಏಟು ತಿನ್ನುವುದು ಹಿಂದೆ ಸಾಮಾನ್ಯವಾಗಿತ್ತು. ಆ ದಿನಗಳಲ್ಲಿ ಶಿಕ್ಷೆ ಸಹಿಸಲಾಗದೆ ಸ್ಕೂಲ್‌ನ್ನು ಬಿಟ್ಟವರು ಬಹಳ ಮಂದಿ.

ಆ ಕಾಲಘಟ್ಟದಲ್ಲಿ ಮಕ್ಕಳನ್ನು ಶಿಕ್ಷಿಸುವುದು ಬೋದನೆಯಷ್ಟೇ ಪ್ರಾಮುಖ್ಯತೆ ಹೊಂದಿತ್ತು. ಬದಲಾದ ಕಾಲವಿದು ಮಕ್ಕಳನ್ನು ಟೀಚರ್‌ಗಳಿರಲಿ ಹೆತ್ತವರು ಸಹ ಶಿಕ್ಷಿಸುವಂತಿಲ್ಲ. ಇದರಿಂದಾಗಿ ಇಂದು ಕಾನ್ವೆಂಟ್‌ಗಳನ್ನು ತ್ಯಜಿಸುವ ಸಂಖ್ಯೆ ತೀರ ವಿರಳ.

ಯಾವುದೇ ವ್ಯಕ್ತಿ ಮತ್ತೊಬ್ಬರಿಗೆ ಹೊಡೆಯುವುದು ಕ್ರಿಮಿನಲ್ ಅಪರಾಧ. ಇಲ್ಲಿ ನಮ್ಮ ಮಕ್ಕಳನ್ನು ಹೊಡೆಯುವುದು ಕೂಡ ಬೇರೊಬ್ಬರಿಗೆ ಹೊಡೆದಂತೆಯೇ ಆಗುವುದರಿಂದ ಮಕ್ಕಳಿಗೆ ಹೊಡೆಯುವುದು ಕ್ರಿಮಿನಲ್ ಕೃತ್ಯ ಎನಿಸುತ್ತದೆ. ಹೊಡೆಯುವವರೂ ಕ್ರಿಮಿನಲ್‌ಗಳಾಗಿ ಬಿಡುತ್ತಾರೆ. ದೇವರು ನಮಗೆ ಕೈಕೊಟ್ಟನೆಂದು ಹೊಡೆಯುವುದನ್ನು ಕಲಿತುಬಿಟ್ಟಿದ್ದೇವೆ. ಪ್ರಾಣಿಗಳು ತಮ್ಮ ಮರಿಗಳಿಗೆ ಹೊಡೆಯುವುದನ್ನು ಕಂಡಿದ್ದೇವೆಯೇ. ಬಹುಶಃ ಅವುಗಳಿಗೆ ಕೈ ಇಲ್ಲದಿರುವುದರಿಂದ ಹೊಡೆಯುತ್ತಿಲ್ಲವೇ?.

ಮಕ್ಕಳನ್ನು ಶಿಕ್ಷಿಸದೆ ಬೆಳೆಸುವುದು ಹೇಗೆ? ಶಿಕ್ಷಿಸುವುದು ಒಳ್ಳೆಯದೇ ಅಥವಾ ಕೆಟ್ಟದ್ದೇ?. ಬಾಲ್ಯದಲ್ಲಿ ಮಕ್ಕಳನ್ನು ಮುದ್ದಿಸುವಂತೆ ಶಿಕ್ಷಿಸುವುದು ಇದ್ದೇ ಇರುತ್ತದೆ. ಸಣ್ಣಪುಟ್ಟ ಪ್ರಮಾಣದಲ್ಲಿಯೂ ಹೊಡೆಯದೆ ಯಾರೂ ಮಕ್ಕಳನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ಮಕ್ಕಳನ್ನು ಶಿಕ್ಷಿಸುವುದು ಮಾನವನ ಬದುಕಿನ ಭಾಗವಾಗಿ ಹಿಂದಿನಿಂದಲೂ ಬೆಳೆದು ಬಂದಿದೆ. ಇದು ಕೆಲವು ಪೋಷಕರು ತಮ್ಮ ಮಕ್ಕಳ ಮೇಲೆ ತೋರುವ ಕ್ರೌರ್ಯಕ್ಕೆ ಕಾರಣವಾಗಿದೆ, ಏಕೆಂದರೆ ಚಿಕ್ಕವರಿದ್ದಾಗ ಅವರು ಹೊಡೆಸಿಕೊಂಡೇ ಬೆಳೆದಿರುತ್ತಾರೆ ಹಾಗಾಗಿ, ನಾನೂ ನನ್ನ ಮಕ್ಕಳನ್ನು ಹೊಡೆದು ಬಡಿದು ಬೆಳೆಸಬೇಕೆಂಬ ಗುಣ ರಕ್ತಗತವಾಗಿ ಬಂದುಬಿಟ್ಟಿರುತ್ತದೆ.

> ಮಕ್ಕಳಿಗೆ ಹೊಡೆಯಬೇಕೋ? ಬೇಡವೋ? ಎಂಬ ನಿರ್ಧಾರ ಪೋಷಕರಾದ ನಿಮ್ಮ ಪರಿಮಿತಿಯೊಳಗೆ ಬರುತ್ತದೆ. ಹೊಡೆದು ಶಿಸ್ತು ಕಲಿಸಿ ದೊಡ್ಡ ಮನುಷ್ಯನನ್ನಾಗಿ(ಶಿಕ್ಷೆಯು ದಾರಿ ತಪ್ಪಿಸುವುದು ಉಂಟು) ಬೆಳೆಸಿ ಮಕ್ಕಳಿಂದ ದೂರವಾಗುತ್ತೀರಾ? ಇಲ್ಲ ಪ್ರೀತಿಯಿಂದ ಸಾಕಿ ಸಜ್ಜನರನ್ನಾಗಿಸಿ ಅವರೊಟ್ಟಿಗೆ ಅಂತ್ಯ ಕಾಲದ ಬದುಕನ್ನು ನೆಮ್ಮದಿಯಿಂದ ಕಳೆಯುತ್ತಿರಾ?.

ಅನುಮಾನವಿಲ್ಲ ಹೆತ್ತವರು ತಮ್ಮ ಮಕ್ಕಳನ್ನು ಪ್ರೀತಿಸುತ್ತಾರೆ, ಸಿಟ್ಟಿನಲ್ಲಿ ಹೊಡೆಯುತ್ತಾರೆ. ನಂತರ ಮಕ್ಕಳು ನೋವು ಅನುಭವಿಸುವುದಲ್ಲದೆ ಹೊಡೆದ ತಪ್ಪಿಗೆ ಅವರು ಸಹ ಪಶ್ಚಾತ್ತಾಪ ಪಡುತ್ತಾರೆ. ಇಬ್ಬರೂ ನೋವು ಅನುಭವಿಸುವ ಬದಲು ಹೊಡೆಯಲು ಕಾರಣ ಹಾಗೂ ಹೊಡೆಯದೆ ಹೇಗೆ ತಿದ್ದಬಹುದು ಎಂಬುದನ್ನು ಅರಿತರೆ ಸುಧಾರಿಸುವ ಸಾಧ್ಯತೆ ಇದೆ.

ತಪ್ಪು ಮಾಡಿದ ಮಕ್ಕಳಿಗೆ ಹೊಡೆದಾಗ ಪೋಷಕರಿಗೆ ಅಥವಾ ಗುರುವಿಗೆ ಆ ಕ್ಷಣದಲ್ಲಿ ಸಂತೋಷ ಅಥವಾ ಸಮಾದಾನ ಸಿಗಬಹುದು, ಶಿಕ್ಷಿಸುವುದರಿಂದ ಮುಂದೆ ಸರಿ ಹೋಗಬಹುದೆಂಬುದು ಅವರು ತಾವು ಹೊಡೆಸಿಕೊಂಡು ಬೆಳೆದು ಬಂದ ದಾರಿಯಲ್ಲಿ ಕಂಡುಕೊಂಡಿರುವಂತಹದ್ದು. ತಪ್ಪು ಮಾಡುವುದು ಸಹಜ ಗುಣ ಎನ್ನುವುದು ಗೊತ್ತಿದೆ ಆದರೂ ಶಿಕ್ಷಿಸುವುದರಿಂದಲೇ ಸರಿ ಆಗುತ್ತದೆ ಎಂಬುದು ತಪ್ಪು ತಿಳುವಳಿಕೆ.

ಯಾವಾಗಲೂ ಮಕ್ಕಳಿಗೆ ಹೊಡೆಯುತ್ತಲೇ ಇದ್ದರೆ, ಆ ಮಕ್ಕಳು ಮೊಂಡು ಬಿದ್ದು ಮಾಡುವ ತಪ್ಪುಗಳನ್ನು ಪದೇ ಪದೇ ಮಾಡುವುದುಂಟು. ಶಿಕ್ಷೆಯ ಪರಿಮಾಣ ಊಟದಲ್ಲಿನ ಉಪ್ಪಿನಂತೆ ಅಲ್ಪ ಪ್ರಮಾಣದಲ್ಲಿ ಇದ್ದರೆ ಒಳ್ಳೆಯದು. ಇದಕ್ಕಿಂತಲೂ ಮತ್ತೊಂದು ರೀತಿಯ ದಂಡನೆ ಪೋಷಕರಿಂದ ಆಗುವಂತಹದ್ದು, ತಮ್ಮಲ್ಲಿರುವ ಮಾನಸಿಕ ಒತ್ತಡವನ್ನು ಶಮನವಾಗುವುದಕ್ಕೆ ಮಕ್ಕಳನ್ನು ರೇಗುವುದು ಮತ್ತು ಹೊಡೆಯುವುದನ್ನು ಮಾಡುವುದುಂಟು, ಆ ಸಂದರ್ಭಗಳಲ್ಲಿ ಮಕ್ಕಳಲ್ಲಿ ತೊಳಲಾಟ ಉಂಟಾಗುವುದು ಏನೂ ತಪ್ಪು ಮಾಡದಿದ್ದರೂ ನನಗೆ ಹೊಡೆದರಲ್ಲ ಎನ್ನುವುದು ಮನಸ್ಸನ್ನು ಘಾಸಿಗೊಳಿಸುತ್ತದೆ. ಶಿಕ್ಷಿಸಿದಾಕ್ಷಣ ಮಾಡಿದ ತಪ್ಪುಗಳು ಸರಿ ಆಗುವುದಿಲ್ಲ. ತಪ್ಪು ಮಾಡುವ ಮೊದಲೇ ಮಕ್ಕಳಿಗೆ ಸರಿ ಯಾವುದು? ತಪ್ಪು ಯಾವುದು? ತಿಳಿಸುವುದರಿಂದ ಶಿಕ್ಷೆಗೆ ಆಸ್ಪದ ಇರುವುದಿಲ್ಲ.

ತಪ್ಪು ಮಾಡಿದ್ದರ ಮೂಲ ಕಾರಣ ತಿಳಿದು ಅದರ ಪರಿಹಾರ ಕಂಡುಕೊಳ್ಳುವುದರ ಕಡೆಗೆ ಯಾರೂ ಗಮನಹರಿಸುವುದಿಲ್ಲ. ನಯವಾಗಿ ಹೇಳುವ ತಿಳುವಳಿಕೆ ಮಕ್ಕಳಿಗೆ ಬೇಗ ಮನವರಿಕೆ ಆಗುವುದು. ಹೊಡೆದುಬಡಿಯುವುದರಿಂದ ಆಂತರಿಕವಾಗಿ ಕ್ರೌರ್ಯತ್ವ ಮಕ್ಕಳಲ್ಲಿ ಬೆಳೆಯುವುದಕ್ಕೆ ಕಾರಣವಾಗುವುದು. ಶಿಕ್ಷೆಗೆ ಹೆದರಿ ಒಳ್ಳೆಯರಾಗುವ ಮಕ್ಕಳು ಹೊರಗಿನ ಬದುಕಿನಲ್ಲಿ ಬೇರೆಯದೇ ಆಗಿರುತ್ತಾರೆ. ಮಕ್ಕಳನ್ನು ಪ್ರೀತಿಯಿಂದ ಶಿಕ್ಷಿಸಿ ಶಿಸ್ತಾಗಿ ಬೆಳೆಸುವುದರಿಂದ ಶಾಶ್ವತವಾಗಿ ಪ್ರಭಾವಿತರಾಗುತ್ತಾರೆ. ಮಹಾತ್ಮ ಗಾಂಧೀಜಿಯವರು ಹೇಳಿರುವ ಮಾತು ಇಲ್ಲಿ ನೆನಪಿಗೆ ಬರುವುದು.

Power is of two kinds. One is obtained by the fear of punishment and the other by acts of love. Power based on love is a thousand times more effective and permanent then the one derived from fear of punishment.

ಪ್ರೀತಿಯಿಂದ ಪಡೆದ ಪ್ರತಿಫಲಕ್ಕೆ ಹೆಚ್ಚು ಶಕ್ತಿ, ಸ್ವಾತಂತ್ರ್ಯವನ್ನು ಪಡೆದಿದ್ದು ಹಾಗೆ ಅಲ್ಲವೇ?, ಹಿಂಸೆಯ ಬದಲಾಗಿ ಅಹಿಂಸೆಯಿಂದ ಗಳಿಸಿಕೊಂಡ ಸ್ವಾತಂತ್ರ್ಯದಿಂದಾಗಿ ನಮಗೆ ದೇಶವೂ ಸಿಕ್ಕಿತು, ಅಂಗ್ಲರ ಸ್ನೇಹವೂ ಉಳಿಯಿತು. ನಮ್ಮ ಮಕ್ಕಳನ್ನು ಬೆಳೆಸುವುದರಲ್ಲಿ ಇದೇ ತತ್ವ ಅಡಗಿದೆ. ಪ್ರೀತಿಯಿಂದ ಬೆಳೆಸಿದರೆ ಮುಪ್ಪಿನಲ್ಲಿ ನಮಗೆ ನಮ್ಮ ಮಕ್ಕಳು ಸರಿದಾರಿಯಲ್ಲಿ ಬೆಳೆದು ದೊಡ್ಡವರಾಗುವುದಲ್ಲದೆ ದೂರವಾಗದಂತೆ ನಮ್ಮೊಡನೆ ಇರುತ್ತಾರೆ.

ಹೆತ್ತವರಿಂದ ಸದಾ ಹಿಂಸೆಗೆ ಒಳಪಡುವ ಮಕ್ಕಳು ತಮ್ಮ ಮನಸ್ಸಿನಲ್ಲಿ ಯಾವಾಗ ನಮ್ಮ ಅಪ್ಪ ಸಾಯುತ್ತಾನೋ ಎಂದು ಅಂದುಕೊಳ್ಳದೆ ಇರಲಾರೆವು. ಇದೇ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ತನ್ನದೂ ಒಂದು ಕುಟುಂಬ ಆದಾಗ ತನ್ನೊಂದಿಗೆ ಯಾವಾಗಲೂ ಹೊಡೆಯುತ್ತಿದ್ದ ಅಪ್ಪನನ್ನು ಇಟ್ಟುಕೊಳ್ಳದೆ ವೃದ್ಧಾಶ್ರಮಕ್ಕೆ ಕಳುಹಿಸುತ್ತಾನೆ. ಪ್ರೀತಿಯಿಂದ ಕಾಣದೆ ಸದಾ ಹೊಡೆಯುವ ಅಪ್ಪನೊಂದಿಗೆ ಮಕ್ಕಳು ಸಲುಗೆ ಮತ್ತು ಸ್ನೇಹದಿಂದ ಇರಲಾರೆವು. ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲಾರೆವು.

ಶಿಕ್ಷಿಸುತ್ತಿದ್ದ ಅಪ್ಪನಲ್ಲಿ ಇದ್ದದ್ದು ನನ್ನ ಮಗ/ಮಗಳು ಶಿಸ್ತಿನಿಂದ ಬೆಳೆದು ದೊಡ್ಡವರಾಗಿ ಒಳ್ಳೆಯ ನಾಗರೀಕ ಆಗಬೇಕು ಎಂಬ ಸದುದ್ದೇಶ, ಬುದ್ಧಿ ಹೇಳುವ ರೀತಿ ಸರಿ ಇಲ್ಲದ್ದರಿಂದ ಒಳ್ಳೆಯ ಮಗುವಾಗಿ ಬೆಳೆದರೂ ಪೋಷಕರೊಟ್ಟಿಗೆ ಬೆರೆಯಲಾರದ ಮನಸ್ಥಿತಿಯಲ್ಲಿ ಬೆಳೆಯುವುದುಂಟು, ಇದು ಮುಪ್ಪಿನ ಕಾಲಕ್ಕೆ ಹೆತ್ತವರಿಗೆ ನೋವು ತರುವಂತಹದ್ದು. ಮಕ್ಕಳಿಗೆ ಹೊಡೆಯುವುದರಿಂದ ಆ ಮಗುವಿಗೆ ಮತ್ತೊಬ್ಬರಿಗೆ ನಾನೂ ಹೊಡೆಯಬಹುದೆಂಬ ಮನೋಸ್ಥೈರ್ಯ ತುಂಬಿದಂತಾಗುತ್ತದೆ, ಇದು ಹಿಂಸೆಗೆ ಪೋಷಕರು ದಾರಿ ಮಾಡಿಕೊಟ್ಟಂತೆ ಆಗುವುದು.

ಬಲಿಷ್ಠರು ದುರ್ಬಲರನ್ನು ಹೊಡೆಯುವುದಕ್ಕೆ ಅರ್ಹರು, ದುರ್ಬಲನಾದವನು ಬಲಿಷ್ಠನಾದಾಗ ಅವನೂ ಅದೇ ಅರ್ಹತೆಯನ್ನು ಪಡೆಯುತ್ತಾನೆ. ಮುಪ್ಪು ದುರ್ಬಲತೆಯ ಮತ್ತೊಂದು ರೂಪ. ಮುಪ್ಪಿನ ಪೋಷಕರಿಗೆ ಮಗನಾದವನು ಬಲಿಷ್ಠನಾದಾಗ ಹೊಡೆಯಲಾರ ಆದರೆ ಹೊಡೆಯುವುದಕ್ಕಿಂತ ಹೆಚ್ಚು ನೋವನ್ನು ಬೇರೆಯದೇ ಆದ ವಿದದಲ್ಲಿ ಕೊಡುತ್ತಾನೆ. ಇದರಿಂದ ಹೊರತಾಗಿ ನಾವುಗಳು ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕಿದೆ, ಸರಳವಿದ್ದರೂ ಪಾಲಿಸುವಲ್ಲಿ ಎಡವುತ್ತಿರುವುದರಿಂದ ಮಕ್ಕಳಿಗೂ ನೆಮ್ಮದಿ ಇಲ್ಲ, ಹೆತ್ತವರಿಗೂ ಇಲ್ಲದಂತಾಗಿದೆ.

ಮಕ್ಕಳನ್ನು ಹೆತ್ತು ಸಲಹುತ್ತಿರುವ ಪೋಷಕರು ಒಳ್ಳೆಯ ಉದ್ದೇಶಕ್ಕಾಗಿಯೇ ಇರಬಹುದು ದಂಡಿಸಿ ಬೆಳೆಸುವುದು ಆದರೆ ಇದಕ್ಕಿಂತ ಪ್ರೀತಿಸಿ ಬೆಳೆಸುವುದರಿಂದ ಮುಂದೆ ಮಕ್ಕಳ ಭವಿಷ್ಯವೂ ಚೆನ್ನಾಗಿರುತ್ತದೆ ಜತೆಗೆ ಮುಪ್ಪಿನ ಕಾಲದ ಜೀವನ ನೆಮ್ಮದಿ ಕಾಣುತ್ತದೆ. ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ ಪ್ರತಿಷ್ಠಿತ ಸ್ಥಾನದಲ್ಲಿ ಇರುವ ಗಣ್ಯರು ಸಹ ತಮ್ಮ ಮಕ್ಕಳನ್ನು ಸರಿದಾರಿಗೆ ತರಲಾರದೆ ಸೋತು ಕುಟುಂಬಗಳು ಚಿದ್ರವಾಗಿವೆ, ಕುಟುಂಬದಲ್ಲಿ ಬಾಂಧವ್ಯಗಳಿಲ್ಲದಂತೆ ಬದುಕುತ್ತಿದ್ದಾರೆ.

ಮಕ್ಕಳಿಗೆ ಹೊಡೆಯಬೇಕೋ? ಬೇಡವೋ? ಎಂಬ ನಿರ್ಧಾರ ಪೋಷಕರಾದ ನಿಮ್ಮ ಪರಿಮಿತಿಯೊಳಗೆ ಬರುತ್ತದೆ. ಹೊಡೆದು ಶಿಸ್ತು ಕಲಿಸಿ ದೊಡ್ಡ ಮನುಷ್ಯನನ್ನಾಗಿ (ಶಿಕ್ಷೆಯು ದಾರಿ ತಪ್ಪಿಸುವುದು ಉಂಟು) ಬೆಳೆಸಿ ಮಕ್ಕಳಿಂದ ದೂರವಾಗುತ್ತೀರಾ? ಇಲ್ಲ ಪ್ರೀತಿಯಿಂದ ಸಾಕಿ ಸಜ್ಜನರನ್ನಾಗಿಸಿ ಅವರೊಟ್ಟಿಗೆ ಅಂತ್ಯ ಕಾಲದ ಬದುಕನ್ನು ನೆಮ್ಮದಿಯಿಂದ ಕಳೆಯುತ್ತಿರಾ?.



ಮಿರ್ಲೆ ಚಂದ್ರಶೇಖರ
ಮೊ: 9916129654

## ನಿಮ್ಮ ಪತ್ರಗಳು

### ■ ನಿಲ್ದಾಣ ಬಿಟ್ಟು ಬೇರೆಡೆ ಸಿಟಿ ಬಸ್ಸುಗಳ ನಿಲುಗಡೆ

ಮಾನ್ಯರೆ,



ಮೈಸೂರಿನ ಕೆ.ಜಿ.ಕೊಪ್ಪಲು ನ್ಯೂ ಕಾಂತರಾಜ್ ಅರಸ್ ರಸ್ತೆಯ ಶ್ಯಾಮ್ ಸ್ಟೂಡಿಯೋ ವೃತ್ತದ ಕೂಗಳತೆ ದೂರದಲ್ಲಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ನಗರಪಾಲಿಕೆ ವತಿಯಿಂದ ನಿರ್ಮಿಸಲಾಗಿರುವ ಬಸ್ ತಂಗುದಾಣವಿದೆ. ಆದರೂ ಸಹ, ವಿಜಯ ಬ್ಯಾಂಕ್ ಸರ್ಕಲ್ ಕಡೆಯಿಂದ ಅಕ್ಷಯ ಭಂಡಾರ್ ಮಾರ್ಗವಾಗಿ ಬರುವ ಕೆಎಸ್‌ಆರ್‌ಟಿಸಿ ನಗರ ಬಸ್‌ಗಳನ್ನು ಈ ತಂಗುದಾಣದಲ್ಲಿ ನಿಲ್ಲಿಸದೆ, ಶ್ಯಾಮ್ ಸ್ಟುಡಿಯೋ ವೃತ್ತದ ಬಳಿ ನಿಲ್ಲಿಸಲಾಗುತ್ತಿದೆ. ಈ ವೃತ್ತದ ಸಮೀಪದಲ್ಲೇ ಶಾಲಾ-ಕಾಲೇಜು, ಆಸ್ಪತ್ರೆ ಇರುವುದರಿಂದ ಜನಸಂದಣಿ ಹಾಗೂ ವಾಹನ ದಟ್ಟಣೆ ಜಾಸ್ತಿಯಿದ್ದು, ಈ ವೃತ್ತದಲ್ಲಿ ಬಸ್ಸನ್ನು ನಿಲ್ಲಿಸಿದಾಗ ಆ ಕಡೆಯಿಂದ ಕಾಂತರಾಜ್ ಅರಸ್ ರಸ್ತೆ ಎಡಭಾಗಕ್ಕೆ ತಿರುವು ತೆಗೆದುಕೊಳ್ಳುವ ಮತ್ತು ಈ ಕಡೆಯಿಂದ ನ್ಯೂ ಕಾಂತರಾಜ್ ಅರಸ್ ರಸ್ತೆಯ ಬಲ ಭಾಗಕ್ಕೆ ತಿರುವು ತೆಗೆದುಕೊಳ್ಳುವ ವಾಹನಗಳು ಕಾಣುವುದಿಲ್ಲವಾದ್ದರಿಂದ ಇಲ್ಲಿ ದಿನನಿತ್ಯ ಅಪಘಾತಗಳು ಸಂಭವಿಸುತ್ತಲೇ ಇವೆ. ಇತ್ತೀಚೆಗೆ ಈ ವೃತ್ತದಲ್ಲಿ ಕಾಲೇಜು ವಿದ್ಯಾರ್ಥಿನಿ ಕಾಲ ಮೇಲೆ ಬಸ್‌ನ ಚಕ್ರ ಹರಿದು ಗಂಭೀರ ಗಾಯವಾಗಿತ್ತು. ಹೀಗಾಗಿ, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಬಸ್ ಚಾಲಕರು ಮತ್ತು ನಿರ್ವಾಹಕರಿಗೆ ಬಸ್‌ಗಳನ್ನು ನಿಗದಿತ ಸ್ಥಳದಲ್ಲಿಯೇ ನಿಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿ ಮುಂದಾಗಬಹುದಾದ ಅಪಾಯವನ್ನು ತಪ್ಪಿಸಬೇಕಿದೆ. **-ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

### ■ ಸರ್ಕಾರ ಉಚಿತ ವಿದ್ಯುತ್ ಯೂನಿಟ್ ಹೆಚ್ಚಿಸಲಿ

ಮಾನ್ಯರೆ,

ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ 'ಐದು ಗ್ಯಾರಂಟಿ' ಯೋಜನೆಗಳ ಪೈಕಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ಗೃಹ ಜ್ಯೋತಿ ಯೋಜನೆಯಡಿ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ 200 ಯೂನಿಟ್‌ಗಳ ಬದಲಾಗಿ ಸರ್ಕಾರ, ಪ್ರತಿ ಕುಟುಂಬವು ವಾರ್ಷಿಕವಾಗಿ ಬಳಸಿರುವ ವಿದ್ಯುತ್ ಯೂನಿಟ್‌ಗಳ ಆಧಾರದ ಮೇಲೆ ಇಂತಿಷ್ಟು ಉಚಿತ ಯೂನಿಟ್ ನೀಡುವುದಾಗಿ ಹೇಳಿ ತದನಂತರದ ದಿನಗಳಲ್ಲಿ ಹೆಚ್ಚುವರಿಯಾಗಿ ಶೇ.10ರಷ್ಟು ಉಚಿತ ವಿದ್ಯುತ್ ಯೂನಿಟ್‌ಗಳನ್ನು ಸೇರ್ಪಡೆಗೊಳಿಸಲಾಯಿತು. ಸರ್ಕಾರದ ಈ ಕ್ರಮ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಸಾಕಷ್ಟು ನೆರವಾಗಿತ್ತು.

ಆದರೆ ಈ ಹಿಂದೆ ವಾರ್ಷಿಕವಾಗಿ ಕಡಿಮೆ ವಿದ್ಯುತ್ ಬಳಸಿರುವ ಕುಟುಂಬಗಳಿಗೆ ಉಚಿತ ವಿದ್ಯುತ್ ಯೂನಿಟ್‌ಗಳ ನಂತರ ಹೆಚ್ಚಿನದಾಗಿ ಬಳಸಿರುವ ಯೂನಿಟ್‌ಗಳಿಗೆ ಪ್ರಸ್ತುತ ವಿದ್ಯುತ್ ಬಿಲ್ ಪಾವತಿಸುವುದು ಅನಿವಾರ್ಯವಾಗಿದೆ. ಸರ್ಕಾರ ಗೃಹಜ್ಯೋತಿ ಆರಂಭಿಸಿದ ದಿನದಿಂದ ಹಲವಾರು ಬಾರಿ ವಿದ್ಯುತ್ ದರ ಪರಿಷ್ಕರಣೆ ಮಾಡಿದೆ. ಇದೇ ಏಪ್ರಿಲ್ ಒಂದರಿಂದ ಯೂನಿಟ್‌ಗೆ ಮತ್ತೆ 36 ಪೈಸೆ ಹೆಚ್ಚಿಸಿದೆ. ಸರ್ಕಾರ ವರ್ಷಕ್ಕೆ ಎರಡು ಮೂರು ಬಾರಿ ವಿದ್ಯುತ್ ದರವನ್ನು ಏರಿಸುತ್ತಾ ಬಂದಿದ್ದರೂ, ಗೃಹಜ್ಯೋತಿ ಯೋಜನೆಯಡಿ ಕುಟುಂಬಗಳಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಯೂನಿಟ್‌ಗಳಲ್ಲಿ ಯಾವುದೇ ಪರಿಷ್ಕರಣೆ ಮಾಡದಿರುವುದು ದುರ್ದೈವದ ಸಂಗತಿ. ಹೀಗಾಗಿ ಸರ್ಕಾರ ಪ್ರತಿ ಕುಟುಂಬಗಳಿಗೆ ಮಾಸಿಕವಾಗಿ ಪ್ರಸ್ತುತ ನೀಡುತ್ತಿರುವ ಉಚಿತ ವಿದ್ಯುತ್ ಯೂನಿಟ್‌ಗಳನ್ನು ಪರಿಷ್ಕರಿಸಿ ಹೆಚ್ಚುವರಿಯಾಗಿ ಶೇಕಡ 10ರಿಂದ 20ರಷ್ಟು ಯೂನಿಟ್‌ಗಳನ್ನು ನೀಡಿದರೆ ಲಕ್ಷಾಂತರ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಅನುಕೂಲ ವಾದೀತು. ಹೀಗಾಗಿ ಸರ್ಕಾರ ಆದಷ್ಟು ಬೇಗ ಹೆಚ್ಚುವರಿ ಉಚಿತ ವಿದ್ಯುತ್ ಯೂನಿಟ್‌ಗಳನ್ನು ಗೃಹಜ್ಯೋತಿ ಯೋಜನೆಯಡಿ ಗ್ರಾಹಕರಿಗೆ ನೀಡಿ ಬಡ ಕುಟುಂಬಗಳಿಗೆ ನೆರವಾಗಲಿ. **-ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

### ■ ವಂಚನೆ ಪ್ರಕರಣಗಳ ಬಗ್ಗೆ ಜಾಗೃತಿ ವಹಿಸಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದ ಬಸ್ ನಿಲ್ದಾಣ ಹಾಗೂ ಸುತ್ತಮುತ್ತ ವಂಚಕರು ಮುಗ್ಧ ಪ್ರಯಾಣಿಕರನ್ನೂ ವಂಚಿಸುತ್ತಿರುವ ಪ್ರಕರಣಗಳು ದಿನೇ ದಿನೆ ಹೆಚ್ಚುತ್ತಿದೆ. ವಿವಿಧ ರೀತಿಯ ಮೋಸಗಾರರು ಸಾಮಾನ್ಯ ಜನರ ಒಳ್ಳೆಯತನವನ್ನೂ ದುರುಪಯೋಗಪಡಿಸಿಕೊಂಡು ಹಣವನ್ನು ವಸೂಲಿ ಮಾಡುವ ಪ್ರವೃತ್ತಿಗೆ ಕೈ ಹಾಕಿದ್ದಾರೆ. ಕೆಲವು ವಂಚಕರು ಬಂದು ನನ್ನ ಪರ್ಸ್ ಹಾಗೂ ಫೋನ್ ಕಳೆದುಕೊಂಡಿದ್ದೇನೆ, ನಾನು ದೂರ ಪ್ರಯಾಣ ಮಾಡಬೇಕು, ನನಗೆ ಹಣದ ಅವಶ್ಯಕತೆ ಇದೆ, ದಯವಿಟ್ಟು ಸಹಾಯ ಮಾಡಿ ಎಂದು ನಾಟಕ ಮಾಡುತ್ತಾ ಸಾಮಾನ್ಯರ ಗಮನವನ್ನು ಬೇರೆ ಕಡೆ ಸೆಳೆದು ಅವರ ನಗದು, ಚಿನ್ನಾಭರಣ ಹಾಗೂ ಬ್ಯಾಗುಗಳನ್ನು ಲಪಟಾಯಿಸುತ್ತಿದ್ದಾರೆ. ವಂಚಕರು ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಟಾರ್ಗೆಟ್ ಮಾಡುತ್ತಿದ್ದು, ಅವರ ಮೊಬೈಲ್ ಹಾಗೂ ಪರ್ಸ್‌ಗಳನ್ನು ಕಳವು ಮಾಡುತ್ತಿದ್ದಾರೆ. ಇದರಿಂದ ಮುಗ್ಧ ಜನರು ಆರ್ಥಿಕ ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆ ಈ ರೀತಿಯ ವಂಚನೆಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಕೈಗೊಳ್ಳಬೇಕು. ಜೊತೆಗೆ, ಜನರಲ್ಲಿ ಜಾಗೃತಿ ಮೂಡಿಸಲು ವಿಶೇಷ ತಂಡಗಳನ್ನು ರಚಿಸಬೇಕಾಗಿದೆ.

**-ಎನ್.ಎಂ.ವೈಷ್ಣವಿ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.**

### ■ ಹನಿಟ್ರ್ಯಾಪ್ ಪ್ರಕರಣ ಸಿಬಿಐ ತನಿಖೆಯಾಗಲಿ

ಮಾನ್ಯರೆ,

ರಾಜ್ಯದ 48ಕ್ಕೂ ಹೆಚ್ಚಿನ ಶಾಸಕರು, ಗಣ್ಯರು ಹಾಗೂ ಇತರ ಪ್ರಭಾವಿಗಳು ಹನಿಟ್ರ್ಯಾಪ್‌ನಲ್ಲಿ ಸಿಲುಕಿದ್ದಾರೆಂದು ರಾಜ್ಯದ ಸಹಕಾರ ಸಚಿವ ರಾಜಣ್ಣ ಹೇಳಿರುವುದು ರಾಜ್ಯಾದ್ಯಂತ ತಲ್ಲಣವನ್ನುಂಟು ಮಾಡಿದೆ. ಈ ಆರೋಪ ಮಾಡಿರುವವರು ರಾಜ್ಯದ ಓರ್ವ ಪ್ರಭಾವಿ ಸಚಿವರು ಹಾಗೂ ಮುಖ್ಯಮಂತ್ರಿಯವರ ಪರಮಾಪ್ತರಲ್ಲಿ ಒಬ್ಬರಾಗಿದ್ದಾರೆ. ಹನಿಟ್ರಾಪ್‌ನಂತಹ ಹೀನ ದಂಧೆಯಲ್ಲಿ ರಾಜ್ಯದ ಕೆಲವು ಪ್ರಮುಖ ರಾಜಕಾರಣಿಗಳು ತೊಡಗಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಪ್ರಕರಣ ತುಂಬಾ ಗಂಭೀರವಾಗಿರುವುದರಿಂದ ಹಾಗೂ ಈ ಪ್ರಕರಣದಲ್ಲಿ ರಾಜ್ಯದ ಕೆಲವು ಸಚಿವರೇ ಭಾಗಿಯಾಗಿದ್ದಾರೆ ಎಂದು ಹೇಳಲಾಗುತ್ತಿರುವುದರಿಂದ ಈ ಪ್ರಕರಣವನ್ನು ರಾಜ್ಯ ಸರ್ಕಾರ ಸ್ವಯಂಪ್ರೇರಿತವಾಗಿ ಸಿಬಿಐ ತನಿಖೆಗೆ ಒಳಪಡಿಸಿ, ಈ ದಂಧೆಯಲ್ಲಿ ಭಾಗಿಯಾಗಿರುವ ಗೋಮುಖ ವ್ಯಾಘ್ರಗಳ ಮುಖವಾಡ ಕಳಚಬೇಕಾಗಿದೆ.

**-ಕೆ.ವಿ.ವಾಸು, ವಕೀಲರು-ನೋಟರಿ, ವಿವೇಕಾನಂದನಗರ, ಮೈಸೂರು.**

# ನಾಳೆಯಿಂದ ಗುರು ಮಲ್ಲೇಶ್ವರ ದಾಸೋಹ ಶಾಖಾ ಮಠದ ಸುವರ್ಣ ಮಹೋತ್ಸವ

ಮೈಸೂರು,ಮಾ.23(ಜಿಎ)-ಮೈಸೂರು ತಾಲೂಕಿನ ದೇವಲಾಪುರ ಗ್ರಾಮದಲ್ಲಿರುವ ಗುರುಮಲ್ಲೇಶ್ವರ ದಾಸೋಹ ಶಾಖಾ ಮಠದ ಸುವರ್ಣ ಮಹೋತ್ಸವ ಮತ್ತು ಗುರುಮಲ್ಲೇಶ್ವರ ಪ್ರಾರ್ಥನಾ ಮಂದಿರ ಉದ್ಘಾಟನೆ, ಬಸವ ಪುತ್ಥಳಿ ಅನಾವರಣ ಹಾಗೂ ಲಿಂಗೈಕ್ಯ ಶಿವಪ್ಪಸ್ವಾಮಿಗಳ 33ನೇ ವರ್ಷದ ಪುಣ್ಯಾರಾಧನೆಯನ್ನು ಮಾ.25, 26ರಂದು ಏರ್ಪಡಿಸಲಾಗಿದೆ ಎಂದು ಗುರುಮಲ್ಲೇಶ್ವರ ದಾಸೋಹ ಮಠದ ಜಡೇಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾಂತ ಸ್ವಾಮಿಗಳ ನೇತೃತ್ವದಲ್ಲಿ ಈ ಎಲ್ಲಾ ಕಾರ್ಯಕ್ರಮಗಳು ನಡೆಯಲಿವೆ. ಮಾ.25ರಂದು ರಾತ್ರಿ 8 ಗಂಟೆಗೆ ಶ್ರೀಗಳ ಪುಷ್ಪಾಂದೋಳಿಕೋತ್ಸವವು ಮಂಗಳವಾದ್ಯ, ವೀರಗಾಸೆ, ಭಜನೆ, ಹಾಗೂ ವಿವಿಧ ಕಲಾತಂಡಗಳೊಂದಿಗೆ ಶ್ರೀ ಮಠದಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಲಿದೆ ಎಂದರು.

ಮಲ್ಲನಮೂಲೆ ಗುರುಕಂಬಳೀಶ್ವರ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮಿ, ಬೇಬಿ ಬೆಟ್ಟದ ಶ್ರೀರಾಮಯೋಗೀಶ್ವರ ಮಠದ ಶಿವಬಸವಸ್ವಾಮಿ, ಬರಡನಪುರ ಮಹಾಂತೇಶ್ವರ ಮಠದ ಚನ್ನಬಸವಸ್ವಾಮಿ ಭಾಗವಹಿಸಲಿದ್ದಾರೆ. ರಾತ್ರಿ 9.30ಕ್ಕೆ ಗುರುಮಲ್ಲೇಶ್ವರ ಭಜನಾ ತಂಡದಿಂದ ಭಜನೆ ನಡೆಯಲಿದೆ ಎಂದರು.

ಮಾ.26ರಂದು ಮುಂಜಾನೆ 5ಕ್ಕೆ ಶಿವಪ್ಪ ಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕ, ಬೆಳಗ್ಗೆ 6.30ಕ್ಕೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬೆಳಗ್ಗೆ 7.30ಕ್ಕೆ ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಮಹಾಂತ ಸ್ವಾಮಿಗಳಿಗೆ ಪಾದ ಪೂಜೆ ನೆರವೇರಲಿದೆ. ಬೆಳಗ್ಗೆ 9ಕ್ಕೆ ಬದನವಾಳು ಶಿವಕುಮಾರ ಶಾಸ್ತ್ರಿ ಅವರ ನಾದ ಸಂಗಮವಾದ್ಯ ಗೋಷ್ಠಿ ತಂಡದಿಂದ ವಚನ ಗಾಯನ, ಹೊಂಡರಬಾಳು ಶಂಕಿನ ಮಠದ ನೀಲಕಂಠ ಶಿವಾಚಾರ್ಯಸ್ವಾಮಿ ಹಾಗೂ ಮೈಸೂರಿನ ಶ್ರೀ ಮಡಿವಾಳ ಸ್ವಾಮಿ ಮಠದ ಇಮ್ಮಡಿ ಮಡಿವಾಳ ಸ್ವಾಮಿಗಳ ನೇತೃತ್ವದಲ್ಲಿ ಗುರುಮಲ್ಲೇಶ್ವರ ಪ್ರಾರ್ಥನಾ ಮಂದಿರ ಉದ್ಘಾಟನೆ, ಬಸವ ಪುತ್ಥಳಿ ಅನಾವರಣದ ಪೂಜಾ ಕಾರ್ಯ ನೆರವೇರಲಿದೆ. ಸಂಜೆ 4 ಗಂಟೆಗೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಗ್ರಾಮದಲ್ಲಿ ಬಸವೇಶ್ವರ ಹಾಗೂ ಗುರು ಮಲ್ಲೇಶ್ವರರ ಪುತ್ಥಳಿ ಮೆರವಣಿಗೆ ನಡೆಯಲಿದೆ. ರಾತ್ರಿ 9.30ಕ್ಕೆ ದೇವಲಾಪುರದ ಶ್ರೀ ಗುರುಮಲ್ಲೇಶ್ವರ ಕೃಪಾ ಪೋಷಿತ ನಾಟಕ ಮಂಡಳಿಯವರು ಅಭಿನಯಿಸುವ ದಕ್ಷಯಜ್ಞ ಅಥವಾ ಭೃಗು ಮುನಿಯ ಗರ್ವಭಂಗ ನಾಟಕ ಪ್ರದರ್ಶನ ನಡೆಯಲಿದೆ ಎಂದರು.

**ಸಭೆ:** ಬೆಳಗ್ಗೆ 11 ಗಂಟೆಗೆ ಸುತ್ತೂರು ಶ್ರೀ ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಕ್ಷೇತ್ರದ ಸಿದ್ದಲಿಂಗ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ, ಮಹಾಂತ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ ಎಂದರು.

## ವಿದ್ಯಾರ್ಥಿವೇತನ ವಿತರಣೆ...



**ಮೈಸೂರಿನ ಕೆಹೆಚ್‌ಬಿ ಕಾಲೋನಿ ಹೂಟಗಳ್ಳಿಯಲ್ಲಿ ಸುದರ್ಶನ್ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಾಸ್, ಸಹನಾ, ರತೇಶ್, ತೇಜಸ್ವಿನಿ, ರೋಹಿತ್, ಸಾನಿತ್ಯಗೆ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಎನ್.ಶ್ರೀನಿವಾಸ್ ಅವರು 2000 ರೂ. ವಿದ್ಯಾರ್ಥಿವೇತನ ವಿತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಶಿಕ್ಷಣ ತಜ್ಞ ಮೇಹಾ.ಪ್ರಕಾಶ್, ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಜರಾಗಿದ್ದರು.**

## ಇಂದು ವಿಶ್ವ ಕ್ಷಯರೋಗ ದಿನಾಚರಣೆ


**ಮೈಸೂರು:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಮಾರ್ಚ್ 24ರಂದು ಬೆಳಗ್ಗೆ 8 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಡುವ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾ ಧೀಶರಾದ ದಿನೇಶ್ ಬಿ.ಜಿ ಚಾಲನೆ ನೀಡುವರು. ನಂತರ ಬೆಳಗ್ಗೆ 10 ಗಂಟೆಗೆ ಜೆ.ಕೆ ಮೈದಾನ ಅಮೃತ ಮಹೋತ್ಸವ ಭವನದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ ಸಂಭಾವನೆ ಹೆಚ್ಚಳ

ಮೈಸೂರು, ಮಾ.23(ಎಸ್‌ಪಿಎನ್)-2025ನೇ ಸಾಲಿನಲ್ಲಿ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ವಿವಿಧ ಸ್ತರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಸಂಭಾವನೆ ಹೆಚ್ಚಳ ಮಾಡಿ, ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದ ಸಾದಿಲ್ವಾರು, ಮೌಲ್ಯಮಾಪನ ಕಾರ್ಯಕ್ಕೆ ತೊಡಗಿಸಿಕೊಂಡಿರುವ ಅಧಿಕಾರಿ ಮತ್ತು ಸಿಬ್ಬಂದಿಗೆ ಪರೀಕ್ಷಾ ಸಂಭಾವನೆಯನ್ನು ಸರ್ಕಾರದ ಆದೇಶದ ಮೇರೆಗೆ ಶೇ.5ರಷ್ಟು ಹೆಚ್ಚಳ ಮಾಡಲಾಗಿದೆ.

ಮುಖ್ಯ ಅಧೀಕ್ಷಕರ ಹಾಲಿ ದರ 230, ಪರಿಷ್ಕೃತ ದರ 240 ರೂ. ಉಪಮುಖ್ಯ ಅಧೀಕ್ಷಕರಿಗೆ ಹಾಲಿ 219, ಪರಿಷ್ಕೃತ ದರ 229, ಅಭಿರಕ್ಷಕರಿಗೆ ಹಾಲಿ ದರ 207, ಪರಿಷ್ಕೃತ 216, ಕೊಠಡಿ ಮೇಲ್ವಿಚಾರಕರಿಗೆ ಹಾಲಿ ದರ 173, ಪರಿಷ್ಕೃತ ದರ 181, ಪರೀಕ್ಷಾ ಕೇಂದ್ರದ ಸಹಾಯಕರಿಗೆ 115, ಪರಿಷ್ಕೃತ 120 ರೂ. ನಿಗದಿಪಡಿಸಿದೆ. ಡಿ ಗ್ರೂಪ್ ಸಿಬ್ಬಂದಿ




ಹಾಲಿ ದರ 87, ಪರಿಷ್ಕೃತ 91, ಕೇಂದ್ರದ ಸಾದಿಲ್ವಾರು(ಪ್ರತಿ ವಿದ್ಯಾರ್ಥಿಗೆ) ಹಾಲಿ ದರ 12, ಪರಿಷ್ಕೃತ 13 ಹಾಗೂ ಸ್ಥಾನಿಕ ಜಾಗೃತ ದಳದ ಸದಸ್ಯರಿಗೆ ಹಾಲಿ ದರ 950, ಪರಿಷ್ಕೃತ 991 ರೂ.ಗಳಾಗಿವೆ ಹಾಗೂ ಪರೀಕ್ಷಾ ಕೇಂದ್ರದಲ್ಲಿ 6 ದಿನ ಕರ್ತವ್ಯ ನಿರ್ವಹಿಸಿದ ಪೊಲೀಸ್ ಸಿಬ್ಬಂದಿಗೆ 6 ದಿನಗಳಿಗೆ 152 ರೂ.ನಂತೆ 912, ಪರಿಷ್ಕೃತ ದರ 954 ರೂ. ಹೆಚ್ಚಿಸಲಾಗಿದೆ.

ಮೌಲ್ಯಮಾಪನ ಕೇಂದ್ರದ ಜಂಟಿ ಅಧೀಕ್ಷಕರಿಗೆ ಹಾಲಿ ದರ 8,016, ಪರಿಷ್ಕೃತ ದರ 8,362 ರೂ. ಉಪ ಮುಖ್ಯ ಅಧೀಕ್ಷಕರಿಗೆ ಹಾಲಿ ದರ 6,024, ಪರಿಷ್ಕೃತ 6284 ರೂ., ನಿಗಧಿಪಡಿಸಲಾಗಿದೆ.

ಉತ್ತರ ಪತ್ರಿಕೆ ಮೌಲ್ಯಮಾಪನದ ಪ್ರತಿ ಪತ್ರಿಕೆಗೆ ಪ್ರಥಮ ಭಾಷೆಗೆ ಹಾಲಿ ದರ 25, ಪರಿಷ್ಕೃತ 26, ದ್ವಿತೀಯ, ತೃತೀಯ ಭಾಷೆಗೆ ಹಾಲಿ ದರ 23 ರೂ., ಪರಿಷ್ಕೃತ 24 ರೂ, ಐಚ್ಛಿಕ ವಿಷಯಗಳಿಗೆ ಹಾಲಿ ದರ 23, ಪರಿಷ್ಕೃತ ದರ 24 ರೂ. ನಿಗದಿಪಡಿಸಲಾಗಿದೆ.

ದಿನಭತ್ಯೆ( ಬೆಂಗಳೂರು) ಹಾಲಿ ದರ 657 ರೂ, ದಿನಭತ್ಯೆ(ಇತರೆ ಸ್ಥಳಗಳು) 517 ರೂ, ಪರಿಷ್ಕೃತ ದರ 539 ರೂ., ಸ್ಥಳೀಯ ಭತ್ಯೆ (ಬೆಂಗಳೂರು) 258 ರೂ., ಪರಿಷ್ಕೃತ ದರ 269 ರೂ., ಸ್ಥಳೀಯ ಭತ್ಯೆ( ರಾಜ್ಯದ ಇತರೆ ಭತ್ಯೆಗಳು) ಹಾಲಿ ದರ 208 ರೂ, ಪರಿಷ್ಕೃತ ದರ 217 ರೂ ಹಾಗೂ ಕ್ಯಾಂಪ ಕಸ್ಟೋಡಿಯನ್ ಹಾಲಿ ದರ 4978 ರೂ., ಪರಿಷ್ಕೃತ 5193 ರೂ.ನಿಗದಿಪಡಿಸಲಾಗಿದೆ.


ಕ್ಯಾಂಪ್ ಸಹಾಯಕರಿಗೆ 1389 ರೂ., ಪರಿಷ್ಕೃತ 1449, ಡಿ ದರ್ಜೆ ಸಹಾಯಕರಿಗೆ 695 ರೂ, ಪರಿಷ್ಕೃತ 725 ರೀ ಅಂತರ್ ಜಿಲ್ಲಾ ಜಾಗರತ ದಳದ ಸಿಬ್ಬಂದಿಗೆ ನಗರಪಾಲಿಕೆ ವ್ಯಾಪ್ತಿಯಲ್ಲಿ ಹಾಲಿದರ 544 ರೂ., ಪರಿಷ್ಕೃತ 570 ರೂ., ಇತರೆ ಸ್ಥಳಗಳಿಗೆ ಹಾಲಿ ದರ 384 ರೂ., ಪರಿಷ್ಕೃತ ದರ 381 ರೂ ನಿಗದಿ ಪಡಿಸಿದೆ. ಮೊಬೈಲ್ ಸ್ವಾಧೀನಾಧಿಕಾರಿಗೆ ಹಾಲಿ ದರ 116, ಪರಿಷ್ಕೃತ ದರ 121 ನಿಗದಿಪಡಿಸಿದೆ. ಪ್ರಶ್ನೆಪತ್ರಿಕೆಗಳ ಸಂರಕ್ಷಣಾಧಿಕಾರಿಗಳಿಗೆ ಹಾಲಿ ದರ 210 ರೂ., ಪರಿಷ್ಕೃತ 220 ರೂ. ನಿಗದಿಪಡಿಸಲಾಗಿದೆ.

ಪ್ರಶ್ನೆ ಪತ್ರಿಕೆ ಸೆಟ್ ಒಂದಕ್ಕೆ ಹಾಲಿ ದರ 450 ರೂ, ಪರಿಷ್ಕೃತ 471 ರೂ. ನಿಗದಿಪಡಿಸಿದೆ. ಮೌಲ್ಯಮಾಪನ ಒಂದು ಬ್ಯಾಚ್‌ಗೆ ಹಾಲಿ ದರ 363 ರೂ. ಪರಿಷ್ಕೃತ ದರ 380 ರೂ ನಿಗದಿಪಡಿಸಲಾಗಿದೆ. ಒಟ್ಟಾರೆ ಕೇಂದ್ರ ಮುಖ್ಯಸ್ಥರ ಸಂಭಾವನೆ 1,806 ರೂ.ಗಳು ಪರಿಷ್ಕೃತ ದರ 1,892 ರೂ. ಗಳನ್ನು ಕರ್ನಾಟಕ ರಾಜ್ಯ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ದೇಶಕರು (ಪರೀಕ್ಷಾಂಗ) ಸುತ್ತೋಲೆ ಹೊರಡಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com*

# ನಡೆದು ಬಂದ ಹಾದಿ ಮರೆಯದಿರುವುದೇ ವೈಜ್ಞಾನಿಕ ಪ್ರಜ್ಞೆ

## ರಂಗಕರ್ಮಿ ಹೆಚ್.ಜನಾರ್ಧನ್(ಜನ್ನಿ) ಅಭಿಮತ



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಭಾನುವಾರ ಆಯೋಜಿಸಿದ್ದ ಸಿಜಿಕೆ ಕುರಿತ ವಿಚಾರ ಸಂಕಿರಣಕ್ಕೆ ರಂಗಕರ್ಮಿ ಅಕ್ಮಲ್ ಪಾಷ ಚಾಲನೆ ನೀಡಿದರು.

ಮೈಸೂರು, ಮಾ.23(ಎಂಟಿವೈ)– ನಡೆದು ಬಂದ ಹಾದಿಯನ್ನು ಮರೆಯದೇ ಅರ್ಥ ಮಾಡಿಕೊಳ್ಳುವುದು ವೈಜ್ಞಾನಿಕವಾದ ಪ್ರಜ್ಞೆಯಾಗಿದೆ ಎಂದು ರಂಗಕರ್ಮಿ ಹೆಚ್. ಜನಾರ್ಧನ್(ಜನ್ನಿ) ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಭಾನುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಸಿಜಿಕೆ ದೃಷ್ಟಿಯಲ್ಲಿ ಆಧುನಿಕ ಕನ್ನಡ ರಂಗಭೂಮಿಯಲ್ಲಿ ತಳ ಸಮುದಾಯಗಳ ನಿರೂಪಣೆ ವಿಷಯ ಕುರಿತು ಮಾತನಾಡಿದ ಅವರು, ನಾವು ನಡೆದು ಬಂದ ದಾರಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ಮುಂದಿನ ದಾರಿಯನ್ನು ಸುಲಭವಾಗಿ ಕಂಡುಕೊಳ್ಳಬಹುದು. ಅದು ವೈಜ್ಞಾನಿಕವಾದ ಪ್ರಜ್ಞೆಯೂ ಆಗಿದೆ. ಈ ನಿಟ್ಟಿನಲ್ಲಿ ಕೃಷ್ಣಸ್ವಾಮಿಯವರನ್ನು ರಂಗಭೂಮಿ ನೆನೆಯುತ್ತಾ ಇರಬೇಕು. ಆ ಹಾದಿಯನ್ನು ಸ್ಮರಿಸುತ್ತಲೇ ಸಾಮಾಜಿಕ ಹೊಣೆ ಹೊತ್ತು ಕ್ರಿಯೆಯನ್ನು ಪ್ರಕ್ರಿಯೆಯಲ್ಲಿ ತೊಡಗಿಸಬೇಕು ಎಂದು ಸಲಹೆ ನೀಡಿದರು.

ಡಾ. ಬಿ.ಆರ್.ಅಂಬೇಡ್ಕರ್ ಅವರ ಮಾತಿನಂತೆ ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂಬುದು ಸತ್ಯ ಸಂಗತಿ. ಈ ಚಿಂತನೆ ಎಲ್ಲಾ ಕ್ಷೇತ್ರದ, ಮಾಧ್ಯಮದ, ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದ ವೈಜ್ಞಾನಿಕ ಪ್ರಜ್ಞೆಯಂತಿದೆ ಸಿಜಿಕೆ ಅವರ ವ್ಯಕ್ತಿತ್ವವನ್ನು ನಾವು ನೆನಪಿನ ಅಂಗಳದಿಂದ ವಿಚಾರವಾದಕ್ಕೆ ತರುವಾಗ ಎಚ್ಚರವಹಿಸಬೇಕು ಎಂದರು.

ಇದೇ ವೇಳೆ ಸಂಘಟನೆ, ಸಮುದಾಯ, ಸಾಮಾಜಿಕ ಚಳವಳಿಗಳಲ್ಲಿ ಸಿಜಿಕೆ ಪಾತ್ರದ ಬಗ್ಗೆ ವಿಷಯ ಮಂಡಿಸಿದ ರಂಗನಿರ್ದೇಶಕ ಗುಂಡಣ್ಣ ಚಿಕ್ಕಮಗಳೂರು ಮಾತನಾಡಿ, ಕೃಷ್ಣಸ್ವಾಮಿ ಒಳ್ಳೆಯ ಸಂಘಟಕರಾಗಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿ ಆಗಿದ್ದಾಗಲೇ ಎನ್‌ಎಸ್‌ಯುಐ ನಾಯಕರಾಗಿದ್ದರು. ರಾಜ್ಯವ್ಯಾಪಿ ಬೀದಿನಾಟಕಗಳನ್ನು ಮಾಡಿ ಜನ ಜಾಗೃತಿ ಮಾಡಬೇಕು, ಅನಕ್ಷರಸ್ಥರಿಗೆ ಸಮಾಜದ ಬದಲಾವಣೆ ಬಗ್ಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಗಟ್ಟಿಯಾದ ಕಾರ್ಯಕ್ರಮಗಳನ್ನು ಮಾಡಿದ್ದರು. ಎನ್‌ಎಸ್‌ಯುಐ, ಸಿಪಿಐಎಂ, ಸಮುದಾಯ ಹಾಗೂ ವಿವಿಧ ರಂಗತಂಡಗಳ ಮೂಲಕ ಉತ್ತಮ ಸಂಘಟಕರಾಗಿ ಕೆಲಸ ಮಾಡಿದರು. 75 ದಿನ, 100, 150 ದಿನಗಳವರೆಗೂ ನಿರಂತರವಾಗಿ ರಂಗನಾಟಕಗಳನ್ನು ಮಾಡಿದ್ದರು ಎಂಬುದು ಅವರ ಹೆಮ್ಮೆ ದೊಡ್ಡ ಕನಸುಗಾರ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ರಂಗನಿರ್ದೇಶಕ ಪ್ರೊ.ಎಸ್.ಆರ್. ರಮೇಶ್ ವಹಿಸಿದ್ದರು. ಕತ್ತಾಲೆ ಬೆಳದಿಂಗಳೊಳಗ, ಕನ್ನಡ ರಂಗಭೂಮಿಯ ಆತ್ಮಚರಿತ್ರೆಯಾಗಿ ವಿಷಯ ಮಂಡಿಸಿದರು. ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ರಾಜೇಶ್ ಹೆಚ್.ತಲಕಾಡು, ಅಕ್ಮಲ್ ಪಾಷ, ನಂದಕುಮಾರ್ ಸ್ವಾಮಿ, ಶಿವಾಜಿ ರಾವ್ ಜಾಧವ್ ಉಪಸ್ಥಿತರಿದ್ದರು.

# ಕೊಂಕಣಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ



ಮೈಸೂರಿನ ಕೊಂಕಣಿ ಭವನದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ 2024ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಮಾ.23(ಎಂಕೆ)– ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೊಂಕಣಿ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಹಾಗೂ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಗೌರವ ಪ್ರಶಸ್ತಿ–2024 ಹಾಗೂ ಪುಸ್ತಕ ಪುರಸ್ಕಾರ–2024 ಕಾರ್ಯಕ್ರಮ ನಡೆಯಿತು.

ಕೊಂಕಣಿ ಸಾಹಿತ್ಯ ವಿಭಾಗದಲ್ಲಿ ಪ್ಯಾಟ್ರಿಕ್ ಕಾಮಿಲ್ ಮೊರಾಸ್, ಕಲೆ ವಿಭಾಗದಲ್ಲಿ ಜೊಯಲ್ ಪಿರೇರಾ, ಕೊಂಕಣಿ ಜನಪದ ವಿಭಾಗದಲ್ಲಿ ಸೋಬಿನ ವಾತೇಶ್ ಕಾಂಬ್ರೆಕರ್ ಅವರಿಗೆ ಗೌರವ್ ಪ್ರಶಸ್ತಿ ನೀಡಿದರೆ, 'ಪಾಲ್ವಾ ಪೊಂತ್(ಕವಿತೆ)' ಪುಸ್ತಕಕ್ಕೆ ಪೆಲ್ಸಿ ಲೋಬೊ, 'ಶೆತಾಂ ಭಾಟಾಂ ತೋಟಾಂನಿ' ಲೇಖನಕ್ಕೆ ವಲೇರಿಯನ್ ಸಿಕ್ವೇರಾ ಅವರಿಗೆ ಪುಸ್ತಕ ಪುರಸ್ಕಾರ ನೀಡಿ ಗೌರವಿಸಲಾಯಿತು.

> ಸಾಹಿತ್ಯ, ಕವಿತೆ ಇವು ಜೀವನದ ಆಧಾರ. ಕೃತಿಗಳಲ್ಲಿನ ಆಶಯವನ್ನು ಜೀವನದಲ್ಲಿ ಅಳವಡಿಸಿಕೊಡು ಅನುಸರಿಸಬೇಕು. ಕೊಂಕಣಿ ಭಾಷೆಯ ಕವಿತೆ, ಸಾಹಿತ್ಯವನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡಿಗರು ಓದಲು ಅವಕಾಶ ಮಾಡಿಕೊಡಬೇಕು.
> - ಕೆ.ಹರೀಶ್‌ಗೌಡ, ಶಾಸಕ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಪ್ರತಿಯೊಬ್ಬರು ತಮ್ಮ ತಾಯಿ ಭಾಷೆಯ ಬಗ್ಗೆ ಮಮಕಾರ ಬೆಳೆಸಿಕೊಳ್ಳಬೇಕು. ಅದರ ಉಳಿವಿಗೆ ಶ್ರಮಿಸಬೇಕು. ಕೊಂಕಣಿ ಅತ್ಯುನ್ನತ ಭಾಷೆ. ಸಾಹಿತ್ಯ ಕ್ಷೇತ್ರದಲ್ಲಿ ಈ ಭಾಷೆಯ ಕೊಡುಗೆ ಅಪಾರ. ಕೊಂಕಣಿ ಸಾಹಿತ್ಯದ ಉಳಿವಿಗೆ ಶ್ರಮಿಸಿದವರನ್ನು ಗೌರವಿಸಲಾಗುತ್ತಿರುವುದು ವಿಶೇಷ ಎಂದು ಸ್ಮರಿಸಿದರು.

ಕೊಂಕಣಿ ಭಾಷೆ ಉಳಿಯಲಿ. ಸಮಾಜಕ್ಕೆ ಸಾಹಿತಿಗಳು ಮಹತ್ತು ಕೊಡುಗೆ ನೀಡಲಿ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಹಿತಿಗಳು, ಲೇಖಕರು ಮೂಡಿಬರಲಿ ಎಂದು ಆಶಿಸಿದರು.

**ಕೊಂಕಣಿ ಸಮುದಾಯದ ಸಹಕಾರ:** ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊಂಕಣಿ ಸಮುದಾಯದ ಜನಸಂಖ್ಯೆ ಹೆಚ್ಚಾಗಿದೆ. ಚುನಾವಣೆ ಸಂದರ್ಭದಲ್ಲಿ ವಿಶೇಷವಾಗಿ ಸಭೆ ಸೇರಿಸಿ, ಮನೆಗೆ ಕರೆಸಿ ಧೈರ್ಯ ತುಂಬಿ, ಆರ್ಥಿಕವಾಗಿಯೂ ಸಹಕಾರ ನೀಡಿದ್ದಾರೆ. ಕೊಂಕಣಿ ಭಾಷೆ, ಸಮುದಾಯಕ್ಕೆ ಬೇಕಾದ ಸೌಲಭ್ಯ ಒದಗಿಸಲು ಶ್ರಮಿಸುವೆ ಎಂದು ಭರವಸೆ ನೀಡಿದರು.

**ಸಾಂಸ್ಕೃತಿಕ ಕಾರ್ಯಕ್ರಮ:** ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಿದ್ದಿ ಸಮುದಾಯದ ಸಾಂಸ್ಕೃತಿಕ ನೃತ್ಯ, ಸಂಧ್ಯಾ ಸಂತೋಷ್ ಸಿದ್ದಿ ಮತ್ತು ತಂಡದ ಬ್ರಾಸ್ ಬ್ಯಾಂಡ್, ಆಂಟನಿ ಕೀರ್ತನ್ ಜೇಮ್ಸ್ ಮತ್ತು ತಂಡ ಹಾಗೂ ರಿಎಲ್ರೋನ್ ರೊಡ್ರಿಗ್ಸ್ ಮತ್ತು ತಂಡದ ಕೊಂಕಣಿ ಸಂಗೀತ ನೆರೆದಿದ್ದವರು ಗಮನ ಸೆಳೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್, ನವೀನ್ ಲೋಬೊ, ಸಮರ್ಥ್ ಭಟ್, ರೊನಾಲ್ಡ್ ಕ್ರಾಸ್ತಾ, ದಯಾನಂದ ಮಡ್ಕೇಕರ್, ಸಪ್ನಾ ಮೇ ಕ್ರಾಸ್ತಾ, ಅಕ್ಷತಾ ಎಂ.ನಾಯಕ್, ವಲೇರಿಯನ್ ಡಿಸೋಜ ಮತ್ತಿತರರಿದ್ದರು.

# ಏಪ್ರಿಲ್‌ನಿಂದ ಜನರ ಮನೆ ಬಾಗಿಲಿಗೆ ಸಿಗಲಿದೆ ಗೃಹ ಆರೋಗ್ಯ ಯೋಜನೆ

## ಆರೋಗ್ಯ ಸಚಿವ ದಿನೇಶ್ ಗುಂಡೂರಾವ್




ಬೆಳಗಾವಿ, ಮಾ.23– ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಕರ್ನಾಟಕದ ಎಲ್ಲಾ ಜನರಿಗೆ ಮನೆ ಬಾಗಿಲಲ್ಲೇ ಆರೋಗ್ಯ ತಪಾಸಣೆ ನಡೆಸುವ ಸೌಲಭ್ಯ ಅಂದರೆ, ಗೃಹ ಆರೋಗ್ಯ ಯೋಜನೆ ಜಾರಿಯಾಗಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಇಂದು(ಮಾ.23) ಬೃಹತ್ ಆರೋಗ್ಯ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯ ಸೇವೆಗಳನ್ನು ಬಡ ವರ್ಗದ ಜನರ ಬಳಿಗೆ ತರುವಲ್ಲಿ ಉಚಿತ ಆರೋಗ್ಯ ತಪಾಸಣಾ ಮೇಳಗಳು ಯಶಸ್ವಿಯಾಗುತ್ತಿವೆ. ದೊಡ್ಡ ಮಟ್ಟದ ಆರೋಗ್ಯ ಮೇಳಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗಿಸಲು ತಾಲೂಕುಗಳಲ್ಲಿ ನಡೆಸಲಾಗುತ್ತಿದೆ. ಕೊಳ್ಳೇಗಾಲ, ಮಾನ್ವಿ ಬಳಿಕ ಇದೀಗ ಸವದತ್ತಿಯಲ್ಲೂ ಆರೋಗ್ಯ ಮೇಳ ಯಶಸ್ವಿಯಾಗಿದೆ ಎಂದರು.

ಈಗಾಗಲೇ ಗೃಹ ಆರೋಗ್ಯ ಯೋಜನೆಯನ್ನು ಕೋಲಾರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದ್ದು ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಬೆಳಗಾವಿ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೃಹ ಆರೋಗ್ಯ ಯೋಜನೆ ಜಾರಿಯಾಗಲಿದೆ. ನಮ್ಮ ಜನರು ಯೋಜನೆಯ ಲಾಭ ಪಡೆದುಕೊಳ್ಳಬೇಕು. ಜನರ ಮನೆ ಬಾಗಿಲಿಗೆ ಆರೋಗ್ಯ ಸಿಬ್ಬಂದಿಗಳು ಭೇಟಿ ನೀಡಿ, ರಕ್ತದೊತ್ತಡ, ಮಧುಮೇಹ ಕ್ಯಾನ್ಸರ್ ಸೇರಿದಂತೆ ಮಾನಸಿಕ ಕಾಯಿಲೆಗಳ ಬಗ್ಗೆ ತಪಾಸಣೆ ನಡೆಸಲಿದ್ದಾರೆ. ಗ್ರಾಮೀಣ ಭಾಗದ ಜನರ ಆರೋಗ್ಯ ರಕ್ಷಣೆಯಲ್ಲಿ ಗೃಹ ಆರೋಗ್ಯ ಯೋಜನೆ ದೊಡ್ಡ ಬದಲಾವಣೆಯನ್ನು ತರುವ ನಿರೀಕ್ಷೆಯಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಹಳ್ಳಿಗಾಡಿನ ಜನರು ಬಡವರು ತಮ್ಮ ಆರೋಗ್ಯ ತಪಾಸಣೆಯನ್ನು ನಿರ್ಲಕ್ಷ್ಯ ವಹಿಸಬಾರದು. ರಕ್ತದೊತ್ತಡ, ಮಧುಮೇಹದಂತಹ ಕಾಯಿಲೆಗಳ ವಿಚಾರದಲ್ಲಿ ನಮ್ಮ ಜನರು ಎಚ್ಚರಿಕೆ ವಹಿಸುವ ಅಗತ್ಯ ಇದೆ. ಆರಂಭಿಕ ಹಂತದಲ್ಲಿ ಈ ಕಾಯಿಲೆಗಳನ್ನು ಪತ್ತೆ ಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ. ಅಲ್ಲದೇ ಮುಂದೆ ಈ ಕಾಯಿಲೆಗಳಿಂದ ಎದುರಾಗುವ ಆಪತ್ತುಗಳಿಂದ ಬಡ ಜನರನ್ನು ಪಾರು ಮಾಡಬಹುದಾಗಿದೆ. ಹೀಗಾಗಿಯೇ ನಮ್ಮ ಕಾಂಗ್ರೆಸ್ ಸರ್ಕಾರ ಗೃಹ ಆರೋಗ್ಯ ಯೋಜನೆ ಜಾರಿಗೆ ತಂದಿದೆ. 30 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲ ಜನರನ್ನು ತಪಾಸಣೆಗೆ ಒಳಪಡಿಸಿ, ಉಚಿತವಾಗಿ ಔಷಧಿಗಳನ್ನು ಜನರ ಬಳಿಗೆ ಒದಗಿಸುವ ಯೋಜನೆ ಇದಾಗಿದೆ ಎಂದು ಸಚಿವರು ಹೇಳಿದರು.

# ಮಾರ್ಚ್ ಅಂತ್ಯದೊಳಗೆ ಮೈಸೂರು ವಿವಿ ಬಜೆಟ್ ಸಭೆ ಕರೆಯಲು ಆಗ್ರಹ



ಮೈಸೂರು, ಮಾ.23– ಮೈಸೂರು ವಿಶ್ವವಿದ್ಯಾನಿಲಯದ 2025–26ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಬಜೆಟ್(ಆಯವ್ಯಯ) ಅಂದಾಜುಗಳನ್ನು ಚರ್ಚಿಸಿ, ಅನುಮೋದಿಸಲು ಮಾ.31 ರೊಳಗೆ ತುರ್ತು ಸಿಂಡಿಕೇಟ್ ಸಭೆ ಕರೆಯುವಂತೆ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಆಗ್ರಹಿಸಿದ್ದಾರೆ.

ಈ ಸಂಬಂಧ ವಿವಿಯ ಕುಲಸಚಿವರಿಗೆ ಪತ್ರ ಬರೆದಿರುವ ಅವರು, ನಿಯಮದನ್ವಯ ಮೈಸೂರು ವಿವಿಯ 2025–26ರ ಬಜೆಟ್ ಅಂದಾಜುಗಳನ್ನು ಪ್ರಸಕ್ತ ಮಾ.31ರೊಳಗೆ ಸಿದ್ಧಪಡಿಸಿ, ಸಿಂಡಿಕೇಟ್ ಸಭೆಗೆ ಮಂಡಿಸಿ, ಚರ್ಚೆಯ ಬಳಿಕ ಅನುಮೋದಿಸಬೇಕು ಎಂದು ನಾನು ಬಲವಾಗಿ ನಂಬಿದ್ದೇನೆ. ಆದರೆ ಈವರೆಗೂ ಈ ನಿಟ್ಟಿನಲ್ಲಿ ಯಾವುದೇ ಕ್ರಮವಾಗಿಲ್ಲ.

ಕಳೆದ ವರ್ಷದ ಆರ್ಥಿಕ ವರ್ಷದ ಬಜೆಟ್ ಅಂದಾಜುಗಳ ಅನುಮೋದನೆಯ ಸಭೆಯಲ್ಲಿ ವಿವಿಯ ಹಣಕಾಸು ಅಧಿಕಾರಿ ಮತ್ತು ಕುಲಪತಿ ಹಾಗೂ ಕುಲಸಚಿವರು, 2025–26ರ ಬಜೆಟ್ ಅಂದಾಜುಗಳನ್ನು ಕಾನೂನು ಪ್ರಕಾರ 2025ರ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಸಭೆಗೆ ಮಂಡಿಸಿ, ಮಂಜೂರಾತಿ ಪಡೆಯುವುದಾಗಿ ಭರವಸೆ ನೀಡಿದ್ದರಿಂದ ಅಂದಿನ ಆಯವ್ಯಯವನ್ನು ಅನುಮೋದಿಸಿದ ವಿಚಾರವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಒಂದು ವೇಳೆ ಭರವಸೆ ನೀಡಿದಂತೆ ನಿಯಮದ ಪ್ರಕಾರ 2025–26ರ ಆರ್ಥಿಕ ವರ್ಷದ ಆಯವ್ಯವನ್ನು ಪ್ರಸಕ್ತ ಮಾ.31 ರೊಳಗೆ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯದೆ ಏಪ್ರಿಲ್ 1ರ ನಂತರ ಬಜೆಟ್ ಮಂಡಿಸಿದರೆ ಅದಕ್ಕೆ ನನ್ನ ಸಮ್ಮತಿ ಇಲ್ಲ. ಕಳೆದ ವರ್ಷದಂತೆ ನಿಯಮ ಉಲ್ಲಂಘನೆಯಾದರೆ ರಾಜ್ಯಪಾಲರು, ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ದೂರು ನೀಡುವುದಾಗಿ ಡಾ.ಟಿ.ಆರ್. ಚಂದ್ರಶೇಖರ್ ಪತ್ರದಲ್ಲಿ ತಿಳಿಸಿದ್ದಾರೆ.

## ಕಾಲಭೈರವೇಶ್ವರ ಸ್ವಾಮಿಯ ವೈಭವದ ಮೆರವಣಿಗೆ


ಮೈಸೂರಿನ ಅಶೋಕಪುರಂನ 9ನೇ ಕ್ರಾಸ್‌ನಲ್ಲಿ ಶ್ರೀ ದೊಡ್ಡಮ್ಮ(ಕ್ಯಾಲಮಾರಮ್ಮ) ಕಾಲಭೈರವೇಶ್ವರ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಕಾಲಭೈರವೇಶ್ವರ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಪುರುಷೋತ್ತಮ್, ದೊಡ್ಡ ಗರಡಿ ಅಧ್ಯಕ್ಷ ಜೋಗಿ ಮಹೇಶ್, ಆದಿ ಕರ್ನಾಟಕ ಮಹಾಸಭಾದ ಅಧ್ಯಕ್ಷ ಸಿದ್ದರಾಜು, ಸಮಿತಿ ಅಧ್ಯಕ್ಷ ಎಂ.ಕೆ.ರೇವಣ್ಣ, ಉಪಾಧ್ಯಕ್ಷ ಎನ್.ಭಾಸ್ಕರ್, ಕಾರ್ಯದರ್ಶಿ ರಾಘವೇಂದ್ರ, ಸಹ ಕಾರ್ಯದರ್ಶಿ ರಾಜ್ ಕುಮಾರ್, ಕುಮಾರ್, ಸ್ವಾಮಿ, ಶಿವಪ್ರಸಾದ್, ವಿಶ್ವೇಶ್ವರಯ್ಯ, ನಾಗರಾಜು(ಬಿಲ್ಲಯ್ಯ) ಮತ್ತಿತರರು ಉಪಸ್ಥಿತರಿದ್ದರು.

# ಬಿಜೆಪಿ ಶಾಸಕರ ಅಮಾನತ್ತು ಹಿಂದೆ ಯಾರದ್ದೋ ಕೈವಾಡವಿದೆ

## ಬಿಜೆಪಿ ಶಾಸಕರ ಅಮಾನತ್ತಿಗೆ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಕಿಡಿ



ಹುಬ್ಬಳ್ಳಿ, ಮಾ.23– ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದ ಬಿಜೆಪಿ ಶಾಸಕರನ್ನು 6 ತಿಂಗಳುಗಳ ಕಾಲ ಅಮಾನತು ಮಾಡಿದ ವಿಧಾನಸಭೆ ಸ್ಪೀಕರ್ ನಡೆಯನ್ನು ಬೆಳಗಾವಿ ಬಿಜೆಪಿ ಸಂಸದ ಜಗದೀಶ್ ಶೆಟ್ಟರ್ ಟೀಕಿಸಿದ್ದಾರೆ. ಅಲ್ಲದೇ ಸ್ಪೀಕರ್ ಅವರ ಈ ಕಠಿಣ ನಿರ್ಧಾರದ ಹಿಂದೆ ಬೇರೆ ಯಾರದ್ದೋ ಕೈವಾಡ ಇದೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆರೋಪಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸದನದಲ್ಲಿ ಶಿಸ್ತು ಕಾಪಾಡಿಕೊಳ್ಳುವುದು ಸ್ಪೀಕರ್ ಅವರ ಕರ್ತವ್ಯ ಅಲ್ಲದೇ ಯಾವುದೇ ಸದಸ್ಯರು ಅಶಿಸ್ತು ಪ್ರದರ್ಶಿಸಿದರೆ ಅವರನ್ನು ಸದನದಿಂದ ಅಮಾನತು ಮಾಡುವ ಅಧಿಕಾರ ಕೂಡ ಅವರಿಗಿದೆ. ಆದರೆ ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ 18 ಬಿಜೆಪಿ ಶಾಸಕರನ್ನು ಅಮಾನತುಗೊಳಿಸಿರುವ ಸ್ಪೀಕರ್ ನಡೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐಗೆ ವಹಿಸದಿರಲು ರಾಜ್ಯ ಸರ್ಕಾರ ಭಂಡತನ ತೋರಿದ್ದೇ, ಬಿಜೆಪಿ ಶಾಸಕರ ಪ್ರತಿಭಟನೆಗೆ ಕಾರಣ. ಸದನದಲ್ಲಿ ಪ್ರತಿಭಟನೆ ಮಾಡುತ್ತಿದ್ದ ಪ್ರತಿಪಕ್ಷ ಶಾಸಕರನ್ನು ಸ್ಪೀಕರ್ ಅವರು ತಮ್ಮ ಕಚೇರಿಗೆ ಕರೆಸಿ ಬುದ್ಧಿವಾದ ಹೇಳಬಹುದಿತ್ತು. ಆದರೆ ಈ ರೀತಿ ಏಕಾಏಕಿ 18 ಬಿಜೆಪಿ ಶಾಸಕರ ಅಮಾನತು ಆದೇಶ ಹೊರಡಿಸಿರುವುದನ್ನು ನೋಡಿದರೆ, ಇದರ ಹಿಂದೆ ಬೇರೆ ಯಾರದ್ದೋ ಕೈವಾಡ ಇದೆ ಎಂಬ ಅನುಮಾನ ಬರುತ್ತಿದೆ ಎಂದು ಜಗದೀಶ್ ಶೆಟ್ಟರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಶಾಸಕರನ್ನು 6 ತಿಂಗಳುಗಳ ಕಾಲ ಅಮಾನತು ಮಾಡಿರುವುದು ಖಂಡನೀಯ. ಈ ಹಿಂದೆ ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ ಸದನದ ಬಾಗಿಲನ್ನೇ ಒದ್ದಿದ್ದರು. ಆದರೆ ಆಗ ಅವರನ್ನು ಅಮಾನತು ಮಾಡಿರಲಿಲ್ಲ. ಆದರೆ ಈಗ ಸ್ಪೀಕರ್ ಮುಂದೆ ಕಾಗದ ಹರಿದು ಹಾಕಿದ್ದಾರೆ ಎಂಬ ನೆಪವೊಡ್ಡಿ 18 ಬಿಜೆಪಿ ಶಾಸಕರನ್ನು ಅಮಾನತು ಮಾಡಲಾಗಿದೆ. ಪೇಪರ್‌ಗಳನ್ನು ಹರಿದು ಹಾಕಿ ಪ್ರತಿಭಟನೆ ನಡೆಸುವುದು ಈಗ ಸಾಮಾನ್ಯ ಸಂಗತಿ ಎಂದು ಬೆಳಗಾವಿ ಸಂಸದರು ನುಡಿದರು.

ಒಂದು ವೇಳೆ ಬಿಜೆಪಿ ಶಾಸಕರು ಸ್ಪೀಕರ್ ಪೀಠಕ್ಕೆ ನುಗ್ಗಿದ್ದರೆ ಅಥವಾ ಅವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಮುಂದಾಗಿದ್ದರೆ, ಇಂತಹ ಕಠಿಣ ಕ್ರಮ ಕೈಗೊಳ್ಳಬಹುದಿತ್ತು. ಅದಕ್ಕೆ ನಾವ್ಯಾರೂ ತಕರಾರು ಕೂಡ ಮಾಡುತ್ತಿರಲಿಲ್ಲ ಆದರೆ ಕೇವಲ ಸ್ಪೀಕರ್ ಪೀಠದ ಮುಂದೆ ಕಾಗದ ಹರಿದು ಹಾಕಿದ್ದಾರೆ ಎಂಬ ಕಾರಣಕ್ಕೆ 18 ಬಿಜೆಪಿ ಶಾಸಕರನ್ನು ಅಮಾನತು ಮಾಡಿರುವ ಕ್ರಮ ಪ್ರಜಾಪ್ರಭುತ್ವ ಮಾದರಿಯಲ್ಲಿಲ್ಲ ಎಂದು ಜಗದೀಶ್ ಶೆಟ್ಟರ್ ತೀವ್ರ ಆಕ್ರೋಶ ಹೊರಹಾಕಿದರು.

ಸ್ಪೀಕರ್ ಯುಟಿ ಖಾದರ್ ಅವರು ತಮ್ಮ ನಿರ್ಧಾರವನ್ನು ಸ್ವಯಂಪ್ರೇರಣೆಯಿಂದ ಹಿಂಪಡೆಯಬೇಕು. ಶಾಸಕರು ಯಾವುದೇ ಮೀಟಿಂಗ್‌ನಲ್ಲೂ ಭಾಗವಹಿಸಬಾರದು ಎಂದು ಹೇಳಿದರೆ ಅವರ ಹಕ್ಕುಗಳನ್ನು ಕಿತ್ತುಕೊಂಡಂತಾಗುವುದಿಲ್ಲವೇ? ಸ್ಪೀಕರ್ ಅವರ ಅಮಾನತು ಆದೇಶದ ಹಿಂದೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ. ಹೀಗಾಗಿ ಅವರೇ ಸ್ಪೀಕರ್ ಅವರಿಗೆ ಹೇಳಿ ಅಮಾನತು ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕು ಎಂದು ಬಿಜೆಪಿ ಸಂಸದರು ಆಗ್ರಹಿಸಿದರು.

ಇನ್ನು ಹನಿಟ್ರ್ಯಾಪ್ ವಿಚಾರವಾಗಿ ಮಾತನಾಡಿದ ಜಗದೀಶ್ ಶೆಟ್ಟರ್, ಆಡಳಿತ ಪಕ್ಷದ ಸಚಿವರೇ ಒಬ್ಬರ ಬಳಿ 48 ಸಿಡಿಗಳಿವೆ ಎಂದು ಹೇಳಿದ್ದಾರೆ. ಮತ್ತೊರ್ವ ಸಚಿವರಾದ ಸತೀಶ್ ಜಾರಕಿಹೊಳಿ ಕೂಡ ನೂರಾರು ಸಿಡಿಗಳಿವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಸಿಬಿಐ ತನಿಖೆಯಿಂದ ಮಾತ್ರ ಈ ಪ್ರಕರಣಕ್ಕೆ ಇತಿಶ್ರೀ ಹಾಡಲು ಸಾಧ್ಯ ಎಂದು ಒತ್ತಾಯಿಸಿದರು.

# ಭಾರತ ಚುನಾವಣಾ ಆಯೋಗ ನಿಷ್ಕ್ರಿಯ ಸಂಸ್ಥೆ

## ಸುಪ್ರೀಂ ಕೋರ್ಟ್ ಹಿರಿಯ ವಕೀಲ ಕಪಿಲ್ ಸಿಬಲ್ ಕಿಡಿ



ನವದೆಹಲಿ, ಮಾ.23– ಭಾರತದ ಚುನಾವಣಾ ಆಯೋಗವು ಸಂಪೂರ್ಣವಾಗಿ ನಿಷ್ಕ್ರಿಯವಾಗಿದ್ದು, ವಿಫಲಗೊಂಡ ಸಂಸ್ಥೆಯಾಗಿದೆ. ಸಂವಿಧಾನಕ್ಕೆ ಅನುಗುಣವಾಗಿ ಆಯೋಗವು ಜವಾಬ್ದಾರಿ ನಿರ್ವಹಿಸುತ್ತಿಲ್ಲ. ಹೀಗಾಗಿ ಬಹುಸಂಖ್ಯಾತರು ಆಯೋಗದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ ಎಂದು ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಅಭಿಪ್ರಾಯಪಟ್ಟಿದ್ದಾರೆ.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಆಯೋಗದ ಮೇಲೆ ಹೋಗಿರುವ ನಂಬಿಕೆ ಮತ್ತೆ ಮೂಡುವಂತೆ ಎಷ್ಟು ಬೇಗ ಮಾಡಲಾದೀತೊ, ಅಷ್ಟು ಬೇಗ ದೇಶದ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದ್ದಾರೆ.

ನ್ಯಾಯಾಂಗದ ಮೇಲಿನ ಜನರ ನಂಬಿಕೆಯು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ನ್ಯಾಯಾಂಗದ ನೇಮಕಾತಿಯು ಸರಿಯಾಗಿ ಆಗುತ್ತಿಲ್ಲ. ಇದನ್ನು ಸರ್ಕಾರ ಹಾಗೂ ನ್ಯಾಯಾಂಗ ಒಪ್ಪಿಕೊಂಡಾಗ ಮಾತ್ರ ಪರ್ಯಾಯ ಅವಕಾಶಗಳು ಸೃಷ್ಟಿಯಾಗಬಹುದು ಎಂದು ಕಪಿಲ್ ಸಿಬಲ್ ಹೇಳಿದರು. ನ್ಯಾಯಾಲಯದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರದ ಕುರಿತು ನಮಗೆ ನಾವು ಪ್ರಶ್ನಿಸಕೊಳ್ಳಬೇಕಿದೆ. ನ್ಯಾಯಾಂಗವೂ ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕು. ಜನರ ಅಭಿಪ್ರಾಯದಲ್ಲಿಯೂ ನ್ಯಾಯಾಂಗ ವ್ಯವಸ್ಥೆ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ ಎಂದರು.

ಬಿಜೆಪಿ ವಿರುದ್ಧ ರಚನೆಯಾಗಿರುವ ವಿರೋಧ ಪಕ್ಷಗಳ 'ಇಂಡಿಯಾ' ಒಕ್ಕೂಟಕ್ಕೆ ವ್ಯವಸ್ಥಿತ ರೂಪ ನೀಡಬೇಕಾಗಿದ್ದು, ಸಾರ್ವಜನಿಕ ಅಭಿಪ್ರಾಯ ವ್ಯಕ್ತಪಡಿಸಲು ವಕ್ತಾರರು ಬೇಕಿದೆ ಎಂದು ಸಲಹೆ ನೀಡಿದ್ದಾರೆ 'ಇಂಡಿಯಾ' ಒಕ್ಕೂಟವು ಸಂಘಟಿತ ನೀತಿ, ಸ್ಪಷ್ಟವಾದ ಸೈದ್ಧಾಂತಿಕ ಚೌಕಟ್ಟು, ಭವಿಷ್ಯದ ಕುರಿತು ಕಾರ್ಯಕ್ರಮಗಳನ್ನು ಹೊಂದಿರಬೇಕು ಎಂದು ಅವರು ಹೇಳಿದ್ದಾರೆ. ಇತ್ತೀಚೆಗೆ ನಡೆದ ವಿವಿಧ ರಾಜ್ಯಗಳ ಚುನಾವಣೆಯಲ್ಲಿ 'ಇಂಡಿಯಾ' ಒಕ್ಕೂಟದಲ್ಲಿದ್ದ ಪಕ್ಷಗಳೇ ಪರಸ್ಪರ ಸ್ಪರ್ಧೆ ನಡೆಸಿದ್ದು ಕೆಟ್ಟ ನಡವಳಿಕೆ. ಸಾರ್ವಜನಿಕವಲಯದಿಂದಲೇ 'ಇಂಡಿಯಾ' ಒಕ್ಕೂಟಕ್ಕೆ ತಡೆ (ಬ್ಲಾಕ್) ಎದುರಾಗುವ ಆತಂಕವಿದೆ ಅದಕ್ಕೂ ಮುನ್ನ ತಾನಾಗಿಯೇ ಅದು ತಡೆ ಉಂಟಾಗದಂತೆ ಮಾಡಿಕೊಳ್ಳ ಬೇಕು (ಅನ್‌ಬ್ಲಾಕ್ ಮಾಡಬೇಕು) ಎಂದು ಹೇಳಿದ್ದಾರೆ.

## ಪ್ರಯಾಣಿಕರ ತಂಗುದಾಣ ಸಮರ್ಪಣೆ



ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ರೋಟರಿ ಸೆಂಟ್ರಲ್ ಮೈಸೂರು ವತಿಯಿಂದ ನೂತನವಾಗಿ ನಿರ್ಮಿಸಿರುವ ಪ್ರಯಾಣಿಕರ ತಂಗುದಾಣವನ್ನು ಪ್ರಯಾಣಿಕರ ಸೇವೆಗೆ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ರೋ. ಜಿಲ್ಲಾ ಗೌರ್ವನರ್ ವಿಕ್ರಂ ದತ್ತ, ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಸಹಾಯಕ ಗೌರ್ವನರ್ ಚೇತನ್ ವಿಶ್ವನಾಥ್, ರೋ. ಸೆಂಟ್ರಲ್ ಮೈಸೂರು ಅಧ್ಯಕ್ಷ ಸುಬ್ರಮಣ್ಣ ಆರ್.ತಂತ್ರಿ, ಕಾರ್ಯದರ್ಶಿ ಸಮರ್ ವೈದ್ಯ, ವೈದ್ಯಕೀಯ ಸಮುದಾಯ ಸೇವೆಯ ಎಸ್.ಆರ್. ಸ್ವಾಮಿ, ರೋ. ಪ್ರೇಮಸಾಗರ್ ಇನ್ನಿತರರಿದ್ದರು.

## ಇಂದು ವಿಶ್ವ ಕ್ಷಯರೋಗ ದಿನಾಚರಣೆ

ಮೈಸೂರು, ಮಾ.23– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮ ಅಂಗವಾಗಿ ನಾಳೆ (ಮಾರ್ಚ್ 24) ಬೆಳಗ್ಗೆ 8 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಜಾಥಾ ನಡೆಸಲ್ಲಿದೆ. ವಿಶ್ವ ಕ್ಷಯರೋಗ ದಿನಾಚರಣೆ ವೇದಿಕೆ ಕಾರ್ಯಕ್ರಮ ನಾಳೆ ಬೆಳಗ್ಗೆ 10 ಗಂಟೆಗೆ ಜೆ.ಕೆ ಮೈದಾನ ಅಮೃತ ಮಹೋತ್ಸವ ಭವನದಲ್ಲಿ ಆಯೋಜಿಸಲಾಗಿದೆ

# ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ಭಾರತೀಯ ಸ್ಪರ್ಧಾತ್ಮಕ ಕಾನೂನು ಕುರಿತ ವಿಚಾರ ಸಂಕಿರಣ



ಭಾರತೀಯ ಸ್ಪರ್ಧಾತ್ಮಕ ಕಾನೂನು ಕುರಿತು ಸಿಸಿಐ ನಿರ್ದೇಶಕ ಕೆ.ಡಿ.ಸಿಂಗ್ ಮಾತನಾಡಿದರು.

ಮೈಸೂರು, ಮಾ.23(ಎಂಕೆ)– ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸುವ ಹಾಗೂ ಮಾರುಕಟ್ಟೆಯ ಧನಾತ್ಮಕ ಬೆಳವಣಿಗೆಗಾಗಿ ಕೆಲಸ ಮಾಡುವ ಭಾರತೀಯ ಸ್ಪರ್ಧಾತ್ಮಕ ಕಾನೂನು, ಸರ್ಕಾರ ಜಾರಿಗೆ ತರುವ ಯೋಜನೆಯ ಸಾಧಕ, ಬಾಧಕಗಳ ಬಗ್ಗೆಯೂ ಸಲಹೆ ನೀಡುತ್ತದೆ ಎಂದು ದೆಹಲಿಯ ಭಾರತೀಯ ಸ್ಪರ್ಧಾತ್ಮಕ ಆಯೋಗದ(ಸಿಸಿಐ) ನಿರ್ದೇಶಕ ಕೆ.ಡಿ.ಸಿಂಗ್ ತಿಳಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಭಾರತೀಯ ಸ್ಪರ್ಧಾತ್ಮಕ ಆಯೋಗದ ಸಹಯೋಗದೊಂದಿಗೆ ಆಯೋಜಿಸಿದ್ದ 'ಭಾರತದಲ್ಲಿ ಸ್ಪರ್ಧಾತ್ಮಕ ಕಾನೂನು; ಪ್ರವೃತ್ತಿಗಳು ಮತ್ತು ಭವಿಷ್ಯದ ಸೂಚನೆಗಳು' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಕಾನೂನು ಅಥವಾ ಆಯೋಗವು ಕಂಪನಿಗಳ ನಡುವಿನ ಸ್ಪರ್ಧೆಯು ಮಾರುಕಟ್ಟೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದನ್ನು ತಡೆಯಲಿದೆ ಎಂದರು.

ಸ್ಪರ್ಧಾತ್ಮಕ ಕಾನೂನು ದಂಡ ಮಾತ್ರ ವಿಧಿಸುತ್ತದೆ ಎಂಬುದು ತಪ್ಪು ಕಲ್ಪನೆ ಇದೆ. ಆದರೆ, ನಾವು ಸರ್ಕಾರಕ್ಕೆ ಮಾರುಕಟ್ಟೆ ಸಂಬಂಧಿತ ಯೋಜನೆಗಳ ಅನುಷ್ಠಾನದ ಕುರಿತು ಮಾಹಿತಿ ನೀಡುತ್ತೇವೆ. ಮಾರುಕಟ್ಟೆ ವಿಚಾರದಲ್ಲಿನ ಧನಾತ್ಮಕ ಬೆಳವಣಿಗೆಯ ಬಗ್ಗೆ ಕೆಲಸ ಮಾಡುತ್ತೇವೆ. ಮಾರುಕಟ್ಟೆಯಲ್ಲಿ ಸ್ಪರ್ಧೆ ಉಳಿಯಬೇಕು. ಹಾಗೆಯೇ ಹಾದಿ ತಪ್ಪಬಾರದು ಎಂಬ ನೆಲೆಯಲ್ಲಿ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಆಯೋಗವು ಶಾಸನಬದ್ಧ ಸಂಸ್ಥೆಯಾಗಿದ್ದು, ಕಂಪೆನಿಗಳ ಏಕಸ್ವಾಮ್ಯತೆಯನ್ನು ನಿಯಂತ್ರಿಸಲು ಕ್ರಮ ವಹಿಸುತ್ತೇವೆ. ಮಾರುಕಟ್ಟೆಯಲ್ಲಿ ಒಮ್ಮೆಗೆ ಸ್ಪರ್ಧೆಗಳು ಹೆಚ್ಚಾದಾಗ, ಮಾನ್ಯತೆ ಪಡೆದುಕೊಳ್ಳಲು ಸಂಸ್ಥೆಗಳು ವಿವಿಧ ಹಾದಿಯನ್ನು ಹಿಡಿಯಲಿದ್ದು, ಮಾರುಕಟ್ಟೆಗೆ ಹಾನಿಯಾಗುವ ನಿರ್ಧಾರ ತೆಗೆದುಕೊಳ್ಳದಂತೆ ಎಚ್ಚರ ವಹಿಸುವುದು ನಮ್ಮ ಕರ್ತವ್ಯ ಎಂದು ವಿಶ್ವಾಸ ತುಂಬಿದರು.

**ಇಂಟರ್ನ್‌ಶಿಪ್ ಅವಕಾಶ:** ಭಾರತೀಯ ಸ್ಪರ್ಧಾತ್ಮಕ ಆಯೋಗದ ಮೂಲಕ ಈ ವಿಭಾಗದಲ್ಲಿ ಕೆಲಸ ಮಾಡಲು ಇಚ್ಛಿಸುವ ಕಾನೂನು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶ ನೀಡಲಾಗುತ್ತಿದೆ. ವರ್ಷದಲ್ಲಿ 15 ಮಂದಿಗೆ ಅವಕಾಶ ಇರಲಿದ್ದು, ಅದರ ಪ್ರಯೋಜನ ಪಡೆಯುವಂತೆ ಎಂದು ತಿಳಿಸಿದರು. ಜೆಎಸ್‌ಎಸ್ ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಕೆ. ಎಸ್.ಸುರೇಶ್, ಪ್ರಾಂಶುಪಾಲರಾದ ಎನ್.ವಾಣಿಶ್ರೀ ಉಪಸ್ಥಿತರಿದ್ದರು.

# ಆಶ್ರಯ ಪ್ರಗತಿ ಸಂಘಗಳಿಂದ ವಿಶ್ವ ಮಹಿಳಾ ದಿನಾಚರಣೆ


ಆಶ್ರಯ ಪ್ರಗತಿ ಸಂಘಗಳಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮೈಸೂರು,ಮಾ.23(ಎಂಕೆ)– ಮೈಸೂರಿನ ಉದಯಗಿರಿಯಲ್ಲಿರುವ ನೊಬೆಲ್ ಫಂಕ್ಷನ್‌ಹಾಲ್‌ನಲ್ಲಿ ಆಶ್ರಯ ಪ್ರಗತಿ ಸಂಘಗಳ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾಜಿ ಉಪಮೇಯರ್ ಶಾಂತಕುಮಾರಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡಬೇಕು. ರಾಜ್ಯ ಸರ್ಕಾರ ಮಹಿಳೆಯರಿಗೆ ಗ್ಯಾರಂಟಿ ಯೋಜನೆಗಳ ಮೂಲಕ ಶಕ್ತಿ ನೀಡಿದ್ದು, ಪ್ರತಿಯೊಬ್ಬರು ಗ್ಯಾರಂಟಿ ಯೋಜನೆಗಳ ಸದ್ಬಳಕೆ ಮಾಡಿಕೆಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಕೌಶಲಾಧಾರಿತ ಕೋರ್ಸ್‌ಗಳನ್ನು ಕಲಿತು ಸ್ವಂ ಉದ್ಯೋಗದ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಮೈಸೂರು ಜಿಲ್ಲಾ ಕುಳುವ ಮಹಾಸಂಘದ ಜಿಲ್ಲಾಧ್ಯಕ್ಷೆ ಟಿ.ವೇದಾವತಿ ಮಾತನಾಡಿ, ಮಹಿಳೆಯರು ದೊರೆಯುವ ಅವಕಾಶಗಳನ್ನು ಪೂರ್ಣ ಪ್ರಮಾಣದಲ್ಲಿ ಸದುಪಯೋಗ ಮಾಡಿಕೊಳ್ಳಬೇಕು. ಮಹಿಳೆಯರಿಗೆ ಅವರ ಮನೆಯಲ್ಲಿರುವ ಸಹೋದರರು ಸಹಕಾರ ನೀಡಬೇಕು. ಸಮಾಜ ನಿಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ಸಮಾಜಕ್ಕೆ ನಾವೇನಾದರೂ ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಜೊತೆಗೆ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು. ಆಶ್ರಯ ಪ್ರಗತಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಚಂದ್ರಮ್ಮ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೇದಾವತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ನಾಡು ಕಂಡ ಅಪರೂಪದ ಸಾಹಿತಿ ಕೆ.ಎಸ್.ನರಸಿಂಹಸ್ವಾಮಿ

**ಮಂಡ್ಯ:** ನಾಡು ಕಂಡ ಶ್ರೇಷ್ಠ ಸಾಹಿತಿಗಳಲ್ಲಿ ಅಪರೂಪದ ಸಾಹಿತಿ ಕೆ.ಎಸ್.ನರಸಿಂಹಸ್ವಾಮಿ ಅವರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಬಣ್ಣಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಕೆ.ಎಸ್.ನರಸಿಂಹಸ್ವಾಮಿ ಸಾಹಿತ್ಯ ಪ್ರಶಸ್ತಿ ಹಾಗೂ ಕಾವ್ಯ ಗಾಯನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆ.ಎಸ್.ನರಸಿಂಹಸ್ವಾಮಿರವರು ಮಲ್ಲಿಗೆ ಕವಿ ಎಂದೇ ಮನೆ ಮನೆ ಮಾತಾಗಿದ್ದಾರೆ ಎಂದು ಹೇಳಿದರು.

ಜಗತ್ತಿನ ಯಾವ ದೇಶದಲ್ಲೂ ಇರದ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಯ ಶ್ರೀಮಂತಿಕೆಯನ್ನು ನಮ್ಮ ಭಾರತದ ದೇಶ ಹೊಂದಿದೆ, ಕುವೆಂಪು, ದಾ.ರಾ.ಬೇಂದ್ರೆ ಅಂತಹ ಮಹಾನ್ ಸಾಹಿತಿಗಳು ದೇಶ ಸಾಹಿತ್ಯ ವೈಭವನ್ನು ಹೆಚ್ಚಿಸಿದ್ದಾರೆ. ಅವರೆಲ್ಲರ ಸಾಧನೆಗಳು ಕುರಿತು ಮುಂದಿನ ಪೀಳಿಗೆಗೆ ತಿಳಿಸುವ ಜವಾಬ್ದಾರಿ ನಮ್ಮದು ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಪ್ರೊಜಯಪ್ರಕಾಶ್ ಗೌಡ, ಡಾ.ನಾ.ದಾಮೋದರಶೆಟ್ಟಿ ಅವರಿಗೆ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಾಗೂ ಗಾಯಕರಾದ ಸಂಗೀತಾ ಕಟ್ಟಿ, ರಮೇಶ್ ಚಂದ್ರ ಅವರಿಗೆ ಕಾವ್ಯಗಾಯನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಾಡಿನ ಖ್ಯಾತ ಸಾಹಿತಿ ನರಸಿಂಹಾಚಾರ್ ಹಾಗೂ ಕೆ.ಎಸ್.ನರಸಿಂಹಸ್ವಾಮಿ ಅವರ ಟ್ರಸ್ಟ್‌ಗಳ ಜವಾಬ್ದಾರಿಯನ್ನು ಕಿಕ್ಕೇರಿ ಕೃಷ್ಣಮೂರ್ತಿ ಹಾಗೂ ಪ್ರೊ.ಕೃಷ್ಣೇಗೌಡರಿಗೆ ನೀಡಲಾಗಿದೆ, ಟ್ರಸ್ಟ್‌ನ ಅಭಿವೃದ್ಧಿ ಕಾರ್ಯಗಳಿಗೆ ಸಂಪೂರ್ಣ ಬೆಂಬಲ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಸಾಹಿತಿ ಪ್ರೊ.ಬಿ.ಜಯಪ್ರಕಾಶ್‌ಗೌಡ ಮಾತನಾಡಿ, ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದವರೆಗೆ ಹೆಸರು ಮಾಡಿರುವ ಮೈಸೂರು ಮಲ್ಲಿಗೆ ಕಾವ್ಯದ ಸಾಹಿತಿ ನಮ್ಮ ನೆಲದವರು ಎನ್ನುವುದೇ ನಮ್ಮೆಲ್ಲರ ಹೆಮ್ಮೆ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾದದ್ದು. ಕೆ.ಎಸ್.ನರಸಿಂಹಸ್ವಾಮಿಯವರು ಪ್ರೇಮ ಕವಿಯಾದರು ಎಂದಿಗೂ ತಮ್ಮ ಚೌಕ್ಕಟನ್ನು ಮೀರಿ ಕಾವ್ಯ ರಚಿಸಿದವರಲ್ಲ ಬರವಣಿಗೆಯಲ್ಲಿ ಅವರಂತೆ ನಿಷ್ಠೆಯಿಂದ ಇದ್ದು ಅವರನ್ನು ಪಾಲಿಸಬೇಕು. ನಾನು ಅವರ ಹಾದಿಯಲ್ಲಿಯೇ ಸಾಗುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಪ್ರೊ.ಜಯಪ್ರಕಾಶ್‌ಗೌಡ, ಡಾ.ನಾ.ದಾಮೋದರ ಶೆಟ್ಟಿ ಅವರಿಗೆ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು ಹಾಗೂ ಗಾಯಕರಾದ ಸಂಗೀತಾ ಕಟ್ಟಿ, ರಮೇಶ್ ಚಂದ್ರ ಅವರಿಗೆ ಕಾವ್ಯಗಾಯನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಪಿ.ರವಿಕುಮಾರ್ ಗಣಿಗ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ನಹೀಮ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಟ್ರಸ್ಟ್‌ನ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

# ಕೆ.ಬೆಟ್ಟಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಅಭಿನಂದನೆ

ಪಾಂಡವಪುರ, ಮಾ.23– ತಾಲೂಕಿನ ಕೆ.ಬೆಟ್ಟಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ಯಾದನಹಳ್ಳಿ ಪಿ.ಚಲುವರಾಜು, ಉಪಾಧ್ಯಕ್ಷ ಸುಪ್ರೀತ್‌ಗೌಡ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಪಟ್ಟಣದಲ್ಲಿ ಅಭಿನಂಧಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕೆ.ಬೆಟ್ಟಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ನಡೆದ ಚುನಾವಣೆಯಲ್ಲಿ 12 ಸ್ಥಾನಗಳಲ್ಲೂ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಆಯ್ಕೆ ಮಾಡಿದ್ದರು. ಇದೀಗ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ಯಾದನಹಳ್ಳಿ ಪಿ.ಚಲುವರಾಜು, ಉಪಾಧ್ಯಕ್ಷರಾಗಿ ಸುಪ್ರೀತ್‌ಗೌಡ ಅವರನ್ನು ಎಲ್ಲಾ ನಿರ್ದೇಶಕರು ಸೇರಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ.



ಕೆ.ಬೆಟ್ಟಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ ಶ್ಯಾದನಹಳ್ಳಿ ಪಿ.ಚಲುವರಾಜು, ಉಪಾಧ್ಯಕ್ಷ ಸುಪ್ರೀತ್‌ಗೌಡರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂಧಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷ ಇಬ್ಬರು ಜತೆಗೂಡಿ ಕೆಲಸ ಮಾಡಬೇಕು, ಸರಕಾರದಿಂದ ರೈತರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವ ಜತೆಗೆ ಸಹಕಾರ ಸಂಘದ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸಬೇಕು ಎಂದು ತಿಳಿಸಿದರು.

ಸಂಘದ ನಿರ್ದೇಶಕರಾದ ಗುರುಸ್ವಾಮಿ, ವಿ.ಎಸ್.ನಿಂಗೇಗೌಡ, ಮಹೇಶ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ವಿಎಸ್ ಎಸ್‌ಎನ್‌ಬಿ ಮಾಜಿ ಅಧ್ಯಕ್ಷ ತಿಮ್ಮೇಗೌಡ, ಮುಖಂಡ ದೀಪು, ಸುರೇಶ್, ಆದರ್ಶ, ಕುಮಾರ ಸೇರಿದಂತೆ ಹಲವರು ಇದ್ದರು.

# ಸಡಗರದ ಶ್ರೀ ಮುತ್ತುರಾಯಸ್ವಾಮಿ ಜಾತ್ರಾ ಮಹೋತ್ಸವ, ಪಲ್ಲಕ್ಕಿ ರಥೋತ್ಸವ



ಶ್ರೀ ಮುತ್ತುರಾಯಸ್ವಾಮಿಯವರ ಪಲ್ಲಕ್ಕಿ ರಥೋತ್ಸವ, ಜಾತ್ರಾ ಮಹೋತ್ಸವ, ಹಸಿರು ಬಂಡಿ ಉತ್ಸವವು ಸಡಗರ ಸಂಭ್ರಮದಿಂದ ನಡೆಯಿತು.

ಕೆಆರ್.ಪೇಟೆ, ಮಾ.23– ಪಟ್ಟಣದ ಹೇಮಗಿರಿ ರಸ್ತೆಯಲ್ಲಿರುವ ಕೆ.ಆರ್.ಪೇಟೆ ಗ್ರಾಮ ರಕ್ಷಕ, ಶಕ್ತಿ ದೇವರಾದ ಶ್ರೀ ಮುತ್ತುರಾಯಸ್ವಾಮಿ ಪಲ್ಲಕ್ಕಿ ರಥೋತ್ಸವ, ಜಾತ್ರಾ ಮಹೋತ್ಸವ ಹಾಗೂ ಹಸಿರು ಬಂಡಿ ಉತ್ಸವವು ಸಡಗರ ಸಂಭ್ರಮದಿಂದ ನಡೆಯಿತು.

ಪಟ್ಟಣದ ಮುತ್ತುರಾಯಸ್ವಾಮಿ ದೇವಾಲಯದ ಆವರಣದಿಂದ ಆರಂಭವಾದ ಪಲ್ಲಕ್ಕಿ ರಥೋತ್ಸವವು ಹಳೆ ಹೇಮಗಿರಿ ರಸ್ತೆ, ಅಗ್ರಹಾರ ಬಡಾವಣೆ, ಈಶ್ವರ ದೇವಾಲಯ, ಗಣಪತಿ ದೇವಾಲಯ ಮಾರ್ಗವಾಗಿ ಸಾಗಿ, ಮುಕ್ಕಟ್ಟೆ ಚೌಕ ಹಾಗೂ ದುರ್ಗಾ ಭವನ್ ವೃತ್ತದ ಮೂಲಕ ಸಾಗಿ ಗ್ರಾಮ ದೇವತೆ ದೊಡ್ಡಕೇರಮ್ಮ ದೇವಾಲಯದ ಮಾರ್ಗದಿಂದ ಬಂದು ನಿರ್ವಿಘ್ನವಾಗಿ ಸ್ವಸ್ಥಾನ ತಲುಪಿತು.

ಯುವಕರು ಪಲ್ಲಕ್ಕಿ ಉತ್ಸವವನ್ನು ಹೆಗಲೆ ಮೇಲೆ ಹೊತ್ತುಕೊಂಡು ಸಡಗರ ಸಂಭ್ರಮದಿಂದ ಹಾಗೂ ಶ್ರದ್ಧಾಭಕ್ತಿಯಿಂದ ಶ್ರೀ ಮುತ್ತುರಾಯಸ್ವಾಮಿ ದೇವರ ಮೆರವಣಿಗೆಯನ್ನು ನೆರವೇರಿಸಿದರು. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣಗಳಿಂದ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು ಮಹಿಳೆಯರು ಮನೆಯ ಮುಂದೆ ದೇವಾಲಯದ ಆವರಣದಲ್ಲಿ ಬಗೆಬಗೆಯ ಬಣ್ಣದ ರಂಗೋಲಿ ಹಾಕಿ ಉತ್ಸವಕ್ಕೆ ಸ್ವಾಗತ ಕೋರಿದರು. ರಥೋತ್ಸವದ ದಿನದಂದು ಮಹಿಳೆಯರು, ಯುವತಿಯರು ತಲೆಯ ಮೇಲೆ, ಮಡೆ ಹೊತ್ತು ಉತ್ಸಾಹದಿಂದ ಬಂಡಿ ಉತ್ಸವದೊಂದಿಗೆ ಸಂಭ್ರಮದಿಂದ ಸಾಗಿದರು, ಹರಕೆ ಹೊತ್ತವರು ಬಾಯಿ ಬೀಗ ಹಾಕಿಸಿಕೊಂಡು ಉತ್ಸವದ ಜೊತೆ ಸಾಗಿದರು.

ಶಾಸಕ ಹೆಚ್.ಟಿ.ಮಂಜು, ಆರ್‌ಟಿಓ ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕರಾದ ಎಂ.ಬಿ.ಹರೀಶ್, ಡಾಲು ರವಿ ಭಾಗವಹಿಸಿದ್ದರು.

# ಆಧ್ಯಾತ್ಮಿಕ ವಿಚಾರದಲ್ಲಿ ಭಾರತ ವಿಶ್ವಗುರು

ಮಂಡ್ಯ,ಮಾ.23– ಆಧ್ಯಾತ್ಮಿಕ ವಿಚಾರದಲ್ಲಿ ಭಾರತ ಈ ಹಿಂದೆಯೇ ವಿಶ್ವಗುರು ಆಗಿತ್ತು. ಇದೀಗ ಅದೇ ದಾರಿಯಲ್ಲಿ ನಮ್ಮ ದೇಶ ಮತ್ತೊಮ್ಮೆ ಮುನ್ನುಗ್ಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ಶ್ಲಾಘಿಸಿದರು.

ಭಾನುವಾರ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸಾಹಿತಿ ದೇಶಹಳ್ಳಿ ಮಾದಯ್ಯ ಸ್ಮರಣಾರ್ಥ 11ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದಲ್ಲಿ 66 ಕೋಟಿ ಜನ ಪುಣ್ಯಸ್ನಾನ ಮಾಡಿದರು. ಇದು ದೇಶದ ಆಧ್ಯಾತ್ಮಿಕತೆಗೆ ಸಾಕ್ಷಿ ಎಂದರು.

ಹೊಸವರ್ಷಾಚರಣೆ ಹೆಸರಲ್ಲಿ ಕೆಲವರು ಮೋಜು, ಮಸ್ತಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಅನೇಕ ಲೈಂಗಿಕ ದೌರ್ಜನ್ಯ ಹಾಗೂ ಅಪರಾಧ ಚಟುವಟಿಕೆಗೆ ಕಾರಣವಾಗುತ್ತದೆ. ಆದರೆ ಕುಂಭಮೇಳದಲ್ಲಿ ಇಂತಹ ಒಂದು ಲೈಂಗಿಕ ದೌರ್ಜನ್ಯ ಅಥವಾ ಅಪರಾಧ ಚಟುವಟಿಕೆ ನಡೆಯಲಿಲ್ಲ. ಇದು ಆಧ್ಯಾತ್ಮಿಕತೆಗೆ ಇರುವ ಶಕ್ತಿ ಎಂದು ಹೇಳಿದರು.

ಯುಗಾದಿ ಅಂಗವಾಗಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಭಾರತೀಯರಿಗೆ ಮತ್ತು ಹಿಂದೂಗಳಿಗೆ ಯುಗಾದಿಯೇ



ಸಾಹಿತಿ ದೇಶಹಳ್ಳಿ ಮಾದಯ್ಯ ಸ್ಮರಣಾರ್ಥ 11ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿದ ಡಾ.ಈ.ಸಿ.ನಿಂಗರಾಜ್ ಗೌಡ.

ಹೊಸ ವರ್ಷವಾಗಿದೆ. ಹಾಗಾಗಿ 2025ರ ಯುಗಾದಿಯನ್ನು, ಚೈತ್ರ ಮಾಸದ ಶುಕ್ಲ ಪ್ರತಿಪದೆಂದು, ಮಾರ್ಚ್ 29, 2025 ರಂದು ಆಚರಿಸಲಾಗುತ್ತದೆ ಎಲ್ಲರಿಗೂ ಹೊಸವರ್ಷದ ಶುಭಾಷಯಗಳು. ಈ ಹೊಸ ಅಂಗೀರಸ ಸಂವತ್ಸರವು ಸಮೃದ್ಧಿ, ಜ್ಞಾನ ಮತ್ತು ಆಧ್ಯಾತ್ಮಿಕತೆಗೆ ಆದ್ಯತೆ ನೀಡುತ್ತದೆ. ಈ ವರ್ಷದಲ್ಲಿ ಕೃಷಿ, ಶಿಕ್ಷಣ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿ ನಿರೀಕ್ಷಿಸಲಾಗಿದೆ. ನಿಮಗೆಲ್ಲರಿಗೂ ಒಳ್ಳೆಯದಾಗಲಿ ಎಂದು ಡಾ.ಈ.ಸಿ. ನಿಂಗರಾಜ್ ಗೌಡ ಶುಭ ಹಾರೈಸಿದರು.

ಮಂಡ್ಯ ವಿಶ್ವವಿದ್ಯಾಲಯವನ್ನು ಮುಚ್ಚುವ ಹುನ್ನಾರ ನಡೆಯುತ್ತಿದೆ. ಆದರೆ ಸರ್ಕಾರ ವಿವಿಯನ್ನು ಉಳಿಸಲು ಕಟಿಬದ್ಧವಾಗಬೇಕು. ಯಾವುದೇ ವಿಶ್ವವಿದ್ಯಾನಿಲಯ ಆರಂಭವಾದಾಗ ಮೂಲಸೌಕರ್ಯ, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಕೊರತೆ ಎದುರಿಸುತ್ತದೆ. ಅದನ್ನೇ ಗುರಿಯಾಗಿಸಿಕೊಂಡು ವಿಶ್ವವಿದ್ಯಾನಿಲಯ ಮುಚ್ಚುವುದು ಬೇಡ. ಬದಲಾಗಿ ಖಾಲಿ ಇರುವ ಎಲ್ಲಾ ಬೋಧಕೇತರ, ಬೋಧಕ, ಪ್ರಾಧ್ಯಾಪಕ ಹುದ್ದೆಗಳಿಗೆ ಕೂಡಲೇ ನೇಮಕ ಮಾಡಿಕೊಳ್ಳಬೇಕು ಹಾಗೂ ಮೂಲ ಸೌಕರ್ಯವನ್ನು ಕಲ್ಪಿಸಬೇಕು. ಎಲ್ಲಾ ಸರ್ಕಾರಿ ವಿಶ್ವವಿದ್ಯಾನಿಲಯಗಳಿಗೆ ತಲಾ 100 ಕೋಟಿ ವಿಶೇಷ ಅನುದಾನವನ್ನು ಕೂಡಲೇ ನೀಡಬೇಕು. ಮಂಡ್ಯ ವಿಶ್ವವಿದ್ಯಾಲಯ ಮೆಚ್ಚಿಕೊಂಡು ಸಾವಿರಾರು ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದು, ಸರ್ಕಾರ ವಿಶ್ವವಿದ್ಯಾಲಯವನ್ನು ಉಳಿಸಬೇಕೆಂದು ಮನವಿ ಮಾಡಿದರು.

ಖ್ಯಾತ ವೈದ್ಯ ಹಾಗೂ ಸಾಹಿತಿ ಡಾ. ಚಂದ್ರಶೇಖರ್, ಡಾ.ಜೀಶಂಪ ಸಾಹಿತ್ಯ ವೇದಿಕೆಯ 11ನೇ ಕನ್ನಡ ಅಕ್ಷರ ಜಾತ್ರೆಯ ಸಮ್ಮೇಳನಾಧ್ಯಕ್ಷ ಹಾಗೂ ಪ್ರಾಧ್ಯಾಪಕ ಡಾ. ಹೆಚ್.ಎಂ.ನಾಗೇಶ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಾಲಿಂಗು, ಕೆ.ಹೆಚ್.ಮಂಜುನಾಥ್, ಹೆಚ್.ಟಿ.ದೇವರಾಜು, ಪ್ರಕಾಶ್, ಪುರುಷೋತ್ತಮ್, ಎನ್.ಬಸವರಾಜು, ಉಮಾಶಂಕರ್, ಹಿರೇನೆಲ್ಲೂರು ಶಿವು, ಚಿನ್ಮಯಿಗೌಡ ಅವರನ್ನು ಅಭಿನಂದಿಸಲಾಯಿತು.

# ಗಂಜಾಂನಲ್ಲಿ ವಿಶ್ವಗುಬ್ಬಿ ದಿನ ಆಚರಣೆ

**ಶ್ರೀರಂಗಪಟ್ಟಣ:** ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಸಂಘದಿಂದ ಶನಿವಾರ ವಿಶ್ವ ಗುಬ್ಬಿ ದಿನವನ್ನು ಆಚರಿಸಲಾಯಿತು.

ಗಂಜಾಂನಲ್ಲಿ ಶ್ರೀ ಧರ್ಮಸ್ಥಳ ಸಂಘದ ಪದಾಧಿಕಾರಿಗಳ ಜೊತೆ ಸಂಘದ ಯೋಜನಾಧಿಕಾರಿ ಗಣಪತಿ ಭಟ್ ನೇತೃತ್ವದಲ್ಲಿ ಪದಾಧಿಕಾರಿಗಳು ಗಿಡ ಮರಗಳಿಗೆ ನಿರುಪಯುಕ್ತ ಪ್ಲಾಸ್ಟಿಕ್ ಬಾಟಲ್‌ಗಳನ್ನು ಕತ್ತರಿಸಿ ಅವುಗಳಿಗೆ ಆಹಾರ ಮತ್ತು ನೀರು ಹಾಕಿ ಮರಗಳಿಗೆ ನೇತು ಹಾಕುವ ಮೂಲಕ ವಿನೂತನ ವಿಶ್ವ ಗುಬ್ಬಿ ದಿನಾಚರಣೆ ಆಚರಿಸಿದರು.

ಹಲವು ಕಡೆಗಳಲ್ಲಿ ಈ ಕಾರ್ಯಕ್ರಮ



ನಡೆಸಿದ ಅವರು, ಗ್ರಾಮದ ಜನರಿಗೆ ಪಕ್ಷಿ ಸಂಕುಲಗಳ ಸಂರಕ್ಷಣೆ ಕುರಿತು ಜಾಗೃತಿಗಳ ನಡೆಸಿದರು. ಸಂಘದ ಈ ಸೇವಾ ಕಾರ್ಯಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಮೇಲ್ವಿಚಾರಕಾರದ ಪವನ್ ಸುಜಾತ, ವಿಎಲ್‌ಇ ಆದ ಛಾಯಾ ಸೇವಾ ಪ್ರತಿನಿಧಿಗಳಾದ ಸರಸ್ವತಿ, ಗೀತಾ, ಭಾರತಿ, ಸುನೀತಾ ಇದ್ದರು.

# ಕಲಾಪದಿಂದ ದೂರ ಉಳಿದು ನೈತಿಕ ಬೆಂಬಲ



**ಶ್ರೀರಂಗಪಟ್ಟಣ:** ಕನ್ನಡಿಗರ ಮೇಲಿನ ದಬ್ಬಾಳಿಕೆ ಖಂಡಿಸಿ ವಿವಿ ಕನ್ನಡ ಪರ ಸಂಘಟನೆಗಳು ಹಮ್ಮಿಕೊಂಡಿದ್ದ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿ, ಪಟ್ಟಣದ ವಕೀಲರ ಸಂಘದ ಸದಸ್ಯರು ನ್ಯಾಯಾಲಯದ ಕಲಾಪದಿಂದ ಹೊರಗುಳಿದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಸತ್ಯನಾರಾಯಣ ನೇತೃತ್ವದಲ್ಲಿ ಕಚೇರಿ ಸಭಾಂಗಣದಲ್ಲಿ ಸಂಘದ ಸದಸ್ಯರೊಂದಿಗೆ ಸಭೆ ನಡೆಸಿ, ನಾಡು ನುಡಿ ಕುರಿತು ಚರ್ಚೆ ನಡೆಸಿದರು.

ಕನ್ನಡಿಗರ ಹಿತ ರಕ್ಷಿಸಲು ಸರೋಜಿನಿ ಮಹಿಷಿ ವರದಿ ಜಾರಿಗೆ ತರಬೇಕು ಎನ್ನುವ ಮೂಲಕ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿದ ವಕೀಲರು ನ್ಯಾಯಾಲಯದ ಕಲಾಪದಿಂದ ಹೊರಗುಳಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪವನ್ ಗೌಡ ಸೇರಿದಂತೆ ಸಂಘದ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

# ಕರೆಯುತ್ತಿದೆ ತಪೋನಂದನ ಉದ್ಯಾನ



ಮರ ಕಡಿಯದಂತೆ ಜಾಗೃತಿ ಮೂಡಿಸುತ್ತಿರುವ ಆಕೃತಿ.



ಮಹಿಳೆ ಬುತ್ತಿ ಹೊತ್ತು ತರುವ, ರೈತ ಕುರಿ ಕಾಯುವ ದೃಶ್ಯಗಳನ್ನು ಕಲಾಕೃತಿಗಳ ಮೂಲಕ ಕಟ್ಟಿಕೊಡಲಾಗಿದೆ. ಪರಿಸರ ಸಂರಕ್ಷಣೆಯ ಸಂದೇಶದೊಂದಿಗೆ ಮರ ಕಡಿಯಬಾರದು ಎಂದು ಜನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮೂವರು ಮರ ಕಡಿಯುತ್ತಿದ್ದರೆ, ಪ್ರಕೃತಿ ಮಾತೆ ಮರ ಕಡಿಯದಂತೆ ಮರ ಅಪ್ಪಿರುವ ಚಿತ್ರಣದ ಆಕೃತಿಗಳು ಉದ್ಯಾನವನದ ಪ್ರಮುಖ ಆಕರ್ಷಣೆಯಾಗಿದೆ ಬೆಂಗಳೂರಿನ ಕಲಾವಿದ ದೇವರಾಜು ಅವರ ತಂಡ ಕಳೆದ ಐದು ತಿಂಗಳಿನಿಂದ ಈ ಕಲಾಕೃತಿಗಳ ನಿರ್ಮಾಣ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

**ಉದ್ಘಾಟನೆಗೆ ಸನ್ನಿಹಿತ:** ಕುವೆಂಪುನಗರ ತಪೋನಂದನ ಉದ್ಯಾನವನ ಮಾಜಿ ಮೇಯರ್ ಶಿವಕುಮಾರ್ ಪ್ರತಿನಿಧಿಸುವ ವಾರ್ಡ್ ವ್ಯಾಪ್ತಿಯಲ್ಲಿದ್ದು, ಕಳೆದ ನಾಲ್ಕು ವರ್ಷದಿಂದ ಹಂತ ಹಂತವಾಗಿ ಒಂದು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಇದೀಗ ಅಂತಿಮ ಹಂತದ ಕಾಮಗಾರಿ ಪೂರ್ಣಗೊಂಡಿರುವುದರಿಂದ ಶೀಘ್ರವೇ ಅಭಿವೃದ್ಧಿ ಹೊಂದಿದ ತಪೋನಂದನ ಉದ್ಯಾನವನ ಉದ್ಘಾಟನೆಗೊಳ್ಳಲಿದೆ

# ಕ್ಯಾಮರಾದಲ್ಲಿ ಫೋಟೋ ತೆಗೆಯುತ್ತಿದ್ದಾರೆ

ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಸಿಸಿ ಟಿವಿ ಕ್ಯಾಮರಾ, ಎಐ ಕ್ಯಾಮರಾಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳ ಫೋಟೋ ಕ್ಲಿಕ್ಕಿಸಿ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿರುವ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ಗೆ ಕಳುಹಿಸುವ ಪ್ರಕ್ರಿಯೆ ಆರಂಭವಾದ ಬಳಿಕ ಎಲ್ಲಾ 52 ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ಮೊಬೈಲ್‌ನಲ್ಲಿ ಫೋಟೋ ತೆಗೆಯುವ ಕೆಲಸದಿಂದ ಸ್ವಲ್ಪ ರಿಲ್ಯಾಕ್ಸ್ ಆಗಿದ್ದರು. ಕರ್ತವ್ಯದ ವೇಳೆ ಜಂಕ್ಷನ್ನಿನ ಒಂದು ಸ್ಥಳದಲ್ಲಿ ಕುಳಿತು ಮೊಬೈಲ್‌ನಲ್ಲಿ ಬ್ಯುಸಿಯಾಗುತ್ತಿದ್ದುದನ್ನು ಗಮನಿಸಿದ ಸಂಚಾರ ವಿಭಾಗದ ಎಸಿಪಿ ಎಂ. ಶಿವಶಂಕರ ಅವರು, ಈ ಹಿಂದೆ ಇದ್ದಂತೆ ಪ್ರತಿಯೊಬ್ಬರೂ ಮೊಬೈಲ್‌ನಿಂದ ಫೋಟೋ ತೆಗೆದು ಸಂಚಾರ ಠಾಣೆ ಸರ್ವರ್‌ಗೆ ಕಳುಹಿಸಬೇಕೆಂದು ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಫೋಟೋ ತೆಗೆಯಲು ಸಿಬ್ಬಂದಿ ಮುಂದಾಗಿದ್ದಾರೆ.

ಅಲ್ಲದೇ, ಒಂದು ಜಂಕ್ಷನ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸಂಚಾರ ಠಾಣೆ ಪೊಲೀಸರು, ನಾಲ್ಕೈದು ತಾಸು ಕೆಲಸ ಮಾಡಿದ ಬಳಿಕ ಪಕ್ಕದ ಸರ್ಕಲ್‌ಗೆ ಹೋಗಿ ಆಂತರಿಕ ಬದಲಾವಣೆ ಮಾಡಿಕೊಳ್ಳಬೇಕೆಂದು ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಮೈಸೂರಿನ ವಿವಿಧ ಸ್ಥಳಗಳಲ್ಲಿ ಅಳವಡಿಸಿರುವ 59 ಪಾನ್–ಟಿಲ್ಟ್–ಝೂಮ್ (ಪಿಟಿಝಡ್) ಕ್ಯಾಮರಾಗಳು, ಎಐ ಕ್ಯಾಮರಾಗಳಲ್ಲಿ ಸೆರೆ ಹಿಡಿಯುವ ಟ್ರಾಫಿಕ್ ವಯೋಲೇಷನ್ ದೃಶ್ಯಾವಳಿಗಳನ್ನು ಟ್ರಾಫಿಕ್ ಆಟೋಮೇಷನ್ ಸೆಂಟರ್‌ಗೆ ರವಾನಿಸಲಿದ್ದು, ಅಲ್ಲಿ ನೋಟಿಸ್ ಸೃಜನೆಯಾಗಿ ವಾಹನ ಆರ್‌ಸಿ ಓನರ್‌ಗಳಿಗೆ ಅಂಚೆ ಮೂಲಕ ರವಾನಿಸಲಾಗುವುದು.

ಅಲ್ಲದೇ, ನಜರ್‌ಬಾದ್‌ರುವ ನಗರ ಪೊಲೀಸ್ ಆಯುಕ್ತರ ಕಚೇರಿ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲೂ 13 ಮಂದಿ ಸಿಬ್ಬಂದಿಗಳು ದಿನದ 24 ಗಂಟೆಯೂ 3 ಪಾಳಿಯಲ್ಲಿ ಕೆಲಸ ನಿರ್ವಹಿಸಿ ಕಂಪ್ಯೂಟರ್ ಮಾನಿಟರ್ ಮೇಲೆ ಕಾಣುವ ಸಂಚಾರವನ್ನು ಗಮನಿಸಿ ನಿಯಮ ಉಲ್ಲಂಘಿಸಿದ ವಾಹನಗಳನ್ನು ಝೂಮ್ ಮಾಡಿ ನೋಂದಣಿ ಸಂಖ್ಯೆ ಗುರ್ತಿಸಿ ಸರ್ವರ್‌ನಲ್ಲಿ ನೋಟಿಸ್ ಸೃಜಿಸಿ ವಾಹನಗಳ ಆರ್‌ಸಿ ಮಾಲೀಕರಿಗೆ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿದೆ.

# ಧರ್ಮಾಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶ ಇಲ್ಲ

## ಆರ್‌ಎಸ್‌ಎಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ

ಬೆಂಗಳೂರು, ಮಾ.23– ಧರ್ಮ ಆಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶ ಇಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹ (ಪ್ರಧಾನ ಕಾರ್ಯದರ್ಶಿ) ದತ್ತಾತ್ರೇಯ ಹೊಸಬಾಳೆ ಹೇಳಿದರು. ಚನ್ನೇನಹಳ್ಳಿಯಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಕೊನೆಯ ದಿನವಾದ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮುಸ್ಲಿಮರಿಗೆ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 4ರಷ್ಟು ಮೀಸಲಾತಿ ನೀಡುವ ಕರ್ನಾಟಕ ಸರ್ಕಾರದ ನಿರ್ಧಾರ ಕುರಿತು ಮಾತನಾಡಿದ ಅವರು, ಸಂವಿಧಾನದ ಪ್ರಕಾರ, ಹಿಂದುಳಿದವರಿಗೆ ಮಾತ್ರ ಮೀಸಲಾತಿ ಅನ್ವಯವಾಗಲಿದೆ. ಧರ್ಮಾಧಾರಿತವಾಗಿ ಮೀಸಲಾತಿ ನೀಡುವುದು ಎಂದರೆ ಸಂವಿಧಾನದ ವಿರುದ್ಧ ಹೋಗುವುದಾಗಿದೆ. ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ನೀಡಿದ್ದ ಧರ್ಮಾಧಾರಿತ ಮೀಸಲಾತಿ ಕೋರ್ಟ್‌ಗಳಲ್ಲಿ ಬಿದ್ದು ಹೋಗಿದೆ ಎಂದು ಹೇಳಿದರು.



ಕ್ಷೇತ್ರ ಮರುವಿಂಗಡನೆ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ನೇತೃತ್ವದಲ್ಲಿ ನಡೆದ ಜಂಟಿ ಕ್ರಿಯಾ ಸಮಿತಿ ಸಭೆ ಕುರಿತು, ರಾಜಕೀಯದಲ್ಲಿ ಇರುವವರು ಪ್ರತಿದಿನ ಏನು ಬೇಕಾದರೂ ಹೇಳಿಕೆ ನೀಡಬಹುದು. ಆದರೆ ಯಾವುದೇ ಕರಡು ಇಲ್ಲದೆ ಅಥವಾ ಅಧಿಕೃತವಾಗಿ ಎಲ್ಲೂ ಪ್ರಕಟಣೆಯಾಗದೆ ಸಂಘ ಏನನ್ನೂ ಹೇಳುವುದಿಲ್ಲ. ಈ ಕುರಿತು ನಾವು ಮಾತನಾಡುವುದಿಲ್ಲ ಎಂದು ಪ್ರತಿಕ್ರಿಯಿಸಿದರು.

ಇಂದು, ಸ್ವಾತಂತ್ರ್ಯ ಸೇನಾನಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮರಾದ ದಿನ. ಭಾರತದ ಮಹಾನ್ ಮಹಿಳಾ ಸ್ವಾತಂತ್ರ್ಯ ಸೇನಾನಿ, ಕುಶಲ ಆಡಳಿತಗಾರ್ತಿ ಮತ್ತು ನಿರ್ಭೀತ ಯೋಧೆ ಅಬ್ಬಕ್ಕ ಅವರು ಜನಿಸಿ 500 ವರ್ಷಗಳಾದವು. ಅವರು ಎಲ್ಲರಿಗೂ ಸ್ಫೂರ್ತಿ ಎಂದು ಸ್ಮರಿಸಿದರು. ಆರ್‌ಎಸ್‌ಎಸ್ ಯಾವ ಹೊಸ ಕಾರ್ಯವನ್ನೂ ಮಾಡಿಲ್ಲ. ದೇಶದಲ್ಲಿ ಶತಮಾನಗಳಿಂದ ಇರುವುದನ್ನೇ ಮುಂದುವರಿಸಿದೆ. ಸಂಘಕ್ಕೆ 100 ವರ್ಷ ಆಗಿದ್ದನ್ನು ನಾವು ಸಂಭ್ರಮಿಸುತ್ತಿಲ್ಲ. ಆತ್ಮಾವಲೋಕನ ಮತ್ತು ಸಂಘದ ಕೆಲಸ, ಸಮಾಜವನ್ನು ಸಂಘಟಿಸಲು ಪುನರ್ ಸಮರ್ಪಿಸಿಕೊಳ್ಳುವ ಸಮಯವಾಗಿ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಜಾತಿ ಬಗ್ಗೆ ಮಾತನಾಡಿದಷ್ಟೂ ಸಮಾವೇಶಗಳನ್ನು ಮಾಡಿದಷ್ಟು ಜಾತಿ ಗಟ್ಟಿಯಾಗುತ್ತಾ ಹೋಗುತ್ತದೆ. ಸಂಘವು ಯಾವುದೇ ಪ್ರಚಾರವಿಲ್ಲದೇ ಜಾತಿ ಪದ್ಧತಿ ವಿನಾಶಕ್ಕೆ ಶ್ರಮಿಸುತ್ತಿದೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು. ಸಂಘಕ್ಕೆ ಸೇರಿದ ಮೇಲೆ ಜಾತಿ ಭಾವ ಇಲ್ಲದೆ ಎಲ್ಲ ಸಮಾನರಾಗಿ ಕಾರ್ಯನಿರ್ವಹಿಸುತ್ತಾರೆ. ಅಂತರ್ಜಾತಿ ವಿವಾಹ ಆಗುತ್ತವೆ. ಜಾತಿ ವಿನಾಶ ಬಯಸುವವರು ಸಂಘಕ್ಕೆ ಸೇರಬೇಕು ಎಂದು ಆಹ್ವಾನಿಸಿದರು.

## ಖರ್ಗೆ ಭೇಟಿ

ಈ ವೇಳೆ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಹಾಜರಿದ್ದರು. ಇಂದು ಬೆಂಗಳೂರಿನ ಮುಖ್ಯಮಂತ್ರಿಗಳ ಕಾವೇರಿ ನಿವಾಸಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರು ಆಗಮಿಸಿ ಸಿದ್ದರಾಮಯ್ಯ ನವರನ್ನು ಭೇಟಿ ಮಾಡಿ, ಉಭಯ ಕುಶಲೋಪರಿ ವಿಚಾರಿಸಿದರು. ಹನಿ ಟ್ರ್ಯಾಪ್ ವಿವಾದದ ಬೆನ್ನಲ್ಲೇ ಸ್ವತಃ ಮಲ್ಲಿ ಕಾರ್ಜುನ ಖರ್ಗೆ ಅವರೇ ಬಂದು ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದು ಕುತೂಹಲಕ್ಕೆ ಕಾರಣವಾಗಿದೆ.

ಹನಿಟ್ರಾಪ್ ವಿಚಾರದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್, ರಾಜ್ಯ ನಾಯಕರಿಂದ ದೂರವಾಣಿ ಮೂಲಕ ಮಾಹಿತಿ ಪಡೆದಿದೆ. ಆದರೂ ಸಹ ಎಐಸಿಸಿ ಅಧ್ಯಕ್ಷರು ಸಿಎಂ ಅವರ ಆರೋಗ್ಯ ವಿಚಾರಿಸುವ ನೆಪದಲ್ಲಿ ಬಂದು ಹನಿಟ್ರ್ಯಾಪ್ ಬಗ್ಗೆ ಸುದೀರ್ಘವಾಗಿ 45 ಮಿನಿಷಗಳ ಮಹತ್ವದ ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ಇಲ್ಲಿ ಬೇರೆ ಬೇರೆ ವಿಚಾರಗಳ ಬಗ್ಗೆ ಚರ್ಚೆ ನಡೆದಿದ್ದರೂ, ಹನಿಟ್ರ್ಯಾಪ್ ವಿಚಾರ ಕುತೂಹಲ ಮೂಡಿಸಿದೆ. ಈ ಬಗ್ಗೆ ಮಾಧ್ಯಮದವರು ಪ್ರಶ್ನಿಸಿದಾಗ, ಭೇಟಿ ಅಂದ ಮೇಲೆ ಸಾಮಾನ್ಯವಾಗಿ ಹಲವು ರಾಜಕೀಯ ವಿಚಾರಗಳು ಚರ್ಚೆ ಆಗಿರುತ್ತದೆ. ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡಿರುತ್ತೇವೆ ಎಂದು ಸ್ಪಷ್ಟಪಡಿಸಿದರು. ಈ ಮೂಲಕ ಹನಿಟ್ರ್ಯಾಪ್ ಬಗ್ಗೆಯೂ ಸಹ ಚರ್ಚೆ ನಡೆದಿದೆ ಎನ್ನುವುದನ್ನು ಪರೋಕ್ಷವಾಗಿ ಖಚಿತಪಡಿಸಿದಂತಾಗಿದೆ.

# ಹನಿಟ್ರ್ಯಾಪ್ ಪ್ರಕರಣ: ಸಚಿವ ರಾಜಣ್ಣ ದೂರು ಕೊಟ್ಟರೆ ಉನ್ನತ ಮಟ್ಟದ ತನಿಖೆ

## ಗೃಹ ಸಚಿವ ಪರಮೇಶ್ವರ್ ಪುನರುಚ್ಚಾರ

ಬೆಂಗಳೂರು, ಮಾ. 23– ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಕೆ.ಎನ್. ರಾಜಣ್ಣ ಅವರು ದೂರು ಕೊಟ್ಟರೆ ಉನ್ನತ ಮಟ್ಟದಲ್ಲಿ ತನಿಖೆ ನಡೆಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ್ ಅವರು ಭಾನುವಾರ ಹೇಳಿದರು.



ಜಿ. ಪರಮೇಶ್ವರ್


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಣ್ಣ ದೂರು ಕೊಡುವುದಾಗಿ ಹೇಳಿದ್ದಾರೆ, ಇನ್ನೂ ಕೊಟ್ಟಿಲ್ಲ. ಅವರು ದೂರು ಕೊಟ್ಟರೆ ಉನ್ನತ ಮಟ್ಟದ ತನಿಖೆ ನಡೆಸಲಾಗುವುದು. ಯಾವ ತನಿಖೆಗೆ ಕೊಡಬೇಕು ಎಂಬುದರ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.


ಈಗಾಗಲೇ ಯಾವ ತನಿಖೆಗೆ ಕೊಡಬೇಕು ಎಂದು ಪ್ರಾಥಮಿಕವಾಗಿ ಚಿಂತನೆಗಳು ನಡೆದಿವೆ, ಸಿಎಂ ಜೊತೆಗೆ ಚರ್ಚೆ ಮಾಡಿದ ಬಳಿಕ ನಿರ್ಧಾರ ಪ್ರಕಟಿಸುತ್ತೇವೆಂದು ತಿಳಿಸಿದರು. ಹನಿಟ್ರ್ಯಾಪ್ ಪ್ರಕರಣದಲ್ಲಿ ದೊಡ್ಡ ಆರೋಪ ಕೇಳಿ ಬಂದಿದೆ. ಹೀಗಾಗಿ ಗಂಭೀರವಾಗಿ ತಗೊಳ್ಳಲೇಬೇಕಿದೆ. ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ರಾಜಣ್ಣ ಅವರು ಇಷ್ಟೊತ್ತಿಗೆ ದೂರು ಕೊಟ್ಟಿದ್ದರೆ ಯಾವ ಸ್ವರೂಪದ ತನಿಖೆ ಅಂತ ಘೋಷಣೆ ಮಾಡುತ್ತಿದ್ದೆವು ಎಂದು ಹೇಳಿದ್ದಾರೆ.


ಸಿಬಿಐ ಅಥವಾ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಯಾಗಲಿ ಎಂಬ ಬಿಜೆಪಿ ಒತ್ತಾಯಕ್ಕೆ ಪ್ರತಿಕ್ರಿಯಿಸಿ, ನಾವು ನಮ್ಮದೇ ರೀತಿಯಲ್ಲಿ ಪರಿಶೀಲಿಸಿ ನಿರ್ಧಾರ ಮಾಡುತ್ತೇವೆ. ಇಷ್ಟು ದೊಡ್ಡ ಘಟನೆ ನಡೆದಿದೆ, ವಿಧಾನಸೌಧದಲ್ಲಿ ಚರ್ಚೆ ಆಗಿದೆ. ಅಂತಹದ್ದಲ್ಲಿ ಗಂಭೀರವಾಗಿ ತಗೊಳ್ಳಲಿಲ್ಲ ಎಂದರೆ ಆಗುವುದಿಲ್ಲ ಎಂದರು. ಸದನದಲ್ಲಿ ಏಕಾಏಕಿ ರಾಜಣ್ಣ ಮಾತಾಡಿದ್ದಕ್ಕೆ ಹೈಕಮಾಂಡ್ ಬೇಸರವಾಗಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿ, ಇದು ಗೊತ್ತಿಲ್ಲ, ಇದರ ಬಗ್ಗೆ ಅಧ್ಯಕ್ಷರು ನೋಡ್ಕೋತಾರೆ ಎಂದು ಹೇಳಿದ್ದಾರೆ. ರಾಜಣ್ಣ ಅವರ ಮೇಲೆ ದೂರು ಕೊಡದಂತೆ ಒತ್ತಡ ಇದೆಯಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಇದರ ಬಗ್ಗೆ ನನ್ನ ಜೊತೆ ಯಾರೂ ಮಾತಾಡಿಲ್ಲ, ಹೈಕಮಾಂಡ್‌ನವರೂ ಮಾತಾಡಿಲ್ಲ ಎಂದರು.

ಪ್ರತಿಕ್ರಿಯೆ ನೀಡಿರುವ ಹೊರಟ್ಟಿ, ಹನಿಟ್ರ್ಯಾಪ್ ನಂತಹ ಪ್ರಕರಣಗಳು ಸದನದಲ್ಲಿ ಕೇಳಿ ಬರುತ್ತಿವೆ. ಚಿಂತಕರ ಚಾವಡಿ ಎನಿಸಿಕೊಂಡಿರುವ ವಿಧಾನಪರಿಷತ್‌ನಲ್ಲಿ ಎಲ್ಲವೂ ಸರಿಯಿಲ್ಲ. ಕಾಲ ಕೆಟ್ಟಿದ್ದು, ರಾಜಕಾರಣ ಬಹಳ ಕಲುಷಿತ ಆಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

# ಕರಕುಶಲ ವಸ್ತುಗಳ ಮಾರಾಟ ಮಳಿಗೆಗಳ ಮೇಲೆ ಅರಣ್ಯ ಇಲಾಖೆ ದಾಳಿ







ಮೈಸೂರಿನ ಕೆಲ ಮಳಿಗೆಗಳಲ್ಲಿ ಮಾರಾಟ ಮಾಡುತ್ತಿದ್ದ ಶ್ರೀಗಂಧದ ತುಂಡುಗಳು ಹಾಗೂ ಇನ್ನಿತರ ವಸ್ತುಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡರು.

## ಶ್ರೀಗಂಧ ತುಂಡುಗಳ ವಶ, ಪ್ರಕರಣ ದಾಖಲು

ಮೈಸೂರು, ಮಾ.23– ಶ್ರೀಗಂಧದ ತುಂಡುಗಳು ಹಾಗೂ ಇದರ ಉಪಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ಅರಣ್ಯಾಧಿಕಾರಿಗಳು ದಿಢೀರ್ ದಾಳಿ ನಡೆಸಿ, ಅಪಾರ ಪ್ರಮಾಣದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರದ ಕೆಲವು ರೇಷ್ಮೆ ಸೀರೆ ಹಾಗೂ ಕರಕುಶಲ ವಸ್ತುಗಳ ಮಾರಾಟ ಮಳಿಗೆಗಳಲ್ಲಿ ಶ್ರೀಗಂಧದ ತುಂಡುಗಳು ಇನ್ನಿತರ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಮೈಸೂರಿನ ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ ಗೌಡ ಪಾಟೀಲ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಿ.ರುದ್ರೇಶ್ ನೇತೃತ್ವದದಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಲಾಗಿದೆ.

ಈ ವೇಳೆ ವೇಳೆ ನಗರದ 4 ಮಳಿಗೆಗಳಲ್ಲಿ ಸುಮಾರು 15.83 ಕೆಜಿ ತೂಕದ 249 ಶ್ರೀಗಂಧದ ತುಂಡುಗಳು, 26 ಕೆಜಿ ತೂಕದ 537 ರಕ್ತಚಂದನದ ತುಂಡುಗಳು, ಸುಮಾರು ನಾಲ್ಕೂವರೆ ಕೆಜಿ ಶ್ರೀಗಂಧದ ಪುಡಿ, ಐದು ಕೆಜಿಗೂ ಹೆಚ್ಚು ರಕ್ತಚಂದನದ ಪುಡಿ, ಮುಕ್ಕಾಲು ಕೆಜಿ ಗಂಧದ ಚಕ್ಕೆಯನ್ನು ವಶಪಡಿಸಿಕೊಂಡು, ಆ ಮಳಿಗೆಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಅರಣ್ಯಾಧಿಕಾರಿಗಳಾದ ಕೆ.ಸುರೇಂದ್ರ, ಸಚಿನ್, ವಿ.ಮುತ್ತುರಾಜು, ಹೆಚ್.ರಾಘವೇಂದ್ರ, ಶ್ರೀಮತಿ ದೇಸಾಯಿ ಯೋಗೇಶ್ವರಿ, ಟಿ.ಸಿ.ಕನ್ನಿಕಾ, ಸುಮಲತಾ, ಸಿ.ಎಸ್.ಮೋಹನ್, ಸಿಬ್ಬಂದಿಗಳಾದ ಕುಮಾರ, ರಾಣಿ, ಆರ್.ಕುಮಾರ, ಸಿದ್ದರಾಜಶೆಟ್ಟಿ, ತಿರುಪತಿ ಪೂಜಾರ ಮತ್ತಿತರರು ಭಾಗವಹಿಸಿದ್ದರು.

**ಎಚ್ಚರವಹಿಸಿ:** ಮಳಿಗೆಗಳಲ್ಲಿ ಶ್ರೀಗಂಧಕ್ಕೆ ಸಂಬಂಧಿಸಿದ ಉತ್ಪನ್ನಗಳ ಮಾರಾಟಕ್ಕೆ ಅರಣ್ಯ ಇಲಾಖೆಯಿಂದ ಯಾವುದೇ ಪರವಾನಗಿ ನೀಡಿಲ್ಲ. ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು. ಅಗತ್ಯವಿದ್ದರೆ ಅಶೋಕಪುರಂ ಅರಣ್ಯ ಭವನದಲ್ಲಿರುವ ಸರ್ಕಾರಿ ಶ್ರೀಗಂಧದ ಕೋಠಿಯಲ್ಲಿ ಖರೀದಿ ಮಾಡಬಹುದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

# 'ಶಕ್ತಿ'ಗೆ ಪೂರಕವಾಗಿ ಬಸ್‌ಗಳ ಸ್ವಚ್ಛತಾ ಅಭಿಯಾನ



ಮೈಸೂರಿನ ಬನ್ನಿಮಂಟಪ ದಲ್ಲಿರುವ ಗ್ರಾಮಾಂತರ ವಿಭಾಗದ ಬಸ್ ಡಿಪೋ ದಲ್ಲಿ ಬಸ್‌ಗಳ ಸ್ವಚ್ಛತಾ ಕಾರ್ಯ ನಡೆಯುತ್ತಿದೆ.

ಮೈಸೂರು,ಮಾ.23(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಶಕ್ತಿ ಯೋಜನೆ'ಯಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ದಿನೇ ದಿನೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಸಾರಿಗೆ ಸಂಸ್ಥೆಯ ಮೈಸೂರು ಗ್ರಾಮಾಂತರ ವಿಭಾಗದಲ್ಲಿ ಬಸ್‌ಗಳ ಸ್ವಚ್ಛತಾ ಅಭಿಯಾನ ಆರಂಭವಾಗಿದೆ.

ಮೈಸೂರಿನಿಂದ ಅಂತರರಾಜ್ಯ ಸೇರಿದಂತೆ ವಿವಿಧ ಜಿಲ್ಲೆ, ನಗರ, ಪಟ್ಟಣಕ್ಕೆ ಪ್ರತಿದಿನ ಪ್ರಯಾಣಿಸುವ ಗ್ರಾಮಾಂತರ ವಿಭಾಗದ ಬಸ್‌ಗಳನ್ನು ಸುಸ್ಥಿತಿಯಲ್ಲಿಡುವುದರೊಂದಿಗೆ ಸ್ವಚ್ಛಗೊಳಿಸಿ ಪ್ರಯಾಣಿಕರ ಸ್ನೇಹಿ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಸಾರಿಗೆ ಸಂಸ್ಥೆ ಎರಡು ತಿಂಗಳ ಸ್ವಚ್ಛತಾ ಅಭಿಯಾನ ಕೈಗೊಂಡಿದೆ.

ಮೈಸೂರು ಗ್ರಾಮಾಂತರ ವಿಭಾಗದಲ್ಲಿ 671 ಬಸ್‌ಗಳಿದ್ದು ಪ್ರತಿದಿನ 5 ಸಾವಿರಕ್ಕೂ ಹೆಚ್ಚು ಟ್ರಿಪ್‌ನಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲಿವೆ. ಈ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಗ್ರಾಮಾಂತರ ಸಾರಿಗೆ ಸಂಸ್ಥೆಯ ಬಸ್‌ಗಳ ಸ್ವಚ್ಛತಾ ಕಾರ್ಯ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾತನಾಡಿ, 2 ತಿಂಗಳ ವಿಶೇಷ ಸ್ವಚ್ಛತಾ ಅಭಿಯಾನ ನಡೆಸಲಾಗುತ್ತಿದೆ. ಸಾರಿಗೆ ಬಸ್‌ಗಳನ್ನು ಪ್ರತಿ ದಿನ ತಪಾಸಣೆ ಮಾಡಿಯೇ ಸಂಚಾರಕ್ಕೆ ಕಳುಹಿಸಲಾಗುತ್ತದೆ. ಆದರೆ, ಎರಡು ತಿಂಗಳ ವಿಶೇಷ ಅಭಿಯಾನದಲ್ಲಿ ಬಸ್‌ಗಳನ್ನು ಸ್ವಚ್ಛಗೊಳಿಸುವುದು, ಹರಿದಿರುವ ಆಸನಗಳನ್ನು ಬದಲಿಸುವುದು, ಒಡೆದ ಕಿಟಕಿ ಗಾಜುಗಳ ಬದಲಿಸುವುದು, ಡಾಕಿಂಗ್ ಮಾಡಿಸುವುದೂ ಸೇರಿದಂತೆ ಕೆಲವು ತಪಾಸಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಪ್ರಯಾಣಿಕ ಸ್ನೇಹಿ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಗ್ರಾಮಾಂತರ ವಿಭಾಗದ ಬಸ್‌ಗಳ ವಿಶೇಷ ಸ್ವಚ್ಛತಾ ಅಭಿಯಾನ ನಡೆಸಲಾಗುತ್ತಿದೆ. ಆದ್ಯತೆ ಮೇರೆಗೆ ಹಂತ ಹಂತವಾಗಿ ಎಲ್ಲಾ ಬಸ್‌ಗಳ ಸ್ವಚ್ಛತಾ ಕಾರ್ಯ ನಡೆಸಲಾಗುವುದು. ಅದಕ್ಕಾಗಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ತಿಳಿಸಿದರು.

## ನ್ಯಾ.ಎ.ಜೆ.ಸದಾಶಿವ ಆಯೋಗದ ಎಂಪರಿಕಲ್ ಡಾಟಾವಿರುವ ಹಿನ್ನೆಲೆ

# ರಾಜ್ಯದಲ್ಲಿ ಕೂಡಲೇ ಒಳಮೀಸಲಾತಿ ಜಾರಿಗೆ ಅವಕಾಶವಿದೆ

**ಮಾದಿಗ ಸಮುದಾಯದ ಕ್ರಾಂತಿಕಾರಿ ಸಮಾವೇಶದಲ್ಲಿ ಸಮುದಾಯದ ಮುಖಂಡ, ಮೈಸೂರು ಹಿರಿಯ ವಕೀಲ ಅರುಣ್‌ಕುಮಾರ್ ಪ್ರತಿಪಾದನೆ**






ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮಾದಿಗ ಸಮುದಾಯದ ಮುಖಂಡರಾದ ಎಸ್.ಅರುಣ್‌ಕುಮಾರ್, ಭಾಸ್ಕರ್ ಪ್ರಸಾದ್, ಪಾವಗಡ ಶ್ರೀರಾಮ್ ಒಳಮೀಸಲಾತಿ ಜಾರಿಗೊಳಿಸುವಂತೆ ಮನವಿ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ಅರುಣ್‌ಕುಮಾರ್ ಅವರು ಸಮಾವೇಶದಲ್ಲಿ ಮಾತನಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಮಾ.23(ಪಿಎಂ)–ನ್ಯಾ.ಎ.ಜೆ. ಸದಾಶಿವ ಆಯೋಗ ರಾಜ್ಯದಲ್ಲಿ ಎಂಪರಿಕಲ್ ಡಾಟಾವನ್ನು ವಿವರವಾಗಿ ಮಾಡಿದ್ದು, ಹೀಗಾಗಿ ಒಳಮೀಸಲಾತಿ ಕೂಡಲೇ ಜಾರಿಗೊಳಿಸಲು ಅವಕಾಶವಿದೆ ಎಂದು ಮಾದಿಗ ಸಮುದಾಯ ಮುಖಂಡರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಹೇಳಿದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಮಾಜದ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಕ್ರಾಂತಿಕಾರಿ ಸಮಾವೇಶದಲ್ಲಿ ಅವರು ಮಾತನಾಡಿದರು.

ಒಳಮೀಸಲಾತಿ ಎನ್ನುವುದು ರಾಜ್ಯದಲ್ಲಿ ಮಾದಿಗ ಸಮಾಜದ ವಿರುದ್ಧ ಎಣೆದಿರುವ ರಾಜಕೀಯ ಆಟದಂತೆ ಆಗಿ ಹೋಗಿದೆ. ಆ.1, 2024ರ ಹಿಂದೆ ಇದ್ದ ಸ್ಥಿತಿಯಲ್ಲಿ ಒಳಮೀಸಲಾತಿ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇರಲಿಲ್ಲ. ಆ.1, 2024ರ ನಂತರ ಸುಪ್ರೀಂಕೋರ್ಟ್, ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕೊಡಲು ಆರ್ಟಿಕಲ್ 341 ಉಲ್ಲಂಘನೆಯಲ್ಲ ಎಂದಿದೆ. ಹೀಗಾಗಿ ಒಳಮೀಸಲಾತಿ ಜಾರಿಗೆ ಸರ್ಕಾರಕ್ಕೆ ಅವಕಾಶವಿದೆ ಎಂದರು.

ಒಳಮೀಸಲಾತಿ ಕಲ್ಪಿಸಲು ಎಂಪರಿಕಲ್ ಡಾಟಾ ಇರಬೇಕೆಂದು ಕೋರ್ಟ್ ಹೇಳಿದೆ. ಇದು ಇರುವಂತಹ ರಾಜ್ಯಗಳಲ್ಲಿ ಕೂಡಲೇ ಒಳಮೀಸಲಾತಿ ಜಾರಿಗೊಳಿಸಲು ಅವಕಾಶವಿದೆ. ಎಲ್ಲಾ ರಾಜ್ಯಗಳಲ್ಲಿ ಎಂಪರಿಕಲ್ ಡಾಟಾ ಇಲ್ಲದ ಕಾರಣ ಒಳಮೀಸಲಾತಿ ಜಾರಿಗೆ ಸುಪ್ರೀಂಕೋರ್ಟ್ ಗಡುವು ನಿಗದಿಗೊಳಿಸಲ್ಲ. ಯಾವ್ಯಾವ ರಾಜ್ಯದಲ್ಲಿ ಎಂಪರಿಕಲ್ ಡಾಟಾ ಇದೆಯೋ ಅಲ್ಲಿ ಒಳಮೀಸಲಾತಿ ಜಾರಿ ಮಾಡಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಧರ್ಮಂಸಿಂಗ್ ಸರ್ಕಾರದ ಅವಧಿಯಲ್ಲಿ ಪ್ರಾರಂಭವಾದ ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ ಸಿದ್ಧಪಡಿಸುವ ಚಟುವಟಿಕೆಗಳು ಏಳು ವರ್ಷಗಳ ಬಳಿಕ ಪೂರ್ಣಗೊಂಡು, 2012ರಲ್ಲಿ ಅಂದಿನ ಬಿಜೆಪಿ ಸರ್ಕಾರ ಮುಖ್ಯಮಂತ್ರಿ ಸದಾನಂದಗೌಡರಿಗೆ ಸಲ್ಲಿಕೆಯಾಗಿದೆ ಎಂದು ವಿವರಿಸಿದರು.

ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಕೊನೆ ಕ್ಯಾಬಿನೇಟ್‌ನಲ್ಲಿ ಒಂದು ತೀರ್ಮಾನ ಮಾಡುತ್ತಾರೆ. ಏನೆಂದರೆ, ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15ರಿಂದ ಶೇ.17ರಷ್ಟು ಹೆಚ್ಚಳ ಮಾಡುತ್ತಾರೆ. ಬಳಿಕ ಕೇಂದ್ರಕ್ಕೆ ಶಿಫಾರಸ್ಸು ಮಾಡುತ್ತಾರೆ. ಕೇಂದ್ರಕ್ಕೆ ಶಿಫಾರಸ್ಸು ಮಾಡಲು ಕಾರಣ, ಅಂದು ಒಳಮೀಸಲಾತಿ ಜಾರಿಗೆ ಸರ್ಕಾರಕ್ಕೆ ಅಧಿಕಾರ ಇರಲಿಲ್ಲ ಎಂದರು.

2023ರಲ್ಲಿ ಕಾಂಗ್ರೆಸ್ ಪ್ರಣಾಳಿಕೆಯ ಪುಟ 15ರಲ್ಲಿ ಸದಾಶಿವ ಆಯೋಗ ವರದಿ ವಿಚಾರದಲ್ಲಿ ಯಾವುದೇ ಚಕಾರ ಇರಲಿಲ್ಲ. ನಾವು ಅಧಿಕಾರಕ್ಕೆ ಬಂದರೆ ವರದಿ ಸ್ವೀಕಾರ ಮಾಡುತ್ತೇವೆ ಎಂದು ಉಲ್ಲೇಖಿಸಲಾಗಿದೆ. ಅನಂತರ ಸುಪ್ರೀಂಕೋರ್ಟ್ ಆದೇಶವೂ ಬರುತ್ತದೆ. ಎಂಪರಿಕಲ್ ಡಾಟಾವನ್ನು ರಾಜ್ಯದಲ್ಲಿ ವಿವರವಾಗಿ ಸದಾಶಿವ ಆಯೋಗ ಮಾಡಿದೆ. ಒಳಮೀಸಲಾತಿ ವಿರೋಧಿಗಳು ಸಮುದಾಯವನ್ನು ಅಡ್ಡಕತ್ತರಿಯಲ್ಲಿ ಸಿಕ್ಕಿಸಿ ದಿಕ್ಕು ತಪ್ಪಿಸುತ್ತಾ ಬಂದಿದ್ದಾರೆ ಎಂದು ಕಿಡಿಕಾರಿದರು.

ಒಳಮೀಸಲಾತಿ ವಿರೋಧಿಗಳು ಎ.ಜೆ.ಸದಾಶಿವ ಆಯೋಗದ ವರದಿಯೇ ಮುಗಿದ ಅಧ್ಯಾಯವೆಂದು ತಪ್ಪು ಸಂದೇಶ ನೀಡಲು ಹೊರಟ್ಟಿದ್ದಾರೆ. ಒಳಮೀಸಲಾತಿ ಜಾರಿಗೆ ವಿಳಂಬ ಧೋರಣೆ ಅನುಸರಿಸುತ್ತಿರುವುದು ನೋಡಿದರೆ ಈ ಸರ್ಕಾರ ಮಾದಿಗರ ಪರವಿಲ್ಲ ಎನ್ನಿಸುತ್ತದೆ. ನಾವು ಯಾವುದೇ ರಾಜಕೀಯ ಪಕ್ಷದ ಪರವಾಗಿಲ್ಲ. ನೀವು ಜಾರಿ ಮಾಡಿ (ರಾಜ್ಯ ಕಾಂಗ್ರೆಸ್ ಸರ್ಕಾರ) ನಿಮ್ಮನ್ನು ಹೊತ್ತುಕೊಂಡು ಮೆರವಣಿಗೆ ಮಾಡುತ್ತೇವೆ. ಈ ಸಮಾಜಕ್ಕೆ ಸದಾಶಿವ ಆಯೋಗದಲ್ಲೂ ಶೇ.6, ಮಾಧುಸ್ವಾಮಿ ಸಮಿತಿಯಲ್ಲಿಯೂ ಶೇ.6ರಷ್ಟು ಮೀಸಲಾತಿ ಕೊಟ್ಟಿದ್ದೀರಾ. ಆದರೆ ಅನ್ಯ ಸಮಾಜಗಳಿಗೆ ಇದು ಹೆಚ್ಚಳವಾಗಿದೆ ಎಂದರು.

# ಹೇಮಾವತಿ ಕೆನಾಲ್ ವಿಚಾರದಲ್ಲಿ ಡಿಕೆಶಿ ಸಂಬಂಧಿ ಶಾಸಕ ಫೋನ್ ಮಾಡಿ ಧಮ್ಕಿ ಹಾಕಿದ್ದಾರೆ

**ಸಚಿವ ಕೆ.ಎನ್.ರಾಜಣ್ಣ ಪುತ್ರ ರಾಜೇಂದ್ರ ಆರೋಪ**



ಮಧುಗಿರಿ, ಮಾ.23–ಹೇಮಾವತಿ ಕೆನಾಲ್ ವಿಚಾರದಲ್ಲಿ ಡಿಕೆಶಿ ಸಂಬಂಧಿ ಕುಣಿಗಲ್ ಶಾಸಕ ರಂಗನಾಥ್ ನನಗೆ ಫೋನ್ ಮಾಡಿ ಧಮ್ಕಿ ಹಾಕಿದ್ದಾರೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಪುತ್ರ ಎಂಎಲ್‌ಸಿ ರಾಜೇಂದ್ರ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮಧುಗಿರಿಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕುಣಿಗಲ್ ಕಾಂಗ್ರೆಸ್ ಶಾಸಕ ಡಾ.ರಂಗನಾಥ್ ನನಗೆ ಫೋನ್ ಮಾಡಿ ಧಮ್ಕಿ ಹಾಕಿದ್ದಾರೆ. ಎರಡು ತಿಂಗಳಿಂದ ಕುಣಿಗಲ್ ಕ್ಷೇತ್ರದವರು ಲಿಂಕ್ ಕೆನಾಲ್ ವಿಚಾರವಾಗಿ ಫೋನ್ ಮಾಡುತ್ತಿದ್ದರು. ಲಿಂಕ್ ಕೆನಾಲ್ ಕಾಮಗಾರಿ ನಾನು ಹಾಗೂ ಸಚಿವರು ನಿಲ್ಲಿಸುತ್ತೇವೆ. ನೀವು ತಡೆಯುತ್ತೀರಾ? ನಮ್ಮ ತಾಲೂಕಿಗೆ ನೀರು ಬರುವುದನ್ನು ನೀವು ಅಪ್ಪ, ಮಗ ಯಾಕೆ ಅಡಚಣೆ ಮಾಡ್ತೀರಾ? ಎಂದು ಧಮ್ಕಿ ಹಾಕಿದ್ದಾರೆ ಎಂದರು.

ಡಿಕೆಶಿ ಕನಸಿನ ಕೂಸು ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಪರೋಕ್ಷವಾಗಿ ವಿರೋಧಿಸಿದ ಅವರು, ಲಿಂಕ್ ಕೆನಾಲ್‌ನ್ನು ನಾವು ತಡೆದಿಲ್ಲ. ಟೆಂಡರ್ ಆಗಿದೆ. ಕಾಮಗಾರಿ ನಡೆಯುತ್ತಿದೆ. ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್‌ನಿಂದ ಮಧುಗಿರಿ ಹಾಗೂ ಕೊರಟಗೆರೆ ತಾಲೂಕಿಗೆ ತೊಂದರೆ ಆಗುತ್ತದೆ. ನಮ್ಮ ಕುಡಿಯುವ ನೀರನ್ನು ನೀವು ದಾರಿ ಮಧ್ಯದಲ್ಲೇ ತೆಗೆದುಕೊಂಡರೆ ನಮ್ಮ ಪರಿಸ್ಥಿತಿ ಏನಾಗಬೇಕು? ಎಂದು ಕಿಡಿಕಾರಿದರು.

ಸಹಕಾರಿ ಸಚಿವರಿಂದ ಸಹಕಾರ ಸಿಗುತ್ತಿಲ್ಲ ಎಂದು ಸದನದಲ್ಲಿ ಆರೋಪಿಸಿದ್ದ ಕುಣಿಗಲ್ ಶಾಸಕ ರಂಗನಾಥ್‌ಗೆ ಪ್ರತಿಕ್ರಿಯಿಸಿದ ಅವರು, ನಿಮ್ಮ ಸಂಬಂಧಿ ಪ್ರಭಾವಿ ಸಚಿವರಿದ್ದಾರೆ ಎಂದು ಹೇಳಿ ನೀವು ನೀರು ತೆಗೆದುಕೊಂಡು ಹೋಗಬಹುದಾ? ಎಕ್ಸ್‌ಪ್ರೆಸ್ ಕೆನಾಲ್ ವಿಚಾರದಲ್ಲಿ ಜಿಲ್ಲೆಗೆ ಆಗುವ ಅನ್ಯಾಯವನ್ನು ರಾಜಣ್ಣ ಅವರು ಕ್ಯಾಬಿನೆಟ್‌ನಲ್ಲಿ ಹೇಳಿದ್ದಾರೆ. ಅದನ್ನೇ ನೆಪ ಮಾಡಿಕೊಂಡು ನಮ್ಮ ಮೇಲೆ ಮಾತನಾಡೋದು ಸರಿನಾ? ಎಂದು ಟಾಂಗ್ ಕೊಟ್ಟರು.

**ಡಿಕೆಶಿ ಪ್ರತಿಕ್ರಿಯೆ:** ಹೇಮಾವತಿ ಕೆನಾಲ್ ವಿಚಾರದಲ್ಲಿ ರಾಜೇಂದ್ರ ಏನು ಬೇಕಾದರು ಮಾತನಾಡಲಿ. ಕಳೆದ 20–30 ವರ್ಷದಿಂದ ವೈ.ಕೆ.ರಾಮಯ್ಯ ಕಾಲದಿಂದ ಎಲ್ಲಾ ನಡೆಯುತ್ತಿದೆ. ಕುಮಾರಸ್ವಾಮಿ ಸರ್ಕಾರದಲ್ಲೇ ಪಾಸ್ ಮಾಡಿದ್ದೆವು. ರೈತರಿಗೆ ನೀರು ಸಿಗಬೇಕಾದ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ ಎಂದಿದ್ದಾರೆ.

# ಹವ್ಯಾಸಿ ತಂಡಗಳ ನಾಟಕ ಪ್ರದರ್ಶನದಲ್ಲಿ ಕನಿಷ್ಠ ಇಬ್ಬರು ವೃತ್ತಿಪರರಿಗೆ ವೇತನಸಹಿತ ಅವಕಾಶ ಅಗತ್ಯ

**ವಿಶ್ವ ರಂಗ ಸಂಭ್ರಮ ನಾಟಕೋತ್ಸವಕ್ಕೆ ಚಾಲನೆ ನೀಡಿ, ರಂಗ ನಿರ್ದೇಶಕಿ ಕೆ.ಆರ್.ಸುಮತಿ ಅಭಿಮತ**



ಮೈಸೂರು ರಂಗಾಯಣದ ಭೂಮಿಗೀತದಲ್ಲಿ ವಿಶ್ವ ರಂಗ ಸಂಭ್ರಮ ನಾಟಕೋತ್ಸವ ಉದ್ಘಾಟಿಸಲಾಯಿತು.

> "ನಾವು ಹವ್ಯಾಸಿಗರು ತಾಯಿ ಹೃದಯ, ತಂದೆ ಮಮತೆಯೊಂದಿಗೆ ವೃತ್ತಿ ರಂಗಭೂಮಿ ಕಲಾವಿದರ ಜೊತೆಗೆ ನಿಲ್ಲಬೇಕಿದೆ. ಹವ್ಯಾಸಿ ರಂಗ ತಂಡದ ಕಲಾವಿದರು ಸರ್ಕಾರದ ಯಾವುದೇ ಅನುದಾನಕ್ಕೆ ಆಸೆಪಡದೇ ತಮ್ಮದೇ ಸಂಪನ್ಮೂಲ ಕ್ರೋಢೀಕರಿಸಿಕೊಂಡು ನಾಟಕ ಪ್ರಸ್ತುತಪಡಿಸುವ ಅವಕಾಶ ಹೊಂದಿರುತ್ತಾರೆ. ಹಾಗಾಗಿ ಇವರು ಸಮಾಜದ ಓರೆಕೋರೆ, ಆಡಳಿತಶಾಹಿಯ ದುರ್ನಡನೆ ತಿದ್ದುವಂತಹ ನಾಟಕ ಪ್ರದರ್ಶನಕ್ಕೆ ಸ್ವತಂತ್ರರು. ಈ ರೀತಿಯಲ್ಲಿ ನಾಟಕಗಳು ಹೆಚ್ಚು ಪ್ರದರ್ಶನಗೊಳ್ಳಬೇಕು. ಆ ಮೂಲಕ ಸಂವಿಧಾನ ದೇಶದ ಪ್ರಜೆಗಳಿಗೆ ಕಲ್ಪಿಸಿರುವ ಹಕ್ಕು-ಕರ್ತವ್ಯಗಳನ್ನು ಜನತೆಗೆ ತಿಳಿಸಬೇಕು.
> –ಕೆ.ಆರ್.ಸುಮತಿ

ಮೈಸೂರು,ಮಾ.23(ಪಿಎಂ)– ಹವ್ಯಾಸಿ ರಂಗಭೂಮಿಯವರು ವೃತ್ತಿರಂಗಭೂಮಿ ಕಲಾವಿದರಿಗೆ ಬೆಂಬಲವಾಗಿ ನಿಲ್ಲಬೇಕು. ಜೊತೆಗೆ ಸರ್ಕಾರದ ನೆರವಿನಿಂದ ಪ್ರದರ್ಶನಗೊಳ್ಳುವ ಹವ್ಯಾಸಿ ರಂಗತಂಡದ ನಾಟಕಗಳಲ್ಲಿ ಕನಿಷ್ಠ ಇಬ್ಬರು ವೃತ್ತಿ ರಂಗಭೂಮಿ ಕಲಾವಿದರಿಗೆ ವೇತನಸಹಿತ ಅವಕಾಶ ಕಲ್ಪಿಸುವ ವ್ಯವಸ್ಥೆ ಜಾರಿಗೊಳ್ಳುವುದು ಅಗತ್ಯ ಎಂದು ರಂಗ ನಿರ್ದೇಶಕಿ ಕೆ.ಆರ್.ಸುಮತಿ ಅಭಿಪ್ರಾಯಪಟ್ಟರು.

ರಂಗಾಯಣ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಜಂಟಿ ಆಶ್ರಯದಲ್ಲಿ 'ವಿಶ್ವ ರಂಗ ಸಂಭ್ರಮ 2025' ಶೀರ್ಷಿಕೆಯಡಿ ರಂಗಾಯಣದಲ್ಲಿ ಮಾ.27ರವರೆಗೆ ಹಮ್ಮಿಕೊಂಡಿರುವ ನಾಟಕೋತ್ಸವಕ್ಕೆ ರಂಗಾಯಣದ ಭೂಮಿಗೀತದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಅಮೆರಿಕದಲ್ಲಿ ಹವ್ಯಾಸಿ ತಂಡ ನಾಟಕ ಪ್ರದರ್ಶಿಸಿದರೆ ಕನಿಷ್ಠ ಇಬ್ಬರು ವೃತ್ತಿರಂಗಭೂಮಿ ಕಲಾವಿದರಿಗೆ ವೇತನಸಹಿತ ಅವಕಾಶ ಕಲ್ಪಿಸಬೇಕೆಂಬ ನಿಯಮವಿದೆ ಎಂಬುದನ್ನು ಲೇಖನವೊಂದರಲ್ಲಿ ಓದಿದೆ. ಈ ರೀತಿಯ ವ್ಯವಸ್ಥೆ ನಮ್ಮಲ್ಲಿಯೂ ಬಂದರೆ ವೃತ್ತಿರಂಗಭೂಮಿ ಕಲಾವಿದರು ಬದುಕಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಕಂಪನಿ ನಾಟಕಗಳನ್ನು ಟಿ.ಪಿ. ಕೈಲಾಸಂ ಕಟುವಾಗಿ ಟೀಕಿಸುತ್ತಿದ್ದರು. ಅಲ್ಲಿಯ ವೈಭವ, ನಾಟಕದ ಪ್ರಸ್ತುತಿ ವಿಧಾನ ಬದುಕಿಗೆ ತುಂಬ ದೂರ ಎಂಬುದು ಅವರ ಟೀಕೆಗೆ ಕಾರಣವಾಗಿತ್ತು. ಹಾಗಾಗಿ ಅವರು 'ಟೊಳ್ಳುಗಟ್ಟಿ' ನಾಟಕ ರಚಿಸಿ ಪ್ರಸ್ತುತಿಪಡಿಸುತ್ತಾರೆ. ಈ ನಾಟಕವನ್ನು ಕನ್ನಡ ಹವ್ಯಾಸಿ ರಂಗಭೂಮಿಯ ಉದಯವೆಂದು ಗುರುತಿಸಲಾಗಿದೆ. ರಂಗ ಭೂಮಿಯು ಮನುಷ್ಯನ ದುಃಖ ದುಮ್ಮಾನ, ಸುಖ ಸಂತಸ ಅನಾವರಣಗೊಳಿಸಬೇಕೆಂಬ ನಿಟ್ಟಿನಲ್ಲಿ ಹವ್ಯಾಸಿ ರಂಗ ಭೂಮಿಯು ವಾಸ್ತವ ನೆಲೆಗಟ್ಟಿನಲ್ಲಿ ಬೆಳೆದು ಬಂದಿದೆ ಎಂದು ಹೇಳಿದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಉದ್ಯಮಗಳಲ್ಲಿ ಕಾರ್ಮಿಕರ ರಂಗತಂಡಗಳು ರಚನೆಯಾಗಬೇಕು. ಇದು ಆರ್ಥಿಕತೆಯನ್ನು ರಂಗಭೂಮಿಗೆ ತಂಡ ಕೊಡಬಲ್ಲದು. ಇತ್ತೀಚೆಗೆ ಹವ್ಯಾಸಿಗಳೇ ಹೆಚ್ಚು ವೃತ್ತಿಪರರಂತೆ ನಾಟಕಗಳನ್ನು ಮಾಡುತ್ತಿದ್ದಾರೆ. ಒಂದು ರೀತಿಯಲ್ಲಿ 100ಕ್ಕೆ 95 ಭಾಗ ಎಲ್ಲರೂ ಹವ್ಯಾಸಿಗಳೇ. ನಾನು ರಂಗಾಯಣದಲ್ಲಿ ಇರುವವರೆಗೆ ಪರಿಪೂರ್ಣವಾಗಿ ರಂಗಭೂಮಿಯಲ್ಲಿ ಇರುತ್ತೇನೆ. ಆ ನಂತರವೂ ತೊಡಗಿಸಿಕೊಳ್ಳಬೇಕೆಂಬ ಆಶಯ ಇದ್ದರೂ ಅದು ಕಷ್ಟಸಾಧ್ಯ ಎಂದರು. ಬಳಿಕ 'ಗುಡಿಯ ನೋಡಿರಣ್ಣ' ನಾಟಕ ಪ್ರದರ್ಶನಗೊಂಡಿತು. ಮಾ.26ರವರೆಗೆ ಪ್ರತಿದಿನ ಸಂಜೆ 6.30ಕ್ಕೆ ಭೂಮಿಗೀತದಲ್ಲಿ ನಾಟಕಗಳು ಪ್ರದರ್ಶನ ನಡೆಯಲಿವೆ (ಟಿಕೆಟ್ ದರ–100 ರೂ., ಸೀಜನ್ ಟಿಕೆಟ್ ದರ 300 ರೂ.). ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ಹೆಚ್.ತಲಕಾಡು, ಕಾರ್ಯದರ್ಶಿ ಹರಿದತ್ತ ಮತ್ತಿತರರು ಹಾಜರಿದ್ದರು.

# ಏ.12ಕ್ಕೆ ಆರೋಗ್ಯ, ಸ್ವಾಸ್ಥ್ಯ ಕಾರ್ಯಕ್ರಮ

ಮೈಸೂರು, ಮಾ.23(ಜಿಎ)–ಸಾಮಾಜಿಕ ಕಾರ್ಯಗಳಿಗೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ಮೈಸೂರಿನ ಮಹಾರಾಜ ಶಿಕ್ಷಣ ಸಂಸ್ಥೆ ಮತ್ತು ಡ್ರೀಮ್ ಇಂಕ್ ಸಂಸ್ಥೆಗಳ ಸಹಯೋಗದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪಶ್ಚಿಮ ಏ.12ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಲಯನ್ ಡಾ.ಹೆಚ್.ಕೆ.ಚೇತನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 6ಗಂಟೆಗೆ ಆರೋಗ್ಯಕ್ಕಾಗಿ ನಡಿಗೆ, ಆರೋಗ್ಯಕ್ಕಾಗಿ ಓಟ ಹಮ್ಮಿಕೊಳ್ಳಲಾಗಿದ್ದು, ಮಹಾರಾಜ ಕಾಲೇಜು ಮೈದಾನದಿಂದ ಆರಂಭವಾಗುವ ವಾಕಥಾನ್ 5 ಕಿ.ಮೀ ಕ್ರಮಿಸಿ ಮಹಾರಾಜ ಕಾಲೇಜು ಮೈದಾನದಲ್ಲೇ ಅಂತ್ಯಗೊಳ್ಳಲಿದೆ. ಬಳಿಕ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 12.30ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಸಂಜೆ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಸಂಜೆಯ ಕಾರ್ಯಕ್ರಮಕ್ಕೆ ಪಾಸ್ ಇದ್ದವರಿಗೆ ಮಾತ್ರ ಪ್ರವೇಶ ಇರಲಿದೆ ಎಂದರು. ಈ ವಾರ್ಷಿಕ ನಿಧಿ ಸಂಗ್ರಹಣೆಯ ಮೂಲಕ ಮೂತ್ರಪಿಂಡ ವೈಫಲ್ಯವಿರುವ ಬಡರೋಗಿಗಳ ಚಿಕಿತ್ಸೆಗೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ, ಹುತಾತ್ಮ ಯೋಧರ ಮಕ್ಕಳ ವಿದ್ಯಾರ್ಥಿವೇತನವನ್ನು ಭರಿಸಲಾಗುವುದು. ಸದ್ಯ ಕ್ಲಬ್‌ನಿಂದ ಪ್ರತಿ ವಾರ 21 ಜನರಿಗೆ ಉಚಿತ ಡಯಾಲಿಸಿಸ್‌ಗೆ ಹಣಕಾಸಿನ ನೆರವು ನೀಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವೆಲ್ನೆಸ್ ಕಾರ್ಯಕ್ರಮದ ಮುಖ್ಯಸ್ಥ ಡಾ.ಮಹೇಶ್‌ರಾವ್, ಡ್ರೀಮ್ ಇಂಕ್ ಸಂಸ್ಥೆಯ ನಾರಾಯಣಸ್ವಾಮಿ ಇದ್ದರು.

# ಕೋಚನಹಳ್ಳಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗೆ ಬೆಂಕಿ


**ಹಲವು ಮನೆಗಳ ಎಲೆಕ್ಟ್ರಾನಿಕ್ ವಸ್ತುಗಳು ಹಾನಿ**



ಮೈಸೂರು, ಮಾ.23(ಆರ್‌ಕೆ)– ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನಲ್ಲಿ ಬೆಂಕಿ ಹೊತ್ತಿಕೊಂಡ ಪರಿಣಾಮ ಗ್ರಾಮದ ಹಲವು ಮನೆಗಳ ಎಲೆಕ್ಟ್ರಾನಿಕ್ಸ್ ವಸ್ತುಗಳು ಹಾನಿಗೊಂಡಿರುವ ಘಟನೆ ಕೋಚನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ. ಭಾನುವಾರ ಬೆಳಗ್ಗೆ ಸುಮಾರು 11 ಗಂಟೆ ವೇಳೆ ಕೋಚನಹಳ್ಳಿ ಗ್ರಾಮದ ಟ್ರಾನ್ಸ್‌ಫಾರ್ಮರ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡು ಭಾರೀ ಸದ್ದು ಕೇಳಿಸಿತು. ಪರಿಣಾಮ ಗ್ರಾಮದ 10ಕ್ಕೂ ಹೆಚ್ಚು ಮನೆಗಳಲ್ಲಿ ಸರ್ಕ್ಯೂಟ್‌ನಿಂದಾಗಿ ಟಿವಿ, ಫ್ರಿಡ್ಜ್, ವಾಷಿಂಗ್ ಮೆಷಿನ್ ಸೇರಿದಂತೆ ಎಲೆಕ್ಟ್ರಾನಿಕ್ ವಸ್ತುಗಳು ಹಾನಿಯಾಗಿ ಕಾರ್ಯ ಸ್ಥಗಿತಗೊಂಡಿವೆ ಎಂದು ಗ್ರಾಮಸ್ಥರು ತಿಳಿಸಿದ್ದರೆ.

ವಿಷಯ ತಿಳಿಯುತ್ತಿದ್ದಂತೆಯೇ ನಂಜನಗೂಡು ಅಗ್ನಿಶಾಮಕ ಠಾಣೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರು. ಚೆಸ್ಕಾಂ ಅಧಿಕಾರಿಗಳು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು.

# ನಾಳೆ ಕೈಲಾಸ–ಮಾನಸ ಸರೋವರ ದರ್ಶನ ಕುರಿತು ಶ್ರವ್ಯ–ದೃಶ್ಯ ಪ್ರದರ್ಶನ



ಮೈಸೂರು,ಮಾ.23–ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಜಂಟಿ ಆಶ್ರಯದಲ್ಲಿ 'ಕೈಲಾಸ ಮತ್ತು ಮಾನಸ ಸರೋವರ ದರ್ಶನ ; ಶ್ರವ್ಯ ದೃಶ್ಯ ಪ್ರದರ್ಶನ ಕಾರ್ಯಕ್ರಮ'ವನ್ನು ಮಾ.25ರಂದು ಸಂಜೆ 6ಕ್ಕೆ ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅವರ ಪರಿಕಲ್ಪನೆ ಮತ್ತು ಪ್ರಸ್ತುತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ವಿ.ನಾಗರಾಜರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಸ್.ರಾಮಪ್ರಸಾದ್, ಪ್ರಧಾನ ಕಾರ್ಯದರ್ಶಿ ಕಿರಣ್ ಸಿಡ್ಲೇಹಳ್ಳಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

# ಪಿಎಚ್.ಡಿ. ಪದವಿ



**ಮೈಸೂರು:** ಪ್ರಾಧ್ಯಾಪಕ ಸೋಮಣ್ಣ ಅವರ ಮಾರ್ಗದರ್ಶನದಲ್ಲಿ ಜಿ.ಎಂ.ಸತ್ಯಶೀಲ ಸಂಶೋಧನೆ ನಡೆಸಿ ಸಾದರಪಡಿಸಿದ 'ಚಾಮರಾಜನಗರ ಜಿಲ್ಲೆಯ ಐತಿಹ್ಯಗಳು' ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿ ನೀಡಿದೆ.

# ದೇಶ - ವಿದೇಶ

## ದುಷ್ಕರ್ಮಿಯಿಂದ ಗುಂಡಿನ ದಾಳಿ; ಗುಜರಾತ್ ಮೂಲದ ತಂದೆ–ಮಗಳು ಸಾವು



**ಅಮೆರಿಕಾ:** ಅಮೆರಿಕಾದ ವರ್ಜೀನಿಯಾದಲ್ಲಿ ಅಂಗಡಿಯೊಂದರೊಳಗೆ ದುಷ್ಕರ್ಮಿಯೊಬ್ಬ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾನೆ. ಇದರಿಂದ ಗುಜರಾತ್ ಮೂಲದ ತಂದೆ–ಮಗಳು ಸಾವನ್ನಪ್ಪಿದ್ದಾರೆ. ಮೃತರನ್ನು ಪ್ರದೀಪ್‌ಭಾಯ್ ಪಟೇಲ್ (56) ಮತ್ತು ಅವರ 24 ವರ್ಷದ ಮಗಳು ಉರ್ವಿ ಪಟೇಲ್ ಎಂದು ಗುರುತಿಸಲಾಗಿದೆ. ಇವರು ಗುಜರಾತ್‌ನ ಮೆಹ್ಸಾನಾದ ಕನೋಡಾ ಗ್ರಾಮದವರಾಗಿದ್ದು, ಪಾಟಿದಾರ್ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಗುಂಡೇಟಿನಿಂದ ಪ್ರದೀಪ್ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಅವರ ಮಗಳು ಚಿಕಿತ್ಸೆಯ ಸಮಯದಲ್ಲಿ ಕೊನೆಯುಸಿರೆಳೆದಿದ್ದಾಳೆ. ಅಮೆರಿಕ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಮಾ.20ರಂದು ಬೆಳಗ್ಗೆ 5.30ಕ್ಕೆ ಕೊಲೆ ಆರೋಪಿ ಮದ್ಯ ಖರೀದಿಸಲು ಅಂಗಡಿಗೆ ಬಂದಿದ್ದ. ಇದಾದ ನಂತರ ಅಂಗಡಿಯನ್ನು ರಾತ್ರಿ ಏಕೆ ತೆರೆಯಲಿಲ್ಲ ಎಂದು ತಂದೆಯೊಂದಿಗೆ ಜಗಳವಾಡಿ ತಂದೆ ಮತ್ತು ಮಗಳು ಇಬ್ಬರ ಮೇಲೂ ಗುಂಡು ಹಾರಿಸಿದ್ದಾನೆ. ಪ್ರದೀಪ್ ಪಟೇಲ್, ಅವರ ಪತ್ನಿ ಹಂಸಬೆನ್ ಮತ್ತು ಮಗಳು ಉರ್ವಿ 6 ವರ್ಷಗಳ ಹಿಂದೆ ಅಮೆರಿಕಕ್ಕೆ ಹೋಗಿದ್ದರು. ಇವರು ತಮ್ಮ ಸಂಬಂಧಿಕರ ಒಡೆತನದ ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ ಕೆಲಸ ಮಾಡುತ್ತಿದ್ದರು.

## ಕೋಳಿ ಕೊಂದಿದ್ದಕ್ಕೆ ಇಬ್ಬರ ವಿರುದ್ಧ ಕೇಸ್



**ಬಲ್ಲಿಯಾ:** ಕೋಳಿ ಕೊಂದಿದ್ದಕ್ಕೆ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿರುವ ಘಟನೆ ಉತ್ತರ ಪ್ರದೇಶದಲ್ಲಿ ವರದಿಯಾಗಿದೆ. ಭೂ ವಿವಾದದ ಹಿನ್ನೆಲೆಯಲ್ಲಿ ಕೋಳಿಯನ್ನು ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆದು ಕೊಂದು, ಆ ಕೋಳಿ ಮಾಲೀಕರು ಪ್ರತಿಭಟಿಸಿದಾಗ ಅವರನ್ನು ಥಳಿಸಿದ್ದು, ಈ ಸಂಬಂಧ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾ.21ರಂದು ಪಕ್ಡಿ ಪೊಲೀಸ್ ಠಾಣೆ ವ್ಯಾಪ್ತಿಯ ಗರ್ಹ್ಮಲ್‌ಪುರ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಕೋಳಿಯ ಮಾಲೀಕರಾದ ಆರತಿ ದೇವಿ ಅವರು ಕೋಳಿ ಕೊಂದ ಬಗ್ಗೆ ಆರೋಪಿಗಳಿಂದ ವಿವರಣೆ ಕೇಳಿದಾಗ, ಅವರು ಆಕೆಯನ್ನು ಸಹ ಥಳಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆರತಿ ದೇವಿ ಅವರ ದೂರಿನ ಆಧಾರದ ಮೇಲೆ, ಸೂರಜ್‌ರಾಮ್ ಮತ್ತು ಶೀಲಾ ದೇವಿ ವಿರುದ್ಧ ಬಿಎನ್‌ಎಸ್ ಸೆಕ್ಷನ್ 325 (ಪ್ರಾಣಿಯನ್ನು ಕೊಲ್ಲುವುದು), 115–2 (ಉದ್ದೇಶಪೂರ್ವಕವಾಗಿ ನೋವುಂಟು ಮಾಡುವುದು), 352 (ಶಾಂತಿ ಕದಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಅವಮಾನಿಸುವುದು) ಮತ್ತು 351–3 (ಯಾವುದೇ ವ್ಯಕ್ತಿಗೆ ಕೊಲ್ಲುವ ಅಥವಾ ಗಂಭೀರ ಹಾನಿ ಉಂಟು ಮಾಡುವ ಬೆದರಿಕೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## 11 ವರ್ಷದ ಮಗನ ಕತ್ತು ಸೀಳಿ ಕೊಲೆ ಮಾಡಿದ ಭಾರತ ಮೂಲದ ಮಹಿಳೆ



**ನ್ಯೂಯಾರ್ಕ್:** ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಭಾರತ ಮೂಲದ ಮಹಿಳೆಯೊಬ್ಬರು ತಮ್ಮ 11 ವರ್ಷದ ಮಗನನ್ನು ನಿರ್ಧಯವಾಗಿ ಕೊಲೆ ಮಾಡಿದ ಭೀಕರ ಘಟನೆ ಬೆಳಕಿಗೆ ಬಂದಿದೆ. 48 ವರ್ಷದ ಸರಿತಾ ರಾಮರಾಜು ಎಂಬವರು ತಮ್ಮ ಮಗನನ್ನು ಡಿಸ್ನಿಲ್ಯಾಂಡ್‌ಗೆ 3 ದಿನಗಳ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು. ಆದರೆ, ಅಲ್ಲಿಯೇ ಹೋಟೆಲ್‌ನಲ್ಲಿ ಮಗನ ಕತ್ತುಸೀಳಿ ಕೊಲೆ ಮಾಡಿರುವುದು ಪೊಲೀಸರಿಗೆ ತಿಳಿದು ಬಂದಿದೆ. ಮಗನನ್ನು ಕೊಂದ ನಂತರ ಆಕೆಯೂ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾಗಿ ಪೊಲೀಸರು ತಿಳಿಸಿದ್ದಾರೆ. ತಕ್ಷಣವೇ ಆಸ್ಪತ್ರೆಗೆ ಸೇರಿಸಲಾಯಿತಾದರೂ, ಮಗನನ್ನು ರಕ್ಷಿಸಲು ಸಾಧ್ಯವಾಗಿಲ್ಲ. ಸರಿತಾ ರಾಮರಾಜು ಅವರು 2018ರಲ್ಲಿ ತಮ್ಮ ಪತಿಯೊಂದಿಗೆ ವಿಚ್ಛೇದನ ಪಡೆದಿದ್ದರು. ಮಗು ತಂದೆಯ ಕಸ್ಟಡಿಯಲ್ಲಿ ಇತ್ತು. ಕೆಲ ದಿನಗಳ ಹಿಂದೆ ಮಗನನ್ನು ಭೇಟಿಯಾಗಿ ಕೆಲವು ದಿನಗಳ ಪ್ರವಾಸಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿ ಮಗನೊಂದಿಗೆ ಹೊರಟಿದ್ದರು. ಮಗು ಕೂಡ ತಾಯಿ ಜತೆ ಖುಷಿಯಿಂದ ಪ್ರವಾಸಕ್ಕೆ ತೆರಳಿದ್ದ. ಸ್ಯಾಂಟಾ ಅನಾ ಎಂಬ ಸ್ಥಳದ ಹೋಟೆಲ್‌ನಲ್ಲಿ ತಂಗಿದ್ದರು. ಮಾ.19ರಂದು ಹಿಂದಿರುಗಬೇಕಾಗಿತ್ತು.

## ಜಮ್ಮುವಿನ ದೋಡಾ ಜಿಲ್ಲೆಯಲ್ಲಿ ಉಗ್ರರ ಅಡಗುದಾಣ ಪತ್ತೆ; ಶಸ್ತ್ರಾಸ್ತ್ರ ವಶ



**ಜಮ್ಮು:** ಜಮ್ಮು–ಕಾಶ್ಮೀರದ ದೋಡಾ ಜಿಲ್ಲೆಯ ದೂರದ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರ ಅಡಗುದಾಣ ಪತ್ತೆಯಾಗಿದ್ದು, ಒಂದು ಪಿಸ್ತೂಲ್ ಮತ್ತು ಕೆಲವು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಶನಿವಾರ ಭದೇರ್ವಾದ ಭಲ್ರಾ ಅರಣ್ಯ ಪ್ರದೇಶದಲ್ಲಿ ಸ್ಥಳೀಯ ಪೊಲೀಸರು ಮತ್ತು ಸೇನೆಯ ವಿಶೇಷ ಕಾರ್ಯಾಚರಣೆ ಗುಂಪು(ಎಸ್‌ಒಜಿ) ನಡೆಸಿದ ಜಂಟಿ ಶೋಧ ಕಾರ್ಯಾಚರಣೆಯ ಸಮಯದಲ್ಲಿ ಅಡಗುದಾಣ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅನುಮಾನಾಸ್ಪದ ಚಲನವಲನಗಳ ವರದಿಗಳ ನಂತರ ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಲಾಗಿದೆ. ಈ ಸಮಯದಲ್ಲಿ ಯಾರನ್ನೂ ಬಂಧಿಸಲಾಗಿಲ್ಲ ಎಂದು ಅವರು ಹೇಳಿದ್ದಾರೆ. ಈ ಮಧ್ಯೆ, ಪಕ್ಕದ ಕಿಶ್ತ್‌ವಾರ್ ಜಿಲ್ಲೆಯ ಗುರಿನಾಲ್, ಥಾಥ್ರಿ ಮತ್ತು ಚತ್ರೂ ಅರಣ್ಯದಲ್ಲಿ ಪೊಲೀಸರು, ಸೇನೆ ಮತ್ತು ಸಿಆರ್‌ಪಿಎಫ್ ಜಂಟಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಎತ್ತರದ ಪ್ರದೇಶಗಳಲ್ಲಿ ಶಂಕಿತ ಭಯೋತ್ಪಾದಕರು ಇರುವ ಬಗ್ಗೆ ಕೆಲವು ಗ್ರಾಮಸ್ಥರು ಮಾಹಿತಿ ಹಂಚಿಕೊಂಡ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಎಂದು ಅವರು ಹೇಳಿದ್ದಾರೆ. ಆದರೂ, ಶಂಕಿತ ವ್ಯಕ್ತಿಗಳೊಂದಿಗೆ ಇಲ್ಲಿಯವರೆಗೆ ಯಾವುದೇ ಸಂಪರ್ಕ ಸ್ಥಾಪಿಸಲಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಇಸ್ರೇಲಿ ದಾಳಿಯಲ್ಲಿ ಹಮಾಸ್‌ನ ಹಿರಿಯ ರಾಜಕೀಯ ನಾಯಕ ಸೇರಿ 19 ಪ್ಯಾಲೆಸ್ತೀನಿಯನ್ನರ ಸಾವು



**ಡಿಯರ್ ಅಲ್–ಬಲಹ್:** ದಕ್ಷಿಣ ಗಾಜಾ ಪಟ್ಟಿಯಾದ್ಯಂತ ಭಾನುವಾರ ರಾತ್ರಿ ಇಸ್ರೇಲಿ ಪಡೆಗಳು ನಡೆಸಿದ ದಾಳಿಯಲ್ಲಿ ಹಿರಿಯ ಹಮಾಸ್ ರಾಜಕೀಯ ನಾಯಕ ಸೇರಿದಂತೆ ಕನಿಷ್ಠ 19 ಪ್ಯಾಲೆಸ್ತೀನಿಯನ್ನರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹಮಾಸ್ ಜೊತೆ ಮೈತ್ರಿ ಮಾಡಿಕೊಂಡಿರುವ ಯೆಮೆನ್‌ನಲ್ಲಿ ಇರಾನ್ ಬೆಂಬಲಿತ ಬಂಡುಕೋರರು ಇಸ್ರೇಲ್ ಮೇಲೆ ಮತ್ತೊಂದು ಕ್ಷಿಪಣಿಯನ್ನು ಉಡಾಯಿಸಿದ್ದಾರೆ. ಗಾಜಾ ನಗರದಲ್ಲಿ ನಿವಾಸಿಗಳನ್ನು ಸ್ಥಳಾಂತರಿಸುವ ಆದೇಶ ನೀಡಲಾಗಿದೆ. ಕಟ್ಟಡವನ್ನು ಗುರಿಯಾಗಿಸಿ ಕೊಂಡು ಇಸ್ರೇಲಿ ಸೈನ್ಯದ ದಾಳಿ ನಡೆದಿದೆ. ದಕ್ಷಿಣ ಗಾಜಾದಲ್ಲಿರುವ ಯುರೋಪಿಯನ್ ಮತ್ತು ಕುವೈತ್ ಆಸ್ಪತ್ರೆಗಳಲ್ಲಿ 17 ಶವಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿವೆ. ಸತ್ತವರಲ್ಲಿ ಹಲವಾರು ಮಹಿಳೆಯರು ಮತ್ತು ಮಕ್ಕಳೂ ಸೇರಿದ್ದಾರೆ.

ಹಮಾಸ್ ತನ್ನ ರಾಜಕೀಯ ಬ್ಯೂರೋ ಮತ್ತು ಪ್ಯಾಲೆಸ್ಟೀನಿಯನ್ ಸಂಸತ್ತಿನ ಸದಸ್ಯ ಸಲಾಹ್ ಬರ್ದಾವಿಲ್, ದಕ್ಷಿಣ ನಗರ ಖಾನ್ ಯೂನಿಸ್ ಬಳಿ ನಡೆದ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಮತ್ತು ಅವರ ಪತ್ನಿಯೂ ಸಾವನ್ನಪ್ಪಿದ್ದಾರೆ ಎಂದು ಹೇಳಿದೆ.

# ಬ್ರಿಟಿಷ್ ಯುಗದ ದಾಖಲೆ ಮಾನದಂಡ ಅನುಸರಿಸಲು ನಾಚಪ್ಪ ಆಗ್ರಹ



ಕೊಡವರನ್ನು ಜಾತಿ ಎಂದು ತಪ್ಪಾಗಿ ವರ್ಗೀಕರಿಸಿದ ಜನಗಣತಿ ದಾಖಲೆಗಳನ್ನು ರದ್ದುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಎನ್.ಯು. ನಾಚಪ್ಪ ಆಗ್ರಹಿಸಿದರು.

ಮಡಿಕೇರಿ,ಮಾ.23– ಕೊಡವರನ್ನು ಜಾತಿ ವ್ಯವಸ್ಥೆಯಿಂದ ಪ್ರತ್ಯೇಕವಾದ ವಿಶಿಷ್ಟ ಜನಾಂಗೀಯ ಮೂಲ ವಂಶಸ್ಥ ಗುಂಪು ಎಂದು ಬ್ರಿಟಿಷ್ ಯುಗದ ಜನಗಣತಿ ದಾಖಲೆಗಳು (1871–1931) ನಿಖರವಾಗಿ ಗುರುತಿಸಿವೆ. ಕೊಡವರ ವಿಚಾರದಲ್ಲಿ ಇದೇ ಮಾನದಂಡವನ್ನು ಈಗಲೂ ಅನುಸರಿಸಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಒತ್ತಾಯಿಸಿದೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಸತ್ಯಾಗ್ರಹ ನಡೆಸಿದ ಸಿಎನ್‌ಸಿ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಸದಸ್ಯರು 1941ರಿಂದ 2011ರವರೆಗಿನ ಜನಗಣತಿ ದಾಖಲೆಗಳು ಕೊಡವರನ್ನು ಜಾತಿ ಎಂದು ತಪ್ಪಾಗಿ ವರ್ಗೀಕರಿಸಿದ ಜನಗಣತಿ ದಾಖಲೆಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಕೊಡವ ಜನಾಂಗದ ಈ ಅಪರೂಪದ ಮಾನವ ಪ್ರಭೇದವನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು, ನಮ್ಮ ಸಂವಿಧಾನದ ತಿದ್ದುಪಡಿ ನೈಸರ್ಗಿಕ ಮತ್ತು ಸಾರ್ವತ್ರಿಕ ಜಾಗತಿಕ ನ್ಯಾಯದ ಹಿತದೃಷ್ಟಿಯಿಂದ ಒಂದು ಸ್ಮರಣೀಯ ಐತಿಹಾಸಿಕ ಅವಶ್ಯಕತೆಯಾಗಿದೆ. ಭಾರತದ ಸಾಂವಿಧಾನಿಕ ದಾಖಲೆಗಳಲ್ಲಿ ಕೊಡವ ಸಮುದಾಯವನ್ನು ಒಂದು ವಿಶಿಷ್ಟ ಮೂಲ ವಂಶಸ್ಥ ಜನಾಂಗವೆಂದು ಗುರುತಿಸದಿರುವುದು ಮತ್ತು ಸರಿಯಾದ ಶಾಸ್ತ್ರೀಯ ನಾಮಕರಣದ ಕೊರತೆಯು ಗಮನಾರ್ಹ ಪರಿಣಾಮಗಳನ್ನು ಬೀರುತ್ತದೆ ಎಂದು ಎನ್.ಯು.ನಾಚಪ್ಪ ಪ್ರತಿಪಾದಿಸಿದರು.

ರೇಖಾ ನಾಚಪ್ಪ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಅಜ್ಜಿಕುಟ್ಟೀರ ಲೋಕೇಶ್, ಬೊಟ್ಟಂಗಡ ಗಿರೀಶ್, ಅರೆಯಡ ಗಿರೀಶ್, ಮಂದಪಂಡ ಮನೋಜ್, ಕಾಂಡೇರ ಸುರೇಶ್, ಕಾಟುಮಣಿಯಂಡ ಉಮೇಶ್, ಅವರೆಮಾಡದಂಡ ರಮೇಶ್ ಇತರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

## ಕೊಡಗಿನಲ್ಲಿ ಮತ್ತೆ ಧಾರಾಕಾರ ಮಳೆ



ಮಡಿಕೇರಿ ಸುತ್ತಮುತ್ತ ಭಾನುವಾರ ಧಾರಾಕಾರ ಮಳೆ ಸುರಿಯಿತು.

**ಮಡಿಕೇರಿ:** ಕಾದು ಕಬ್ಬಿಣದಂತಾಗಿದ್ದ ಭೂಮಿಗೆ ವರುಣ ಕೃಪೆ ತೋರಿದ ಪರಿಣಾಮ ಕೊಡಗು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಭಾನುವಾರ ಧಾರಾಕಾರ ಮಳೆ ಸುರಿದಿದೆ. ಮಧ್ಯಾಹ್ನದವರೆಗೆ ಸುಡು ಬಿಸಿಲಿನ ವಾತಾವರಣ ಕಂಡು ಬಂದಿತ್ತಾದರೂ ಮಧ್ಯಾಹ್ನದ ಬಳಿಕ ಕಾರ್ಮೋಡ ಕವಿದು ಗುಡುಗು ಮಿಂಚಿನ ಸಹಿತ ಸುತ್ತಮುತ್ತಲಿನ ಬೋಯಿಕೇರಿ, ಹಟ್ಟಿಹೊಳೆ, ಹಾಲೇರಿ, ಕಾಂಡನಕೊಲ್ಲಿ, ಮಕ್ಕಂದೂರು, ಮುಕೋಡ್ಲು, ವಣಚಲು, ಗಾಳಿಬೀಡು ಕಡೆಗಳಲ್ಲಿ ಗುಡುಗು ಸಹಿತ ರಭಸದ ಮಳೆಯಾಗಿದೆ. ಸುಂಟಿಕೊಪ್ಪ ಪಟ್ಟಣ, 7ನೇ ಹೊಸಕೋಟೆ, ಕಂಬಿಬಾಣೆ, ಭೂತನಕಾಡು ಸುತ್ತ ಮುತ್ತಲ್ಲ ಭಾಗಗಳಲ್ಲೂ ಉತ್ತಮ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ವಿರಾಜಪೇಟೆ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಪ್ರದೇಶ, ಅಮ್ಮತ್ತಿ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದ ಬಗ್ಗೆ ವರದಿಯಾಗಿದೆ.

ಭಾಗಮಂಡಲ, ತಲಕಾವೇರಿ, ಕೋರಂಗಾಲ, ಚಟ್ಟಿಮಾನಿ ಭಾಗಗಳಲ್ಲೂ ವ್ಯಾಪಕ ಮಳೆ ಸುರಿದಿದೆ. ಮಳೆಯ ನೀರು ತಗ್ಗು ಪ್ರದೇಶಗಳ ರಸ್ತೆಗಳಲ್ಲಿ ತುಂಬಿ ಹರಿಯುತ್ತಿದ್ದು, ಮಳೆಗಾಲದ ಅನುಭವ ಮೂಡಿಸುತ್ತಿದೆ ಎಂದು ಗ್ರಾಮಸ್ಥರು ಅಭಿಪ್ರಾಯಿಸಿದ್ದಾರೆ. ಈ ಭಾಗಗಳಲ್ಲಿ ಈ ವರ್ಷದ ಮೊದಲ ಮಳೆಯ ಸಿಂಚನದಿಂದ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

# ಸೂಕ್ಷ್ಮತೆಯಿಂದ ಕಾರ್ಯನಿರ್ವಹಿಸಲು ಪತ್ರಕರ್ತರಿಗೆ ಕರೆ



ಕೊಡಗು ಪತ್ರಕರ್ತರ ಸಂಘದ ಪ್ರಥಮ ಅಧ್ಯಕ್ಷ ಎಸ್.ಎ.ಮುರಳೀಧರ್, ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್‌ರನ್ನು ಸನ್ಮಾನಿಸಲಾಯಿತು

ಮಡಿಕೇರಿ, ಮಾ.23–ಪ್ರಜಾಪ್ರಭುತ್ವ ವ್ಯವಸ್ಥೆ 4ನೇ ಅಂಗವಾಗಿರುವ 'ಪತ್ರಿಕಾ ಕ್ಷೇತ್ರ' ಸಮಾಜದ ಅಂಕುಡೊಂಕುಗಳನ್ನು ಗಮನಿಸಿತಿದ್ದುವ ಸೂಕ್ಷ್ಮತೆಗಳೊಂದಿಗೆ ಕಾರ್ಯನಿರ್ವಹಿಸುವಂತಾಗಬೇಕೆಂದು ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಎಂ.ಎ.ನಿರಂಜನ್ ಆಶಯ ವ್ಯಕ್ತಪಡಿಸಿದರು. ನಗರದ ರೆಡ್ ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ಆಯೋಜಿತ, ಕೊಡಗು ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಅನಿಲ್ ಎಚ್.ಟಿ. ಮತ್ತು ತಂಡಕ್ಕೆ ಅಧಿಕಾರ ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. 'ಖಡ್ಗದ ಅಂಚಿಗಿಂತಲು ಲೇಖನಿ ಹರಿತ' ಎನ್ನುವ ನಾಣ್ಣುಡಿ ಉಲ್ಲೇಖಿಸಿ ಪ್ರಸ್ತುತ ವ್ಯವಸ್ಥೆಗಳಡಿ, ವ್ಯವಸ್ಥೆಯ ತಪ್ಪು ಒಪ್ಪುಗಳನ್ನು ಸತ್ಯದ ಕುಲುಮೆಯಲ್ಲಿ ಪರೀಕ್ಷೆಗೊಡ್ಡಿ, ಚಾಟಿ ಬೀಸಬೇಕಾದ ಲೇಖನಿ ಒಂದಷ್ಟು ಮೊಂಡಾಗಿದೆಯೇ ಎಂದು ಕಳವಳ ವ್ಯಕ್ತಪಡಿಸಿದರು.

ಸಮಾರಂಭವನ್ನು ಜ್ಯೋತಿ ಬೆಳಗಿ ಉದ್ಘಾಟಿಸಿದ ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾದ ಆರ್.ನಾಗೇಂದ್ರ ಪ್ರಸಾದ್, ಕೊಡಗಿನ ಪತ್ರಿಕೆಗಳು ಸಮಾಜದ ಕೈಗನ್ನಡಿಯಾಗಿ ಅತ್ಯಂತ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಮೆಚ್ಚುಗೆ ವ್ಯಕ್ತಪಡಿಸಿ ದರಲ್ಲದೇ, ಸಂಘಕ್ಕೆ ದತ್ತಿ ನಿಧಿಯೊಂದನ್ನು ನೀಡುವುದಾಗಿ ಘೋಷಿಸಿದರು.

'ಕೊಡಗು ಪತ್ರಕರ್ತರ ಸಂಘ'ದ ಸ್ಟಿಕ್ಕರ್ ಅನ್ನು ಕೂರ್ಗ್ ಹೋಟೆಲ್ಸ್, ರೆಸಾರ್ಟ್ಸ್ ಅಸೋಸಿಯೇಶನ್ ಅಧ್ಯಕ್ಷ ಕುಂಟ್ಯೋಳಂಡ ದಿನೇಶ್ ಕಾರ್ಯಪ್ಪ ಬಿಡುಗಡೆ ಮಾಡಿದರು.

ಕೊಡಗು ಪತ್ರಕರ್ತರ ಸಂಘ ಅಸ್ತಿತ್ವಕ್ಕೆ ಬಂದು, ಅದಕ್ಕೊಂದು ಭದ್ರ ನೆಲೆಯನ್ನು ಒದಗಿಸುವ ಕಾಣವಾದ ಮೊದಲ 2 ವರ್ಷಗಳ ಹಾದಿಯನ್ನು ಎಸ್.ಎ.ಮುರಳೀಧರ್ ಅವರ ತಂಡ ಯಶಸ್ವಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಂಬರುವ ದಿನಗಳಲ್ಲಿ ವಿನೂತನ ಕಾರ್ಯಕ್ರಮಗಳನ್ನು ಸಂಘದ ಎಲ್ಲರ ಸಹಕಾರದೊಂದಿಗೆ ನಡೆಸುವುದಾಗಿ ನೂತನ ಅಧ್ಯಕ್ಷ ಅನಿಲ್ ಎಚ್.ಟಿ ವಿಶ್ವಾಸ ವ್ಯಕ್ತಪಡಿಸಿದರು.

ಹಲ ಸಂಕಷ್ಟಗಳ ನಡುವೆ ನೂತನ ಕೊಡಗು ಪತ್ರಕರ್ತರ ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಆರಂಭಿಕ ವರ್ಷಗಳಲ್ಲಿ ಸಂಘವನ್ನು ಗಟ್ಟಿ ಗೊಳಿಸುವ ನಿಟ್ಟಿನ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮ ತಂಡ ನಡೆಸಿದೆ. ಇನ್ನು ಮುಂದೆಯೂ ಒಟ್ಟಾಗಿ ಸಂಘಟಿತವಾಗಿ ಸಂಘದ ಬಲವರ್ಧನೆಗೆ ಶ್ರಮಿಸೋಣವೆಂದು ಸಂಘದ ನಿರ್ಗಮಿತ ಅಧ್ಯಕ್ಷ ಎಸ್.ಎ. ಮುರಳೀಧರ್ ತಿಳಿಸಿದರು.

ಸಂಘದ ಪ್ರಥಮ ಅಧ್ಯಕ್ಷ ಎಸ್.ಎ. ಮುರಳೀಧರ್, ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್ ಯೋಗದಲ್ಲಿ ವಿಶ್ವದಾಖಲೆ ಮಾಡಿದ ಬಾಲಕಿ ಸಿಂಚನ, ಸಾಹಿತಿ ಡಾ.ರೇವತಿ ಮಧೋಷ್ ಪೂವಯ್ಯ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ ಸಂಘದ ಮೂಲಕ ನಡೆಯುವ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಪತ್ರಕರ್ತರ ನೂತನ ಜೆರ್ಸಿಯನ್ನು ಅತಿಥಿ ಗಣ್ಯರು ಅನಾವರಣಗೊಳಿಸಿದರು. ಸಂಘದ ಗೌರವ ಸಲಹೆಗಾರ ಟಿ.ಪಿ.ರಮೇಶ್, ಬಿ.ಜಿ.ಅನಂತಶಯನ, ಟ್ರಸ್ಟ್ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಜಿ.ವಿ.ರವಿಕುಮಾರ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಉಜ್ವಲ್ ರಂಜಿತ್ ಉಪಸ್ಥಿತರಿದ್ದರು.

## ಗಾಂಜಾ ಮಾರಾಟ: ನಾಲ್ವರು ಆರೋಪಿಗಳ ಬಂಧನ

ಪೊನ್ನಂಪೇಟೆ, ಮಾ.23– ಇಲ್ಲಿನ ಕುಂದ ರಸ್ತೆಯಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮತ್ತು ಸೇವನೆ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳನ್ನು ಪತ್ತೆ ಹಚ್ಚಿರುವ ಪೊಲೀಸರು 4 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ವೀರಾಜಪೇಟೆ ನಿವಾಸಿ ಕಲೀಲ್(42) ಎಂಬಾತನೇ ಗಾಂಜಾ ಮಾರಾಟ ಮಾಡುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದ ಆರೋಪಿಯಾಗಿದ್ದು, ಈತನಿಂದ ಗಾಂಜಾ ಮಾರಾಟಕ್ಕೆ ಬಳಸಿದ್ದ ವ್ಯಾನ್(ಕೆ.ಎ.05, ಎಂಜಿ.2578) ವಶಪಡಿ ಸಿಕೊಳ್ಳಲಾಗಿದೆ.

ಪೊನ್ನಂಪೇಟೆ ಕುಂದ ರಸ್ತೆಯಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಪೊನ್ನಂಪೇಟೆ ಟಿ.ಆರ್. ರಸ್ತೆಯ ಪಿ.ಆರ್.ನವೀನ್(27), ಕಾವೇರಿ ನಗರದ ವಿ.ಬಿ. ಶ್ರೀಹರಿ(20) ಹಾಗೂ ಕಾಟ್ರಕೊಲ್ಲಿಯ ಶರಣು(41) ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.

ವೀರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್, ಗೋಣಿಕೊಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ಶಿವರಾಜ್ ಮುಧೋಳ್ ಮಾರ್ಗದರ್ಶನದಲ್ಲಿ ಪೊನ್ನಂಪೇಟೆ ಠಾಣಾಧಿಕಾರಿ ನವೀನ್, ಸಿಬ್ಬಂದಿಗಳಾದ ಮಹದೇಶ್ವರ ಸ್ವಾಮಿ ಎಸ್.ಬಿ, ಮಂಜುನಾಥ್, ಬಸವರಾಜು, ಪ್ರಸನ್ನ, ದಯಾನಂದ ಕಂಬಳಿ, ಮುತ್ತು ರಾಜು, ಹರೀಶ್, ಪ್ರವೀಣ ಹೆಚ್.ಪಿ, ಬಾಳಪ್ಪ ಅವರು ಕಾರ್ಯಾಚರಣೆ ನಡೆಸಿದ್ದಾರೆ.

## ಗುತ್ತಿಗೆಯಲ್ಲಿ ಮೀಸಲಾತಿ ಕೇವಲ ಮುಸ್ಲಿಂ ಸಮುದಾಯಕ್ಕಷ್ಟೇ ಸೀಮಿತವಾಗಿಲ್ಲ



ಆಲೀರ ಎಂ. ರಶೀದ್

ಪೊನ್ನಂಪೇಟೆ, ಮಾ.23– ಗುತ್ತಿಗೆಯಲ್ಲಿ ಮೀಸಲಾತಿ ಕೇವಲ ಮುಸ್ಲಿಂ ಸಮುದಾಯಕ್ಕಷ್ಟೇ ಸೀಮಿತವಾಗಿಲ್ಲ. ಆದರೆ ಬಿಜೆಪಿ ಅವರು ಕೇವಲ ರಾಜಕೀಯ ಲಾಭಕ್ಕಾಗಿ ಈ ಕುರಿತು ಅಪಪ್ರಚಾರ ನಡೆಸುತ್ತಿದ್ದಾರೆ. ಅಲ್ಪ ಸಂಖ್ಯಾತರೆಂದರೆ ಕೇವಲ ಮುಸ್ಲಿ ಮರು ಮಾತ್ರ ಎಂಬಂತೆ ಬಿಂಬಿಸುತ್ತಿರುವುದು ಸರಿಯಲ್ಲ ಎಂದು ಪೊನ್ನಂ ಪೇಟೆ ಪಪಂ ಉಪಾಧ್ಯಕ್ಷ ಆಲೀರ ಎಂ.ರಶೀದ್ ಹೇಳಿದ್ದಾರೆ.

ಅಲ್ಪಸಂಖ್ಯಾತ ಮತ್ತು ಹಿಂದುಳಿದವರಿಗೂ ಮೀಸಲಾತಿ ನೀಡಲು ನಿರ್ಧಾರ ತೆಗೆದುಕೊಳ್ಳಲಾಗಿದೆ ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ. ನಂತ ರವೂ ಈ ಕುರಿತು ಅನಗತ್ಯ ಹೇಳಿಕೆ ನೀಡುತ್ತಾ ಬಿಜೆಪಿ ಮುಖಂಡರು ನಡೆಸುತ್ತಿರುವ ಕೀಳು ಮಟ್ಟದ ರಾಜಕಾರಣ ಅವರಿಗೆ ಶೋಭೆ ತರುವು ದಿಲ್ಲ. ಮುಸ್ಲಿಮರನ್ನು ಸೇರಿದಂತೆ ಇತರ ಅಲ್ಪಸಂಖ್ಯಾತರನ್ನು ದ್ವೇಷದಿಂದ ಕಾಣುವ ಬಿಜೆಪಿಗರ ಅಪಾಯ ಕಾರಿ ಪ್ರವೃತ್ತಿ ತೀರಾ ಖಂಡ ನೀಯ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತರಿಗೆ 2 ಕೋಟಿ ರೂ.ಗುತ್ತಿಗೆ ಮೊತ್ತದಲ್ಲಿ ಮಾತ್ರ ಶೇ.4ರಷ್ಟು ಮೀಸಲಾತಿ ನೀಡಲು ನಿರ್ಧರಿಸಲಾಗಿದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಲ್ಲಿ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದು ಸರಕಾರ ಸ್ಪಷ್ಟವಾಗಿ ಹೇಳಿದೆ ಈ ಕ್ರಮದಿಂದ ಬೇರೆ ಸಮುದಾಯದ ಹಕ್ಕು ಕಸಿದಂತಾಗುವುದಿಲ್ಲ ರಾಜ್ಯದ ಅಲ್ಪಸಂಖ್ಯಾತರೂ ಭಾರತದ ಪ್ರಜೆಗಳಲ್ಲವೇ? ಮುಸ್ಲಿಮರು ಸೇರಿದಂತೆ ಅಲ್ಪಸಂಖ್ಯಾತರು ತೆರಿಗೆ ಪಾವತಿಸುವುದಿಲ್ಲವೇ? ಎಂದು ಪ್ರಶ್ನಿಸಿದ್ದಾರಲ್ಲದೆ ಈ ವಿಚಾರದಲ್ಲಿ ವಿರೋಧ ವ್ಯಕ್ತಪಡಿಸುತ್ತಿರುವ ಬಿಜೆಪಿಯವರು ಅಲ್ಪಸಂಖ್ಯಾತರ ವಿರೋಧಿಗಳು ಎಂದು ರಶೀದ್ ಪತ್ರಿಕಾ ಹೇಳಿಕೆಯಲ್ಲಿ ಟೀಕಿಸಿದ್ದಾರೆ.

## ಅರ್ಜಿ ಆಹ್ವಾನ

**ಮಡಿಕೇರಿ:** ಸಾಹಿತ್ಯ ಅಕಾಡೆಮಿ ಮತ್ತು ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ ಹಾವೇರಿ ಜಿಲ್ಲೆ ಇವರ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ 3 ದಿನಗಳ ಕಮ್ಮಟವನ್ನು ಆಯೋಜಿಸಿದೆ. ಏ.21 ರಿಂದ 3 ದಿನಗಳ ಕಾಲ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆಯಲ್ಲಿ ನಡೆಯಲಿದ್ದು, ಆಸಕ್ತಿಯಿರುವ 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಏಪ್ರಿಲ್ 5 ಕೊನೆಯ ದಿನವಾಗಿದೆ.

## ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಸೀಮಂತ



ನಾಪೋಕ್ಲು ಪೊಲೀಸ್ ಠಾಣೆಯ ಸಿಬ್ಬಂದಿ ಸಿ.ಪಿ ಪೂರ್ಣಿಮಾ ಅವರ ಸೀಮಂತ ಕಾರ್ಯವನ್ನು ಪೊಲೀಸ್ ಠಾಣೆಯಲ್ಲಿ ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು.

ನಾಪೋಕ್ಲು, ಮಾ.23– ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಪೊಲೀಸರು ಕೌಟುಂಬಿಕ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲೂ ಕಾರ್ಯ ಪ್ರವರ್ತರಾಗಿ ಗಮನ ಸೆಳೆದಿದ್ದಾರೆ.

ಇಲ್ಲಿನ ಪೊಲೀಸ್ ಠಾಣೆಯ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಯವರು ತಮ್ಮ ಸಹೋದ್ಯೋಗಿ ಮಹಿಳಾ ಸಹೋದ್ಯೋಗಿಯ ಸೀಮಂತ ಕಾರ್ಯವನ್ನು ಸಾಂಪ್ರದಾಯಿಕವಾಗಿ ನೆರವೇರಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ.

ಸಿಬ್ಬಂದಿ ಸಿ.ಪಿ ಪೂರ್ಣಿಮಾ ಅವರ ಸೀಮಂತ ಕಾರ್ಯವನ್ನು ಪೊಲೀಸ್ ಠಾಣೆಯಲ್ಲಿ ಅದ್ದೂರಿಯಾಗಿ ನೆರವೇರಿಸಲಾಯಿತು. ಮಡಿಲು ತುಂಬಿ ಬಳೆ, ಕುಂಕುಮ, ವಸ್ತ್ರ ವಿವಿಧ ಬಗೆಯ ತಿಂಡಿ ತಿನಿಸುಗಳು, ಹಣ್ಣುಹಂಪಲು, ತಾಂಬೂಲವನ್ನು ನೀಡಿ ಉತ್ತಮ ಕೌಟುಂಬಿಕ ಜೀವನ ನಿರ್ವಹಣೆಗಾಗಿ ಸಿಬ್ಬಂದಿಗಳು ಹಾರೈಸಿದರು.

ಠಾಣಾಧಿಕಾರಿ ಮಂಜುನಾಥ ಮಾತನಾಡಿ, ಮಹಿಳೆಯ ಜೀವನದಲ್ಲಿ ನವಮಾಸಗಳು ಒಂದು ಪ್ರಮುಖ ಘಟ್ಟ, ತಾಯಿಯಾಗಿ ಜೀವನ ನಿರ್ವಹಣೆ ಮಾಡಬೇಕಾದಲ್ಲಿ ಆಕೆಗೆ ದೇವರ ಅನುಗ್ರಹವು ಮುಖ್ಯ ಹಾಗೂ ನಮ್ಮೆಲ್ಲರ ಹಾರೈಕೆ ಅಗತ್ಯ. ಈ ನಿಟ್ಟಿನಲ್ಲಿ ಸೀಮಂತ ಕಾರ್ಯವನ್ನು ನೆರವೇರಿಸಲಾಗಿದೆ. ದೇವರು ಸಿಬ್ಬಂದಿಗೆ ಉತ್ತಮ ಆರೋಗ್ಯ ಭಾಗ್ಯವನ್ನು ಕರುಣಿಸಲಿ ಎಂದು ಹಾರೈಸಿದರು. ಈ ಸಂದರ್ಭ ಠಾಣೆಯ ಎಲ್ಲ ಸಿಬ್ಬಂದಿವರ್ಗ ಹಾಜರಿದ್ದರು.

# ಹರದನಹಳ್ಳಿಯಲ್ಲಿ ವಿಜೃಂಭಣೆಯ ದಿವ್ಯಲಿಂಗೇಶ್ವರ ರಥೋತ್ಸವ

### ಬಿಸಿಲಿನ ಝಳದ ನಡುವೆಯೂ ಉದ್ಘೋಷಗಳೊಂದಿಗೆ ತೇರನ್ನೆಳೆದ ಭಕ್ತರು



ಹರದನಹಳ್ಳಿಯ ಇತಿಹಾಸ ಪ್ರಸಿದ್ಧ ದಿವ್ಯಲಿಂಗೇಶ್ವರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಚಾಮರಾಜನಗರ, ಮಾ.23–ತಾಲೂಕಿನ ಹರದನಹಳ್ಳಿಯ ಕಾಮಾಕ್ಷಾಂಭ ಸಮೇತ ದಿವ್ಯಲಿಂಗೇಶ್ವರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಕಳೆದ ಮೂರ್‍ನಾಲ್ಕು ದಿನಗಳಿಂದಲೇ ದೇವಸ್ಥಾನದಲ್ಲಿ ವಿವಿಧ ಪೂಜಾ ಮಹೋತ್ಸವಗಳು ನಡೆದಿದ್ದವು ಗುರುವಾರ ಸಂಜೆ ಗಿರಿಜಾ ಕಲ್ಯಾಣ ಮಹೋತ್ಸವವು ಅದ್ದೂರಿಯಿಂದ ನಡೆಯಿತು. ರಥೋತ್ಸವದ ಅಂಗವಾಗಿ ದೇವಸ್ಥಾನ ಮತ್ತು ಆವರಣವನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು.

ಶುಕ್ರವಾರ ಮಧ್ಯಾಹ್ನ 12–44 ರಿಂದ 12–57ರ ವರಗೆ ಸಲ್ಲುವ ಶುಭ ಮಿಥನ ಲಗ್ನದಲ್ಲಿ ಕಾಮಾಕ್ಷಾಂಬ ಸಮೇತ ದಿವ್ಯಲಿಂಗೇಶ್ವರರ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ, ದೇವಸ್ಥಾನದ ಸುತ್ತ ಮೂರು ಪ್ರದಕ್ಷಿಣೆ ಹಾಕಿ ರಥದಲ್ಲಿ ಬಿಜಯಂಗೈಸಲಾಯಿತು,

ನಂತರ ಗ್ರಾಮದ ವಿವಿಧ ಕೋಮಿನ ಯಜಮಾನರು ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆಯುತ್ತಿದ್ದಂತೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಜಾನಪದ ಕಲಾ ತಂಡಗಳಾದ, ನಂದಿಧ್ವಜ, ನಾದಸ್ವರ, ಡೊಳ್ಳು ಕುಣಿತ, ಗೊರವರ ಕುಣಿತ, ಕಂಸಾಳೆ ತಂಡ, ದೊಣ್ಣೆ ವರಸೆ, ಹುಲಿವೇಷ ಕುಣಿತ ಸೇರಿದಂತೆ ವಿವಿಧ ತಂಡಗಳು ರಥೋತ್ಸವಕ್ಕೆ ಮೆರಗು ತಂದವು. ಕಲಾ ತಂಡಗಳೊಂದಿಗೆ ಯುವಕರು ಸುಡುವ ಬಿಸಿಲನ್ನು ಲೆಕ್ಕಿಸದೇ ಕುಣಿಯುತ್ತ ಸಾಗಿದರೆ, ರಥೋತ್ಸವ ಸಾಗುವ ರಸ್ತೆಯುದ್ದಕ್ಕೂ ಮಹಿಳೆಯರು ಪೂಜಾ ಸಾಮಾಗ್ರಿ ಹಿಡಿದು, ರಥಕ್ಕೆ ಪೂಜೆ ಸಲ್ಲಿಸಿದರು, ರಥೋತ್ಸವದಲ್ಲಿ ಭಾಗವಹಿಸಿದ್ದವರಿಗೆ ಪಾನಕ, ಮಜ್ಜಿಗೆ, ಕೋಸಂಬರಿ, ಪಂಚಾಮೃತವನ್ನು ವಿತರಿಸಲಾಯಿತು,

ಬೆಳಗ್ಗೆಯಿಂದಲೇ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು, ಕೆಲವರು ಭಕ್ತಾಧಿಗಳಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಿ, ದೇವರ ದರ್ಶನ ಮಾಡಿ ಬಂದವರಿಗೆ ಪ್ರಸಾದ ವಿತರಿಸಿದರು. ವಿವಿಧ ಜಿಲ್ಲೆಗಳಿಂದಲ್ಲದೆ ನೆರೆಯ ತಮಿಳನಾಡಿನಿಂದ ಅಪಾರಸಂಖ್ಯೆಯ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದು ರಥೋತ್ಸವದಲ್ಲಿ ಪಾಲ್ಗೊಂಡರು.

# ಇಂದು ವಿಶ್ವ ಕ್ಷಯರೋಗ ದಿನ

### ಜಿಲ್ಲೆಯಲ್ಲಿ 41,062 ಕಫ ಪರೀಕ್ಷೆ : 1,280 ಕ್ಷಯರೋಗ ಪ್ರಕರಣ ಪತ್ತೆ



ಚಾಮರಾಜನಗರ, ಮಾ.23– ವಿಶ್ವ ಕ್ಷಯ ರೋಗ ದಿನವನ್ನು ಮಾರ್ಚ್ 24 ರಂದು ವಿಶ್ವದೆಲ್ಲೆಡೆ ಆಚರಿಸಲಾಗುತ್ತಿದ್ದು, ಈ ವರ್ಷದ ಘೋಷವಾಕ್ಯ 'ಹೌದು! ನಾವು ಕ್ಷಯರೋಗವನ್ನು ಕೊನೆಗಾಣಿಸಬಹುದು' ಎಂಬುದಾಗಿದೆ.

ಕರ್ನಾಟಕದಲ್ಲಿ 2024ರಲ್ಲಿ 78,374 ಕ್ಷಯ ರೋಗ ಪ್ರಕರಣಗಳು ಪತ್ತೆಯಾಗಿದ್ದು, ಜಿಲ್ಲೆಯಲ್ಲಿ 2024ರಲ್ಲಿ 1280 ಕ್ಷಯರೋಗವುಳ್ಳವರು ಪತ್ತೆಯಾಗಿದ್ದಾರೆ. ಇವರಲ್ಲಿ 47 ಮಂದಿಗೆ ಔಷಧ ನಿರೋಧಕ ಕ್ಷಯ (DRTB) ವಾಗಿದ್ದು, ಎಲ್ಲರಿಗೂ ಉಚಿತ ಚಿಕಿತ್ಸೆ ಅನುಸರಣೆ, ಆಪ್ತ ಸಮಾಲೋಚನೆ, ಸಲಹೆ, ಬೆಂಬಲವನ್ನು ಆರೋಗ್ಯ ಇಲಾಖೆ ವತಿಯಿಂದ ನೀಡಲಾಗುತ್ತಿದೆ.

ರೋಗ ಪತ್ತೆಯಾದ ಕ್ಷಯರೋಗಿಗಳಿಗೆ ಎಲ್ಲಾ ರೀತಿಯ ಇತರೇ ಪರೀಕ್ಷೆಗಳನ್ನು ಮಾಡಲಿದ್ದು, ತೀರಾ ಅನಾರೋಗ್ಯವಿದ್ದರೆ ಆಸ್ಪತ್ರೆಯಲ್ಲಿ ಪ್ರಾರಂಭಿಕ ಚಿಕಿತ್ಸೆಯನ್ನು ಕೊಡಿಸಿ ನಂತರ ಅವರು ವಾಸವಾಗಿರುವ ಸ್ಥಳದಲ್ಲೇ ಕಮ್ಯೂನಿಟಿ ವಾಲಂಟಿಯರ್ಸ್ ಮುಖಾಂತರ ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸಾವಧಿಯಲ್ಲಿ ರೋಗಿಗಳಿಗೆ ಮತ್ತು ಅವರ ಮನೆಯವರಿಗೆ ಆಪ್ತಸಮಾಲೋಚನೆ, ಸಲಹೆ, ಬೆಂಬಲವನ್ನು ನೀಡಲಾಗುತ್ತಿದೆ. ಚಿಕಿತ್ಸೆ ಮುಗಿಯುವವರೆಗೂ ಅನುಸರಣೆಯನ್ನು ಮಾಡಿ ಚಿಕಿತ್ಸೆ ಪೂರ್ಣಗೊಂಡ ನಂತರ 2 ವರ್ಷದವರೆಗೂ ಅನುಸರಣೆ ಮಾಡಲಾಗುತ್ತದೆ.

ಕ್ಷಯರೋಗವು ಹೆಚ್ಚಾಗಿ ಅಪೌಷ್ಟಿಕತೆ ಉಳ್ಳವರು, 60 ವರ್ಷಕ್ಕೆ ಮೇಲ್ಪಟ್ಟವರು, ಮಧುಮೇಹಿ, ಮದ್ಯವ್ಯಸನಿಗಳು, ತಂಬಾಕು, ಧೂಮಪಾನ ಮಾಡುವವರು, ರೋಗ ನಿರೋಧಕ ಶಕ್ತಿ ಕಮ್ಮಿ ಮಾಡುವ ಯಾವುದೇ ಕಾಯಿಲೆಯುಳ್ಳವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. 2024 ರ ಡಿಸೆಂಬರ್ 7 ರಿಂದ 2025ರ ಮಾರ್ಚ್ 17 ರವರೆಗೆ 100 ದಿನಗಳ ಟಿಬಿ ಪತ್ತೆ ಆಂದೋಲನವನ್ನು ನಡೆಸಲಾಗಿದೆ. ಜಿಲ್ಲೆಯಲ್ಲಿ ಈ ಗುಂಪುಗಳಿಗೆ ಸೇರಿದ 2,32,452 ಜನರನ್ನು ಟಿಬಿ ತಪಾಸಣೆಗೆ ಒಳಪಡಿಸಿದ್ದು, ಹಲವು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

2023 ರಲ್ಲಿ ಜಿಲ್ಲೆಯಲ್ಲಿ 130 ಗ್ರಾಮ ಪಂಚಾಯಿತಿಗಳಲ್ಲಿ 13 ಗ್ರಾಮ ಪಂಚಾಯಿತಿಗಳು ಕ್ಷಯ ಮುಕ್ತವೆಂದು ಘೋಷಿಸಲ್ಪಟ್ಟಿದ್ದವು, ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆ, ಪಡಗೂರು, ಹಿಂಡನಪುರ, ಆಲತ್ತೂರು, ಸೋಮಹಳ್ಳಿ, ಚಿಕ್ಕಾಟಿ, ಬೇರಂಬಾಡಿ, ಬೊಮ್ಮಲಪುರ, ಕೋಟೆಕೆರೆ, ರಾಘವಪುರ) ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿ, ಯಳಂದೂರು ತಾಲೂಕಿನ ಗುಂಬಳ್ಳಿ, ಮತ್ತು ದುಗ್ಗಟ್ಟಿ ಗ್ರಾಮ ಪಂಚಾಯಿಗಳು ಕ್ಷಯಮುಕ್ತವೆಂದು ಘೋಷಿಸಲ್ಪಟ್ಟಿದ್ದು ಕಂಚಿನ ಪದಕವನ್ನು ಪಡೆದಿವೆ.

2024ರಲ್ಲಿ ಒಟ್ಟು 35 ಗ್ರಾಮ ಪಂಚಾಯಿತಿಗಳು ಕ್ಷಯಮುಕ್ತ ಗ್ರಾಮ ಪಂಚಾಯಿತಿಗಳೆಂದು ಘೋಷಿಸಲ್ಪಟ್ಟಿದ್ದು, ಸತತವಾಗಿ 2ನೇ ಬಾರಿ 8 ಗ್ರಾಮ ಪಂಚಾಯಿತಿಗಳು ಅರ್ಹತೆ ಹೊಂದಿರುವುದರಿಂದ ಬೆಳ್ಳಿ ಪದಕ ಪಡೆದಿವೆ. ಗುಂಡ್ಲುಪೇಟೆ ತಾಲ್ಲೂಕಿನ ನೇನೆಕಟ್ಟೆ, ಪಡಗೂರು, ಶಿಂಡನಮರ, ಆಲತ್ತೂರು, ಸೋಮಹಳ್ಳಿ, ಚಿಕ್ಕಾಟಿ, ಬೇರಂಬಾಡಿ, ಕೊಳ್ಳೇಗಾಲ ತಾಲ್ಲೂಕಿ ಕುಣಗಳ್ಳಿ ಜೊತೆಗೆ ಮೊದಲ ಬಾರಿಗೆ ಚಾಮರಾಜನಗರ ತಾಲೂಕಿನ ಮಂಗಲ, ಕಾಗಲವಾಡಿ, ಹೆಗ್ಗೋಠಾರ, ಕುಲಗಾಣ, ಅಟ್ಟುಗುಳಿಪುರ, ಕೊತ್ತಲವಾಡಿ, ಗುಂಡ್ಲುಪೇಟೆ ತಾಲ್ಲೂಕಿನ ಆಗತಗೌಡನಹಳ್ಳಿ, ಬಾಚಳ್ಳಿ, ಬರಗಿ, ಬಲಚವಾಡಿ, ಹಂಗಳ, ಹೊರೆಯಾಲ, ಕಣ್ಣೇಗಾಲ, ಕೊಡಸೋಗೆ, ಮಂಗಲ, ನಿಟ್ರೆ, ಶಿವಪುರ, ತೆರಕಣಾಂಬಿ, ಕೊಳ್ಳೇಗಾಲ ತಾಲ್ಲೂಕಿನ ಕುಂತೂರು, ಟಗರಪುರ, ಮುಳ್ಳೂರು, ಚಿಕ್ಕಲ್ಲೂರು, ಸಿದ್ದಯ್ಯನಪುರ, ಯಳಂದೂರು ತಾಲ್ಲೂಕಿನ ಯರಗಂಬಳ್ಳಿ, ಅಂಬಳೆ, ಮದ್ದೂರು, ಬಿ.ಆರ್ ಹಿಲ್ಸ್ ಗ್ರಾಮ ಪಂಚಾಯಿತಿಗಳು ಕಂಚಿನ ಪದಕ ಪಡೆದಿವೆ.

ಈ ವರ್ಷದ ವಿಶ್ವ ಕ್ಷಯ ರೋಗ ದಿನಾಚರಣೆಯ ಘೋಷಣೆಯಂತೆ 'ಹೌದು ! ನಾವು ಕ್ಷಯರೋಗವನ್ನು ಕೊನೆಗೊಳಿಸಬಹುದು' ಎಂಬ ಧ್ಯೇಯ ಸಾಕಾರಗೊಳ್ಳಬೇಕಾದರೆ ಕ್ಷಯರೋಗದ ಬಗೆಗಿನ ಭಯ, ತಪ್ಪು ತಿಳುವಳಿಕೆಗಳು, ಗೊಂದಲ, ಕಳಂಕ, ತಾರತಮ್ಯಗಳನ್ನು ಹೋಗಲಾಡಿಸಬೇಕಿದೆ. ಕ್ಷಯ ರೋಗದ ವಿರುದ್ಧ ಹೋರಾಟ ನಡೆಸಿ ನಮ್ಮ ಜಿಲ್ಲೆಯನ್ನು ಕ್ಷಯಮುಕ್ತಗೊಳಿಸಲು ಎಲ್ಲರ ಸಹಕಾರ ಅಗತ್ಯವಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಚಿದಂಬರ ಮತ್ತು ಜಿಲ್ಲಾ ಕ್ಷಯರೋಗ ಕೇಂದ್ರದ ಅಧಿಕಾರಿ ಡಾ॥ ಎಂ.ಎಸ್. ರವಿಕುಮಾರ್ ಹೇಳಿದ್ದಾರೆ.

## ದುಪ್ಪಟ್ಟು ತೆರಿಗೆ ವಿರೋಧಿಸಿ ಧರಣಿ 5ನೇ ದಿನಕ್ಕೆ



ದುಪ್ಪಟ್ಟು ತೆರಿಗೆ ವಸೂಲಾತಿ ವಿರೋಧಿಸಿ ನಗರಸಭಾ ಸದಸ್ಯೆ ಜಯಮರಿ ನಡೆಸುತ್ತಿ ರುವ ಧರಣಿಯು 5ನೇ ದಿನಕ್ಕೆ ಕಾಲಿಟ್ಟಿತು.

ಕೊಳ್ಳೇಗಾಲ, ಮಾ.23– ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಉಲ್ಲಂಘಿಸಿ ನಗರಸಭೆ ಅನಧಿಕೃತ ಬಡಾವಣೆ ಗಳಿಗೆ ಆಸ್ತಿ ತೆರಿಗೆದಾರರಿಂದ ದುಪ್ಪಟ್ಟು ತೆರಿಗೆ ವಸೂಲಾತಿ ಮಾಡುತ್ತಿರುವುದನ್ನು ವಿರೋಧಿಸಿ ನಗರಸಭಾ ಸದಸ್ಯೆ ಜಯಮರಿ ನಡೆಸುತ್ತಿರುವ ಧರಣಿಯು 5ನೇ ದಿನವಾದ ಭಾನುವಾರವೂ ಸಹ ಮುಂದುವರೆಯಿತು.

ಬಿ ಖಾತೆ ಮಾಡಿಕೊಡಲು ನಗರಸಭಾಧಿಕಾರಿಗಳು ಕಂದಾಯ ಪಾವತಿ ವಿಚಾರದಲ್ಲಿ ನಿಯಮ ಉಲ್ಲಂಘಿಸುತ್ತಿದ್ದಾರೆ, ನಿರ್ದಿಷ್ಟ ಮಾಹಿತಿ ನೀಡದೆ ಖಾತೆದಾರರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿ ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ ತಾವು ಮಾಡಿದ್ದನ್ನೆ ಸಮರ್ಥಿಸಿಕೊಳ್ಳುತ್ತಾರೆ ಎಂದು ಅಧಿಕಾರಿಗಳ ವರ್ತನೆ ಖಂಡಿಸಿದ ಕರಪತ್ರವನ್ನು ಪಟ್ಟಣದ ಹಲವೆಡೆ ಜಾಥಾ ಮೂಲಕ ವಿತರಿಸಿದ ಬಳಿಕ ನಗರಸಭೆ ಮುಂದೆ ಧರಣಿ ನಡೆಸಿ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಆಗಮಿಸುವಂತೆ ಜಯಮರಿ ಪಟ್ಟು ಹಿಡಿದು ಆಗ್ರಹಿಸಿದರು.

ರಾಜ್ಯ ಸರ್ಕಾರ ಬಿ–ಖಾತೆ ವಿತರಣೆ ವಿಚಾರವಾಗಿ ಸುತ್ತೋಲೆ ಹೊರಡಿಸಿದೆ. 2023–24ನೇ ಸಾಲಿನ ಹಿಂದಿನ 6 ವರ್ಷಕ್ಕೆ ಕಂದಾಯ ವಸೂಲಿ ಮಾಡಬೇಕು. ವರ್ಷಕ್ಕೆ ಡಬಲ್ ಟ್ಯಾಕ್ಸ್ ಅನ್ನು ಕಟ್ಟಿಸಿಕೊಳ್ಳುವಂತೆ ತಿಳಿಸಿದೆ. ಆದರೆ, ನಗರಸಭೆ ಅಧಿಕಾರಿಗಳು ಇ–ಸ್ವತ್ತು ಆದ ವರ್ಷದಿಂದಲೂ ಡಬಲ್ ಟ್ಯಾಕ್ಸ್ ಕಟ್ಟಬೇಕು ಎಂದು ಹೇಳುತ್ತಾರೆ.

ಈ ಅಧಿಕಾರವನ್ನು ನಗರಸಭೆಗೆ ಯಾರು ನೀಡಿವರು. ಸರ್ಕಾರಕ್ಕಿಂತಲೂ ನಗರಸಭೆ ದೊಡ್ಡದೇ, ಸೋಮವಾರ ನಗರಸಭೆ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಬಂದು ಈವಿಚಾರ ಚರ್ಚಿಸಿ ಸಮಸ್ಯೆ ಬಗೆಹರಿದರೆ ಧರಣಿ ಹಿಂಪಡೆವೆ ಎಂದರು.

# ರೈತ ಸಂಘದಿಂದ ಮೊಂಬತ್ತಿ ಮೆರವಣಿಗೆ



ರೈತ ಮುಖಂಡರ ಬಂಧನ ಖಂಡಿಸಿ ರೈತ ಸಂಘಟನೆಗಳು ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘ ಜಿಲ್ಲಾ ಘಟಕದಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಿದವು.

ಚಾಮರಾಜನಗರ,ಮಾ.23– ಪಂಜಾಬಿನ ಕನೋರಿ ಹಾಗೂ ಶಂಭು ಬಾರ್ಡರ್‌ನಲ್ಲಿ ಒಂದು ವರ್ಷದಿಂದ ದೇಶದ ರೈತರಿಗಾಗಿ ಎಂಎಸ್‌ಪಿ ಖಾತ್ರಿ ಕಾನೂನು ಜಾರಿ ಮಾಡುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲಾ ಹಾಗೂ ನೂರಾರು ರೈತ ಮುಖಂಡರ ಬಂಧನ ಖಂಡಿಸಿ ರೈತ ಸಂಘಟನೆಗಳು ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಿದರು.

ನಗರದ ಚಾಮರಾಜೇಶ್ವರಿ ಉದ್ಯಾನದಿಂದ ಮೊಂಬತ್ತಿ ಹಿಡಿದು ಹೊರಟು ಭುವನೇಶ್ವರಿ ವೃತ್ತದಲ್ಲಿ ತೆರಳಿ ರಾಷ್ಟ್ರೀಯ ಹೆದ್ದಾರಿ ತಡೆದು ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಮೂಕಳ್ಳಿ ಮಹದೇವ ಸ್ವಾಮಿ ಮಾತನಾಡಿ, ಪಂಜಾಬಿನ ಕನೋರಿ ಹಾಗೂ ಶಂಭು ಬಾರ್ಡರ್ ನಲ್ಲಿ ಕಳೆದ ವರ್ಷದಿಂದ ನ್ಯಾಯಯುತ ಹಕ್ಕುಗಳಾದ ಎಂಎಸ್‌ಪಿ ಕಾಯ್ದೆ ಗ್ಯಾರಂಟಿ ಕಾನೂನು ಜಾರಿ, ದೇಶದ ರೈತರ ಸಂಪೂರ್ಣ ಸಾಲ ಮನ್ನಾ, 60 ವರ್ಷ ತುಂಬಿದ ರೈತರಿಗೆ ಪೆನ್ಷನ್ (ಮಾಸಾಶನ) ಎಂಬಿತ್ಯಾದಿ ಜಾರಿ ಮಾಡುವಂತೆ ಒತ್ತಾಯಿಸಿ ಚಳುವಳಿ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ ಹಾಗೂ ನೂರಾರು ರೈತ ಮುಖಂಡರನ್ನು ಬಂಧಿಸಿ ಚಳವಳಿಯನ್ನು ವಿಫಲಗೊಳಿಸಲು ಯತ್ನಿಸುತ್ತಿರುವ ಪಂಜಾಬ್ ಹಾಗೂ ಕೇಂದ್ರ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು.

ಕೂಡಲೇ ಬಂಧನ ಮಾಡಿರುವ ರೈತರ ಬಿಡುಗಡೆ ಮಾಡಬೇಕು, ಹೋರಾಟ ಮಾಡುತ್ತಿರುವ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ಕೇಂದ್ರ ಸರ್ಕಾರ ಹಾಗೂ ಪಂಜಾಬ್ ಸರ್ಕಾರಗಳು ದಬ್ಬಾಳಿಕೆ, ದೌರ್ಜನ್ಯ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ಹರಿಯಾಣದ ರೈತರ ಜೊತೆಗೂಡಿ ಪಂಜಾಬ್ ಸರ್ಕಾರದ ವಿರುದ್ಧ ದೆಹಲಿಯಲ್ಲಿ ಉಗ್ರ ಹೋರಾಟ ನಡೆಸ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ ಜಿಲ್ಲಾ ಉಪಾಧ್ಯಕ್ಷ ಮೂಡ್ಲುಪುರ ಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಂಜದೇವನಪುರ ಸತೀಶ್, ತಾಲೂಕು ಕಾರ್ಯದರ್ಶಿ ಉಡಿಗಾಲ ಸುಂದ್ರಪ್ಪ, ವೀರನಪುರ ಗುರುಸ್ವಾಮಿ, ಎಚ್.ಮೂಕಳ್ಳಿಗೌಡ್ರ ಶಿವಕುಮಾರ್, ಹಿಟ್ಟಿಗೆ ಹಟ್ಟಿ ನಾಗಣ್ಣ ಟ್ರ್ಯಾಕ್ಟರ್ ಮಹೇಶ್, ಎಂಪಿ ಮಹದೇವಪ್ಪ ಎಂ.ಬಿ.ರಾಜು, ಯರಿಯೂರು ಮಹೇಶ್ ಭಾಗವಹಿಸಿದ್ದರು

## ಪ್ರತ್ಯೇಕ ಅಪಘಾತದಲ್ಲಿ ಮೂವರು ಬೈಕ್ ಸವಾರರ ಸಾವು

**ಚಾಮರಾಜನಗರ:** ಜಿಲ್ಲೆಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣಗಳಲ್ಲಿ ಮೂವರು ಬೈಕ್ ಸವಾರರು ಸಾವನ್ನಪ್ಪಿರುವ ಘಟನೆ ನಡೆದಿದೆ.

**ಸ್ಥಳದಲ್ಲೇ ಇಬ್ಬರು ಸಾವು:** ತಾಲೂಕಿನ ಹರದನಹಳ್ಳಿ ಬಳಿ ಬೈಕ್‌ಗೆ ಈಚರ್ ವಾಹನ ಡಿಕ್ಕಿಯಾಗಿ ತಾಲೂಕಿನ ಬ್ಯಾಡಮೂಡ್ಲು ಗ್ರಾಮದ ಅಭಿಷೇಕ್ (23) ಹಾಗೂ ಅಭಿ(21) ಮೃತರಾದರೆ, ಮಹಾದೇಶ್(21) ಎಂಬಾತನಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ರವಾನಿಸಲಾಗಿದೆ. ಬಾಳೆಗೊನೆ ಕತ್ತರಿಸುವ ಕೆಲಸ ಮುಗಿಸಿ ಒಂದೇ ಬೈಕ್‌ನಲ್ಲಿ ಹಿಂತಿರುಗುವಾಗ ಈಚರ್ ಡಿಕ್ಕಿಯಾಗಿ ಚಾಲಕ ವಾಹನ ಸಮೇತ ಪರಾರಿಯಾಗಿದ್ದಾನೆ. ಪೊಲೀಸರು ಕಾರ್ಯಾಚರಣೆ ನಡೆಸಿ ವಾಹನವನ್ನು ಪತ್ತೆ ಹಚ್ಚಿದ್ದಾರೆ. ಟ್ರಾಫಿಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





**ಬೈಕ್‌ಗೆ ಕಾರು ಡಿಕ್ಕಿ:** ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ರಾಘವಾಪುರ ಮತ್ತು ಹಳ್ಳದ ಮಾದಳ್ಳಿ ಗೇಟ್‌ನ ಮಧ್ಯದಲ್ಲಿ ಬೈಕ್ ಮತ್ತು ಕಾರು ನಡುವೆ ಅಪಘಾತ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ.

ರಾಘವಾಪುರ ಗ್ರಾಮದ ನಾಗಶೆಟ್ಟಿ (40) ಮೃತಪಟ್ಟವರು. ಇವರು ಬೈಕ್‌ನಲ್ಲಿ ಬೇಗೂರು ಕಡೆ ಹೋಗುತ್ತಿದ್ದಾಗ, ಎದುರುಗಡೆಯಿಂದ ಕಾರು ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಚಾಲಕ ನಾಗಶೆಟ್ಟಿ ಸ್ಥಳದಲ್ಲಿ ಮೃತಪಟ್ಟಿದ್ದಾನೆ.

ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿದ್ದು, ಚಾಲಕ ಅಲ್ಲಿಂದ ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆಯ ಪೊಲೀಸರು ಪರಿಶೀಲನೆ ಮಾಡಿ ಮೃತ ದೇಹವನ್ನು ಬೇಗೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಕೊಡಲಾಗಿದೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ

ಸೋಮವಾರ 24 ಮಾರ್ಚ್ 2025

# ಸಂಸ್ಕೃತ ಪತ್ರಿಕೋದ್ಯಮ ಕುರಿತ ಕಾರ್ಯಾಗಾರ



ಮೈಸೂರಿನ ಸಂಸ್ಕೃತ ಪಾಠ ಶಾಲಾ ಸಭಾಂಗಣದಲ್ಲಿ ನಡೆದ ಸಂಸ್ಕೃತ ಪತ್ರಿಕೋದ್ಯಮ ಕುರಿತ ಕಾರ್ಯಾಗಾರದಲ್ಲಿ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಮಾತನಾಡಿದರು.

ಮೈಸೂರು, ಮಾ.23(ಎಂಟಿವೈ)– ಸಂಸ್ಕೃತ ವಿದ್ವಾಂಸರು, ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತದಲ್ಲಿ ಲೇಖನ ಬರೆಯುವ ಮೂಲಕ ಹೆಚ್ಚಿನ ಜನರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ. ನಾಗರಾಜರಾವ್ ಸಲಹೆ ನೀಡಿದ್ದಾರೆ.

ಮೈಸೂರಿನ ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆ ಸಭಾಂಗಣದಲ್ಲಿ ಸುಧರ್ಮಾ ಸಂಸ್ಕೃತ ದಿನಪತ್ರಿಕೆ ಹಾಗೂ ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸಂಸ್ಕೃತದ ಭಾಷಾಜ್ಞಾನ ಇರುವ ಬರಹಗಾರರು ಸಂಸ್ಕೃತದಲ್ಲಿ ಸುದ್ದಿಯನ್ನು ಬರೆಯಲು ಆರಂಭಿಸಬೇಕು. ಸಂಸ್ಕೃತದ ಪತ್ರಿಕೆಗಳು, ನಿಯತಕಾಲಿಕಗಳಲ್ಲಿ ವರದಿ, ಲೇಖನಗಳನ್ನು ಬರೆಯಬೇಕು. ಸಂಸ್ಕೃತದ ಅನೇಕ ಕಾವ್ಯಗಳು, ಕೃತಿಗಳು ಭಾರತದ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. ಅದೇ ರೀತಿ ಭಾರತೀಯ ಭಾಷೆಗಳಲ್ಲಿರುವ ಜ್ಞಾನಪೀಠ ಪ್ರಶಸ್ತಿ ಕೃತಿಗಳು, ಶ್ರೇಷ್ಠ ಕೃತಿಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವ ಕಾರ್ಯ ಆಗಬೇಕು ಎಂದು ಹೇಳಿದರು.

ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಟಿ.ವಿ. ಸತ್ಯನಾರಾಯಣ ಅವರು ಸಂಸ್ಕೃತ ಪತ್ರಿಕೆಗಳು, ನಿಯತಕಾಲಿಕೆಗಳು ಎದುರಿಸುತ್ತಿರುವ ಸವಾಲನ್ನು ವಿವರಿಸಿದರು. ಹಿರಿಯ ಪತ್ರಕರ್ತೆ ಹೆಚ್. ಎಲ್. ಸೀತಾದೇವಿ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಮಾಧ್ಯಮ ಕ್ಷೇತ್ರ ಬದಲಾಗಿರುವ ಚಿತ್ರಣವನ್ನು ವಿವರಿಸಿದರು.

ಸುಧರ್ಮಾ ಸಂಪಾದಕರಾದ ಜಯಲಕ್ಷ್ಮೀ, ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲರಾದ ಡಾ.ಪಿ. ಸತ್ಯನಾರಾಯಣ, ಪತ್ರಕರ್ತ ಶ್ರೀವತ್ಸಾಚಾರ್ಯ ಅವರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಡಾ.ಹೆಚ್.ವಿ.ನಾಗರಾಜರಾವ್ ಸಂಸ್ಕೃತ ಪತ್ರಿಕೋದ್ಯಮ ಕುರಿತು, ಸುದ್ದಿ ಬರಹ ಮತ್ತು ವರದಿಗಾರಿಕೆ ಕುರಿತು ಡಾ.ಕೂಡ್ಲಿ ಗುರುರಾಜ, ಭಾಷಾಂತರ ಕುರಿತು ಶ್ರೀವತ್ಸಾ ಚಾರ್ಯ, ಅಂಕಣ ಲೇಖನ ಕುರಿತು ಡಾ.ಟಿ.ವಿ.ಸತ್ಯನಾರಾಯಣ ಪ್ರಬಂಧ ಮಂಡಿಸಿದರು.

# 70 ಸರ್ಕಾರಿ ಶಾಲೆಗಳಿಗೆ ಒಟ್ಟು 1200 ಟ್ಯಾಬ್ ವಿತರಣೆ



ಮೈಸೂರಿನ ರೋಟರಿ ಪಂಚಶೀಲ್ ಹಾಗೂ ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಸಹಯೋಗದಲ್ಲಿ ಜಿಲ್ಲೆಯ 70 ಸರ್ಕಾರಿ ಶಾಲೆಗಳಿಗೆ ಟ್ಯಾಬ್‌ಗಳನ್ನು ವಿತರಿಸಲಾಯಿತು.

ಮೈಸೂರು, ಮಾ.23– ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಶಿಕ್ಷಣವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರೋಟರಿ ಪಂಚಶೀಲ್ ಸಂಸ್ಥೆಯು ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಸಹಯೋಗದಲ್ಲಿ ಜಿಲ್ಲೆಯ 70 ಸರ್ಕಾರಿ ಶಾಲೆಗಳಿಗೆ ಒಟ್ಟು 1200 ಟ್ಯಾಬ್‌ಗಳನ್ನು ವಿತರಿಸಲಾಗಿದೆ.

ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ 50 ಶಾಲೆಗಳಿಗೆ ತಲಾ 20 ಹಾಗೂ 20 ಶಾಲೆಗಳಿಗೆ ತಲಾ 10 ಟ್ಯಾಬ್‌ಗಳನ್ನು ಶಿಕ್ಷಕರಿಗೆ ಹಸ್ತಾಂತರಿಸಲಾಯಿತು. ತಲಾ 15 ಸಾವಿರ ರೂ. ಬೆಲೆಯ ಒಟ್ಟು 1.80 ಕೋಟಿ ರೂ. ವೆಚ್ಚದ 1200 ಟ್ಯಾಬ್‌ಗಳನ್ನು ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಪ್ರಾಯೋಜಿಸಿದ್ದು, ರೋಟರಿ ಪಂಚಶೀಲ್ ಇತರೆ ಅನುಕೂಲಗಳನ್ನು ಕಲ್ಪಿಸಿದೆ.

ಈ ಟ್ಯಾಬ್‌ಗಳು 20,000+ ಕೋರ್ಸ್‌ಗಳನ್ನು ಹೊಂದಿರುವ ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಪ್ಲಾಟ್‌ಫಾರ್ಮ್‌ಗೆ ಪ್ರವೇಶ ಒದಗಿಸುತ್ತವೆ. ಈ ಕೋರ್ಸ್‌ಗಳು 6 ರಿಂದ 12ನೇ ತರಗತಿವರೆಗಿನ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳನ್ನೂ ಒಳಗೊಂಡಿವೆ. ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಡಿಜಿಟಲ್ ಶಿಕ್ಷಣದಿಂದ ವಂಚಿತರಾಗಬಾರದು ಹಾಗೂ ಅವರಿಗೆ ಆಧುನಿಕ ಕಲಿಕಾ ಪರಿಕರಗಳ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸುವ ಗುರಿಯೊಂದಿಗೆ ಈ ಪರಿಣಾಮಕಾರಿಯಾದ ಉಪಕ್ರಮವನ್ನು ಕೈಗೊಳ್ಳಲಾಗಿದೆ.

ಶಾಲೆಗಳಿಗೆ ಟ್ಯಾಬ್ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಬೆಂಗಳೂರಿನ ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಮುಖ್ಯಸ್ಥ ಸಂತೋಷ್ ಅನಂತಪುರ, ಮೈಸೂರಿನ ಇನ್ಫೋಸಿಸ್ ಹಿರಿಯ ಉಪಾಧ್ಯಕ್ಷ ಎನ್.ಸತೀಶ್ ನಂಜಪ್ಪ, ಡಿಡಿಪಿಐ ಜವರೇಗೌಡ, ಜಿಪಂ ಉಪ ಕಾರ್ಯದರ್ಶಿ ಡಾ.ಕೃಷ್ಣರಾಜು, ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್‌ನ ಬಿಳಿಗಿರಿ ರಂಗ, ರೋಟರಿ ಪಂಚಶೀಲ್ ಅಧ್ಯಕ್ಷ ಅಶ್ವಿನ್ ಪಾಳೇಗಾರ್, ಕಾರ್ಯದರ್ಶಿ ರಾಜೇಂದ್ರ ಪ್ರಸಾದ್, ಕಿರಣ್ ರಾಬರ್ಟ್ ಮತ್ತು ಡಾ.ಅನಿಲ್ ಮತ್ತಿತರರು ಭಾಗವಹಿಸಿದ್ದರು.

# ಪ್ರಧಾನಿ ಮೋದಿ ಕರೆಗೆ ತಲೆ ಬಾಗಿದ ರಾಜ್ಯ ಸರ್ಕಾರ: ಬಿಸಿಯೂಟದಲ್ಲಿ ಎಣ್ಣೆ ಬಳಕೆ ಶೇ.10ರಷ್ಟು ಕಡಿತ

ಬೆಂಗಳೂರು, ಮಾ.23– ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕರೆಗೆ ತಲೆ ಬಾಗಿರುವ ರಾಜ್ಯ ಸರ್ಕಾರ ಮಧ್ಯಾಹ್ನದ ಬಿಸಿಯೂಟದಲ್ಲಿ ಎಣ್ಣೆ ಬಳಕೆಯನ್ನು ಶೇ.10ರಷ್ಟು ಕಡಿಮೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಶಾಲಾ ವಯಸ್ಸಿನ ಮಕ್ಕಳಲ್ಲಿ ಬೊಜ್ಜು ಮತ್ತು ಹೃದಯ ಕಾಯಿಲೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳನ್ನು ಉಲ್ಲೇಖಿಸಿ ಕೇಂದ್ರ ಶಿಕ್ಷಣ ಸಚಿವಾಲಯದ ಪತ್ರವನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಿಎಂ ಪೋಷಣ್ ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಬಿಸಿಯೂಟಕ್ಕೆ ಬಳಸುವ ಸೂರ್ಯಕಾಂತಿಯ ಎಣ್ಣೆ ಪ್ರಮಾಣವನ್ನು ಶೇ.10 ಕಡಿಮೆ ಮಾಡುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕ ಚಂದ್ರ ಸೂಚನೆ ನೀಡಿದ್ದಾರೆ.

ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಜೀವನ ಶೈಲಿ ಉತ್ತೇಜಿಸಲು, ದೈನಂದಿನ ಊಟದಲ್ಲಿ ಎಚ್ಚರಿಕೆಯಿಂದ ಅಡುಗೆ ಎಣ್ಣೆ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಅತ್ಯಂತ ಕಡಿಮೆ ಅಡುಗೆ ಎಣ್ಣೆ ಬಳಸಿ ತಾಜಾ ಹಾಗೂ ಪೌಷ್ಟಿಕ ಬಿಸಿಯೂಟವನ್ನು ತಯಾರಿಸಲು ಮತ್ತು ಸೇವಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಅಡುಗೆ ಎಣ್ಣೆಯ ಬಳಕೆಯನ್ನು ಕನಿಷ್ಠಗೊಳಿಸಲು ಬಿಸಿಯೂಟ ತಯಾರಿ ಸಿಬ್ಬಂದಿಗೆ ಕಡ್ಡಾಯವಾಗಿ ತರಬೇತಿ ನೀಡಬೇಕು. ಆರೋಗ್ಯ ಸಂಸ್ಥೆಗಳು ಮತ್ತು ಗೃಹ ವಿಜ್ಞಾನ ಕಾಲೇಜುಗಳ ಪೌಷ್ಟಿಕಾಹಾರ ತಜ್ಞರನ್ನು ಆಹ್ವಾನಿಸಿ ಕಡಿಮೆ ಎಣ್ಣೆ ಬಳಸಿ ತಯಾರಿಸಬಹುದಾದ ಪಾಕ ವಿಧಾನವನ್ನು ಎಲ್ಲರಿಗೂ ತಲುಪಿಸಬೇಕು. ಆರೋಗ್ಯಕರ ಆಹಾರ ಪದ್ಧತಿಯ ಬಗ್ಗೆ ಶಾಲಾ ಮಟ್ಟದಲ್ಲಿ ರಸಪ್ರಶ್ನೆ ಆಯೋಜಿಸಿ ಬಹುಮಾನ ವಿತರಿಸಬೇಕು. ಶಾಲೆಗಳಲ್ಲಿ ವ್ಯಾಯಾಮ, ಯೋಗ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಿಯಮಿತವಾಗಿ ಆಯೋಜಿಸಬೇಕು ಎಂದು ಸೂಚಿಸಲಾಗಿದೆ.

ಪರಿಷ್ಕೃತ ಮಾರ್ಗಸೂಚಿಗಳ ಅಡಿಯಲ್ಲಿ ಮಧ್ಯಾಹ್ನದ ಊಟದಲ್ಲಿ ಬಳಸುವ ಸೂರ್ಯಕಾಂತಿ ಎಣ್ಣೆಯ ಪ್ರಮಾಣವನ್ನು 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ಮಗುವಿಗೆ 5 ಗ್ರಾಂ ಮತ್ತು 6 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ಮಗುವಿಗೆ 7.5 ಗ್ರಾಂಗೆ ಇಳಿಸಲಾಗಿದೆ.

ಈ ವಿಚಾರವನ್ನು ಪ್ರಧಾನಿ ಮೋದಿಯವರು ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲೂ ಪ್ರಸ್ತಾಪಿಸಿದ್ದರು. ಜಗತ್ತಿನಾದ್ಯಂತ ಜನರಲ್ಲಿ ಹೆಚ್ಚುತ್ತಿರುವ ಬೊಜ್ಜಿನ ಸಮಸ್ಯೆಯ ಕುರಿತು ಅವರು ಮಾತನಾಡಿದರು. ಅಧಿಕ ಅಡುಗೆ ಎಣ್ಣೆ ಬಳಕೆಯಿಂದ ಹೃದಯ ಕಾಯಿಲೆ ಮಧುಮೇಹ ಮತ್ತು ಅಧಿಕ ಒತ್ತಡಗಳಂಥ ರೋಗಗಳು ಬರುತ್ತವೆ. ನಮ್ಮ ಆಹಾರ ಪದ್ಧತಿಯಲ್ಲಿ ಮಾಡಿಕೊಳ್ಳುವ ಸಣ್ಣ ಬದಲಾವಣೆಯಿಂದ ರೋಗ ಮುಕ್ತವಾದ ಉತ್ತಮ ಭವಿಷ್ಯವನ್ನು ನಾವು ರೂಪಿಸಿಕೊಳ್ಳಬಹುದು. ಆದ್ದರಿಂದ ತಡಮಾಡದೇ ಅಡುಗೆ ಎಣ್ಣೆ ಖರೀದಿಯಲ್ಲಿ ಕಡಿತ ಮಾಡಿ ಎಂದು ಹೇಳಿದ್ದರು.

# ಸರ್ಕಾರಿ ನೌಕರರಿಗೆ ಸಂಬಳ ಪ್ಯಾಕೇಜ್ ಖಾತೆ ಕಡ್ಡಾಯ

ಬೆಂಗಳೂರು, ಮಾ.23– ರಾಜ್ಯ ಸರ್ಕಾರದ ಎಲ್ಲ ನೌಕರರು, ಅಧಿಕಾರಿಗಳು ವಿವಿಧ ಬ್ಯಾಂಕ್ ಮತ್ತು ಅಂಚೆ ಕಚೇರಿಗಳಲ್ಲಿ 'ಸಂಬಳ ಪ್ಯಾಕೇಜ್' ಖಾತೆ ತೆರೆಯುವುದನ್ನು ಕಡ್ಡಾಯ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಸಂಬಳ ಪ್ಯಾಕೇಜ್‌ನ ಅಡಿಯಲ್ಲಿ ಖಾತೆ ಹೊಂದಿದ್ದರೆ ಅಂತಹ ನೌಕರರಿಗೆ ಬ್ಯಾಂಕ್‌ಗಳು ಕಡಿಮೆ ಬಡ್ಡಿ ದರದಲ್ಲಿ ವಸತಿ ಸಾಲ, ಉಚಿತ ರುಪೇ ಡೆಬಿಟ್–ಕ್ರೆಡಿಟ್ ಕಾರ್ಡ್, ಉಚಿತ ಡಿಮ್ಯಾಂಡ್ ಡ್ರಾಫ್ಟ್, ರಿಯಾಯತಿ ದರದಲ್ಲಿ ಲಾಕರ್ ಸೇವೆ ಒದಗಿಸುತ್ತಿವೆ. ಈ ಅನುಕೂಲಗಳನ್ನು ಸರ್ಕಾರಿ ನೌಕರರು ಪಡೆದುಕೊಳ್ಳಬೇಕು ಎಂದು ಸೂಚಿಸಿದ್ದರೂ ಅನೇಕರು ಖಾತೆ ಆರಂಭಿಸದಿರುವುದು ಗಮನಕ್ಕೆ ಬಂದಿದೆ ಎಂದು ಇಲಾಖೆ ತಿಳಿಸಿದೆ.

ಜತೆಗೆ ಅತ್ಯಂತ ಕಡಿಮೆ ಮೊತ್ತಕ್ಕೆ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಟರ್ಮ್ ಇನ್ಸುರೆನ್ಸ್), ರೂ.456ಕ್ಕೆ ರೂ. 2 ಲಕ್ಷ ಮೊತ್ತದ ಅಪಘಾತ ವಿಮೆ ಒದಗಿಸುತ್ತಿದೆ. ಇನ್ನಷ್ಟು ಅನುಕೂಲಗಳು ಈ ಖಾತೆಗಳಿಗೆ ಲಭ್ಯವಿದೆ. ಹೀಗಾಗಿ ಎಲ್ಲ ನೌಕರರು 3 ತಿಂಗಳ ಒಳಗೆ ಸಂಬಳ ಪ್ಯಾಕೇಜ್ ಖಾತೆ ತೆರೆಯಬೇಕು ಎಂದು ಸೂಚಿಸಿದೆ.

'ಎಲ್ಲ ನೌಕರರು ಈ ಸ್ವರೂಪದ ಬ್ಯಾಂಕ್ ಅಥವಾ ಅಂಚೆ ಕಚೇರಿಗಳಲ್ಲಿ ಖಾತೆ ಆಯ್ಕೆ ಮಾಡಿಕೊಳ್ಳುವಂತೆ ಕ್ರಮ ವಹಿಸುವುದು ಆಯಾಯ ಇಲಾಖೆಯ ಮುಖ್ಯಸ್ಥರ ಹೊಣೆಗಾರಿಕೆ ಆಗಿರುತ್ತದೆ. ಈ ಸಂಬಂಧ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಮತ್ತು ನೌಕರರನ್ನು ಪ್ರೋತ್ಸಾಹಿಸಬೇಕು' ಎಂದು ಆರ್ಥಿಕ ಇಲಾಖೆ ಸೂಚಿಸಿದೆ.



**ಮೈಸೂರು ಮಿತ್ರ 45 — ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 24 ಮಾರ್ಚ್ 2025

ತಿ.ನರಸೀಪುರ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಚುನಾವಣೆ

# ಕೆಂಪಯ್ಯನಹುಂಡಿ ಮಹದೇವಣ್ಣ ಅಧ್ಯಕ್ಷ, ಮಹದೇವಸ್ವಾಮಿ ಉಪಾಧ್ಯಕ್ಷ

ತಿ.ನರಸೀಪುರ, ಮಾ.23– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಕೆಲವೊಂದು ನಾಟಕೀಯ ಬೆಳವಣಿಗೆ ನಡುವೆ ಅಧ್ಯಕ್ಷರಾಗಿ ಕೆಂಪಯ್ಯನಹುಂಡಿ ಮಹದೇವಣ್ಣ, ಉಪಾಧ್ಯಕ್ಷರಾಗಿ ಎನ್.ಎನ್.ಮಹದೇವಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವರುಣ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬೆಂಬಲಿತರಾಗಿ ಕೆಂಪಯ್ಯನಹುಂಡಿ ಮಹದೇವಣ್ಣ ಹಾಗೂ ತಿ.ನರಸೀಪುರ ಕ್ಷೇತ್ರದ ದೊಡ್ಡಬಾಗಿಲು ಮಲ್ಲಿಕಾರ್ಜುನಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಎನ್.ಎನ್.ಮಹದೇವಸ್ವಾಮಿ ಹಾಗೂ ತುಮ್ಮನೆ ಸೋಮಣ್ಣ ಉಮೇದುವಾರಿಕೆ ಸಲ್ಲಿಸಿದ್ದರು. ಬಳಿಕ ಮಲ್ಲಿಕಾರ್ಜುನಸ್ವಾಮಿ ಹಾಗೂ ಸೋಮಣ್ಣ ನಾಮಪತ್ರ ವಾಪಸ್ ಪಡೆದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹೆಚ್.ಎಸ್.ಮನೋಜ್ ಕುಮಾರ್ ಪ್ರಕಟಿಸಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಕೆ.ವಜ್ರೇಗೌಡ, ಎ.ಎಮ್.ಮಹದೇವ, ಟಿ.ಎಸ್.ಪ್ರಸನ್ನ, ಎಂ.ಎಸ್.ಶಿವಮೂರ್ತಿ, ಆರ್.ಮಹೇಶ್, ರಾಜಮಣಿ, ಎಂ.ನಾಗರತ್ನ, ಎನ್.ಲಿಂಗಪ್ಪಾಜಿ, ಸಿ.ಸೋಮಣ್ಣ, ಎಂ.ಮಲ್ಲಿಕಾರ್ಜುನಸ್ವಾಮಿ, ಎನ್.ಅನಿಲ್ ಕುಮಾರ್, ಸರ್ಕಾರಿ ನಾಮ ನಿರ್ದೇಶಿತ ಸದಸ್ಯ ಎಂ.ಕೆ.ಶಿವಕುಮಾರ್ ಹಾಜರಿದ್ದು ಮತ್ತು ಆಯ್ಕೆಗೆ ಸಮ್ಮತಿ ಸೂಚಿಸಿದರು.

**ಕೊನೆ ಗಳಿಗೆಯಲ್ಲಿ ನಾಮಪತ್ರ ವಾಪಸ್:** ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಹಾಗೂ ಎನ್.ಎನ್.ಮಹದೇವಸ್ವಾಮಿ ಅಧ್ಯಕ್ಷ-ಉಪಾಧ್ಯಕ್ಷರಾಗಿ ಆಯ್ಕೆಯಾಗುತ್ತಾರೆಂಬುದು ಖಚಿತವಾಗಿದ್ದ ವೇಳೆ ಕಾಂಗ್ರೆಸ್ ಮತ್ತೊಂದು ಗುಂಪಿನ ಮಲ್ಲಿಕಾರ್ಜುನಸ್ವಾಮಿ ಮತ್ತು ಸೋಮಣ್ಣ ನಾಮಪತ್ರ ಸಲ್ಲಿಸಿದ್ದರು. ಇವರಿಬ್ಬರ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಚುನಾವಣೆ ಫಲಿತಾಂಶ ಕುತೂಹಲ ಕೆರಳಿಸಿತ್ತು. ಮಲ್ಲಿಕಾರ್ಜುನಸ್ವಾಮಿಗೆ 7 ಹಾಗೂ ಮಹದೇವಣ್ಣಗೆ 8 ಸದಸ್ಯರು ಬೆಂಬಲ ನೀಡಿದ್ದರು. ಯಾರೇ ಗೆದ್ದರೂ ಒಂದು ಮತದ ಅಂತರದಲ್ಲಿ ಗೆಲ್ಲುವರೆಂಬ ಕುತೂಹಲ ಎಲ್ಲರಲ್ಲಿತ್ತು. ಆದರೆ ನಂತರ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಮಲ್ಲಿಕಾರ್ಜುನಸ್ವಾಮಿ ಹಾಗೂ ಸೋಮಣ್ಣ ನಾಮಪತ್ರ ವಾಪಸ್ ಪಡೆದುಕೊಂಡರು. ಆ ಮೂಲಕ ಮಹದೇವಣ್ಣ ಹಾಗೂ ಮಹದೇವಸ್ವಾಮಿ ಅವಿರೋಧ ಆಯ್ಕೆಗೆ ಸಹಕರಿಸಿದರು.


ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಮಹದೇವಣ್ಣ, ಉಪಾಧ್ಯಕ್ಷರಾಗಿ ಎನ್.ಎನ್.ಮಹದೇವಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಮಾತನಾಡಿ, ನನ್ನ ಆಯ್ಕೆಗೆ ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಲ್ಲಾ ನಿರ್ದೇಶಕರಿಗೆ, ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕಳೆದ 5 ವರ್ಷದಲ್ಲಿ ಬ್ಯಾಂಕ್ ಅಧ್ಯಕ್ಷನಾಗಿ ನಾನು ಬ್ಯಾಂಕ್ ಅನ್ನು ಪ್ರಗತಿ ಪಥದತ್ತ ಕೊಂಡೊಯ್ಯುವ ಪ್ರಯತ್ನ ಮಾಡಿದ್ದೇನೆ. ಈ ಬಾರಿಯೂ ಬ್ಯಾಂಕ್ ಪ್ರಗತಿಗೆ ಹೆಚ್ಚಿನ ಶ್ರಮ ಹಾಕಿ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸಿಗುವಂತೆ ಮಾಡುವ ಜೊತೆಗೆ ರಾಜ್ಯ ಬ್ಯಾಂಕ್‌ನಿಂದ ಹೆಚ್ಚು ಹಣ ತಂದು ರೈತರಿಗೆ ಆರ್ಥಿಕ ನೆರವು ಒದಗಿಸುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಮಾತನಾಡಿದರು. ಜಿಪಂ ಮಾಜಿ ಸದಸ್ಯರಾದ ಓಂ ಪ್ರಕಾಶ್, ಟಿ.ಹೆಚ್.ಮಂಜುನಾಥನ್, ಎಂ.ಆರ್.ಸೋಮಣ್ಣ ಮಹದೇವ, ಬನ್ನೂರು ಪುರಸಭಾಧ್ಯಕ್ಷ ಕೃಷ್ಣೇಗೌಡ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಎಪಿಎಂಸಿ ಮಾಜಿ ಸದಸ್ಯ ಮಾವಿನಹಳ್ಳಿ ಪುಟ್ಟಸ್ವಾಮಿ, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ, ಎಸ್.ಮಹೇಶ್, ರಮೇಶ್, ಪ್ರಥಮ ದರ್ಜೆ ಗುತ್ತಿಗೆದಾರ ರಮೇಶ್, ಮಾಧು, ಆರೀಫ್, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಸದಸ್ಯ ಬಾದಾಮಿ ಮಂಜು, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಡೈರಿ ಗುರುಮೂರ್ತಿ, ಪಿಎಲ್‌ಡಿ ಬ್ಯಾಂಕ್ ಕಾರ್ಯದರ್ಶಿ ಮಹೇಶ್ ಮತ್ತಿತರರಿದ್ದರು.

### ಚುನಾವಣೆಯಲ್ಲಿ ಕಾಂಗ್ರೆಸ್ ಎರಡು ಬಣ

ತಿ.ನರಸೀಪುರದ ಕೆಲ ಭಾಗ ವರುಣದೊಂದಿಗೆ ಹಂಚಿಕೆಯಾಗಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಎರಡು ಬಣವಾಗಿದೆ. ತಿ.ನರಸೀಪುರ ಬ್ಲಾಕ್ ಹಾಗೂ ವರುಣ ಬ್ಲಾಕ್ ಕಾಂಗ್ರೆಸ್ ಎಂಬಂತಾಗಿದ್ದು, ವರುಣ ಕಾಂಗ್ರೆಸ್ಸಿಗರು ಯತೀಂದ್ರರ, ತಿ.ನರಸೀಪುರ ಕಾಂಗ್ರೆಸ್ಸಿಗರು ಸಂಸದ ಸುನೀಲ್ ಬೋಸ್ ಅವರಿಗೆ ಪ್ರಾಮುಖ್ಯತೆ ನೀಡುತ್ತಾ ಬಂದಿದ್ದಾರೆ. ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ 2 ಬ್ಲಾಕ್ ಕಾಂಗ್ರೆಸ್‌ಗಳ ನಡುವೆ ಪೈಪೋಟಿ ಏರ್ಪಟ್ಟು ಕೆಂಪಯ್ಯನಹುಂಡಿ ಮಹದೇವಣ್ಣ ಬಣ ಯತೀಂದ್ರರೊಂದಿಗೆ, ಮಲ್ಲಿಕಾರ್ಜುನಸ್ವಾಮಿ ಬಣ ಸುನೀಲ್ ಬೋಸ್‌ರೊಂದಿಗೆ ಗುರುತಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಪಿಎಲ್‌ಡಿ ಬ್ಯಾಂಕ್ ವರಿಷ್ಠ ಸ್ಥಾನಕ್ಕೆ ನಡೆದ ಚುನಾವಣೆ ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು. ಎರಡೂ ಗುಂಪಿಗೆ ಚುನಾವಣೆ ಪ್ರತಿಷ್ಠೆ ಕಣವಾಗಿ ಪರಿಣಮಿಸಿತ್ತು. ಮಲ್ಲಿಕಾರ್ಜುನಸ್ವಾಮಿಯನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಬೇಕೆಂಬ ಆಶಯ ಸುನೀಲ್ ಬೋಸ್‌ಗೆ ಇತ್ತು ಎನ್ನಲಾಗಿದೆ. ಆದರೆ ಮಹದೇವಣ್ಣ ಪರ ಹೆಚ್ಚಿನ ನಿರ್ದೇಶಕರಿದ್ದದ್ದನ್ನು ಅರಿತ ಬೋಸ್ ಮಲ್ಲಿಕಾರ್ಜುನಸ್ವಾಮಿಗೆ ನಾಮಪತ್ರ ವಾಪಸ್ ತೆಗೆಯಲು ಸೂಚಿಸಿದ್ದರೆನ್ನಲಾಗಿದೆ. ಹಾಗಾಗಿ ಮನಸ್ಸಿಲ್ಲದ ಮನಸ್ಸಿನಿಂದ ನಾಮಪತ್ರ ವಾಪಸ್ ಪಡೆದ ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷರಾಗಿ ಮಹದೇವಣ್ಣ ಆಯ್ಕೆಯಾಗುತ್ತಿದ್ದಂತೆ ಫೋಟೋ ಸೆಷನ್‌ನಲ್ಲೂ ಭಾಗವಹಿಸದೇ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡರೊಂದಿಗೆ ಅಲ್ಲಿಂದ ಜಾಗ ಖಾಲಿ ಮಾಡಿದ ಪ್ರಸಂಗ ನಡೆಯಿತು.

# ಮುಂಬರುವ ಜಿಪಂ, ತಾಪಂ ಚುನಾವಣೆಗೆ ಸನ್ನದ್ಧರಾಗಿ

## ಕಾರ್ಯಕರ್ತರಿಗೆ ಕೆಪಿಸಿಸಿ ಮಾಜಿ ಉಪಾಧ್ಯಕ್ಷ ಎಂ.ಪಿ.ಉಗ್ರಪ್ಪ ಸಲಹೆ

ಹುಣಸೂರು, ಮಾ.23– ಮುಂಬರುವ ಜೂನ್‌ನಲ್ಲಿ ಜಿಪಂ ಹಾಗೂ ತಾಪಂ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಚುನಾವಣೆಗೆ ಸನ್ನದ್ಧರಾಗಬೇಕು ಎಂದು ಕೆಪಿಸಿಸಿ ಮಾಜಿ ಉಪಾಧ್ಯಕ್ಷ ಎಂ.ಪಿ.ಉಗ್ರಪ್ಪ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಸರ್ಕಾರದಿಂದ ವಿವಿಧ ಸಂಸ್ಥೆಗಳಿಗೆ ನಾಮ ನಿರ್ದೇಶನಗೊಂಡ ಹಾಗೂ ಇನ್ನಿತರೆ ಕ್ಷೇತ್ರಗಳಿಗೆ ಚುನಾಯಿತರಾದ ಪ್ರತಿನಿಧಿಗಳಿಗೆ ಪಕ್ಷದಿಂದ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಪಿಸಿಸಿ ನಿರ್ದೇಶನದಂತೆ ಎಲ್ಲಾ ತಾಲೂಕುಗಳ ಬ್ಲಾಕ್ ಹಾಗೂ ವಿವಿಧ ಘಟಕಗಳನ್ನು ಪುನರ್ ರಚಿಸಲಾಗುವುದು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಪಕ್ಷ ಸಂಘಟಿಸಿ ಅಧಿ ಕಾರಕ್ಕೆ ತರಬೇಕು. ಪಕ್ಷನಿಷ್ಠೆ, ಜನರಿಗೆ ಸ್ಪಂದಿಸುವ ಕಾರ್ಯಕರ್ತರೇ ಪಕ್ಷದ ಆಸ್ತಿ. ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಆಗಿರುವ ಪ್ರಯೋಜನ ಪ್ರಚುರಪಡಿಸಿ, ಬಿಜೆಪಿ-ಜೆಡಿಎಸ್ ಪಕ್ಷಗಳ ವೈಫಲ್ಯವನ್ನು ಜನರ ಮುಂದಿಡಿ. ಹುಣಸೂರು ಜಾತಿ, ಧರ್ಮ ಮೀರಿದ ಕ್ಷೇತ್ರವಾಗಿದ್ದು, ಇಲ್ಲಿ ಕಾಂಗ್ರೆಸ್ ಗೆಲುವು ಸಾಧಿಸ ಬೇಕೆಂದು ತಿಳಿಸಿದರು.


ನಾಮ ನಿರ್ದೇಶನಗೊಂಡ ಸದಸ್ಯರು, ಚುನಾಯಿತ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ತಾಲೂಕಿನಲ್ಲಿ ಪಕ್ಷದಿಂದ ಅಧಿಕಾರ ಅನುಭವಿಸಿ ಪಕ್ಷಕ್ಕೆ ದ್ರೋಹ ಮಾಡಿರುವವರೇ ಹೆಚ್ಚಿದ್ದಾರೆ. ಆದರೆ ಹೆಚ್.ಪಿ.ಮಂಜುನಾಥ್ ಅವರಿಗೆ ಅಧಿಕಾರ ಇರಲಿ, ಇಲ್ಲದಿರಲಿ ಜನರ ನಡುವೆ ಇದ್ದಾರೆ. ಧರ್ಮ, ಪ್ರಾಮಾಣಿಕತೆ, ನೈತಿಕತೆ ಆಧಾರದಲ್ಲಿ ಆಡಳಿತ ನಡೆಸಿದ್ದಾರೆ. ಈಗ ಚುನಾವಣೆ ನಡೆದರೂ ಭಾರೀ ಅಂತರದಿಂದ ಗೆಲ್ಲುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಇದೀಗ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರಲಿದ್ದು, ಚುನಾವಣೆ ಎದುರಿಸಲು ಸಜ್ಜಾಗಿ ಎಂದು ಮನವಿ ಮಾಡಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಎಂದು ಬಲವಂತ ಮಾಡಲ್ಲ. ಯೋಗ್ಯರು, ಜನರ ಬಗ್ಗೆ ಪ್ರೀತಿ, ವಿಶ್ವಾಸ ಇರುವವರಿಗೆ ಟಿಕೆಟ್ ನೀಡೋಣ. ಈ ಚುನಾವಣೆಯಲ್ಲಿ ಹಣ ಹಂಚಿ, ಕುಡಿಸಿ ಓಟು ಕೇಳುವುದು ಬೇಡ. ದೇಶಕ್ಕೀಗ ಪ್ರಾಮಾಣಿಕ ಮತದಾರರು ಅನಿವಾರ್ಯ. ತಾಲೂಕಿನಲ್ಲಿ ಹಲವು ಸಹಕಾರ ಸಂಘಗಳಲ್ಲಿ ನಮ್ಮ ಪಕ್ಷದ ಬೆಂಬಲಿಗರಿದ್ದಾರೆ. ಮುಂದೆಯೂ ಹಲವು ಸಂಘಗಳ ಅಧಿಕಾರ ಹಿಡಿಯುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ತಾಲೂಕು ಉಸ್ತುವಾರಿ ರಾಮಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ವಿವಿಧ ಘಟಕಗಳ ಪದಾಧಿಕಾರಿಗಳು, ನಾಮ ನಿರ್ದೇಶಿತ ಸದಸ್ಯರನ್ನು ಗೌರವಿಸಲಾಯಿತು. ಬ್ಲಾಕ್ ಅಧ್ಯಕ್ಷ ನಾರಾಯಣ್, ಪ್ರೇಮಕುಮಾರ್, ಕಾರ್ಯಾಧ್ಯಕ್ಷ ಪುಟ್ಟರಾಜು, ಮುಖಂಡರಾದ ಸೋಮಶೇಖರ್, ಜಯರಾಮ್ ಅಣ್ಣಯ್ಯ ನಾಯಕ, ಸುರೇಶ್ ಇತರರಿದ್ದರು.

ಅನ್ನಭಾಗ್ಯ ಅಕ್ಕಿ ಮಾರಾಟ ಕಂಡು ಬಂದರೆ

# ಬಿಪಿಎಲ್ ಕಾರ್ಡ್ ರದ್ದು ಪಡಿಸಲು ಸರ್ಕಾರ ಆದೇಶ

ತಿ.ನರಸೀಪುರ, ಮಾ.23– ಅನ್ನಭಾಗ್ಯ ಯೋಜನೆಯಡಿ ಸರ್ಕಾರ ನೀಡುತ್ತಿರುವ ಅಕ್ಕಿ ಮಾರಾಟ ಕಂಡು ಬಂದರೆ ಅಂತಹ ಕುಟುಂಬದ ಬಿಪಿಎಲ್ ಕಾರ್ಡ್ ರದ್ದುಪಡಿಸಲು ಸರ್ಕಾರ ಆದೇಶಿಸಿದ್ದು, ಬಡವರು ಅಕ್ಕಿಯನ್ನು ಊಟಕ್ಕೆ ಬಳಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹುಣಸೂರು ಬಸವಣ್ಣ ತಿಳಿಸಿದರು.

ತಾಲೂಕಿನ ಹುಣಸೂರು ಗ್ರಾಮದಲ್ಲಿ ಅನ್ನಭಾಗ್ಯ ಯೋಜನೆಯಡಿ ನೀಡಲಾಗುವ ಹೆಚ್ಚುವರಿ 5 ಕೆಜಿ ಅಕ್ಕಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರು ಹಸಿವಿನಿಂದ ಬಳಲಬಾರದೆಂಬ ಉದ್ದೇಶದಿಂದ ಅನ್ನಭಾಗ್ಯ ಯೋಜನೆಯಡಿ ಉಚಿತವಾಗಿ ಅಕ್ಕಿ ವಿತರಿಸುತ್ತಿದ್ದಾರೆ. ಇದರೊಂದಿಗೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಬಡವರ, ಹಿಂದುಳಿದ ಪರ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದರು.


ಹೆಚ್ಚುವರಿ 5 ಕೆಜಿ ಅಕ್ಕಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ರಾಜ್ಯದಲ್ಲಿ ಪ್ರತಿ ತಿಂಗಳು 10 ಕೆಜಿ ಅಕ್ಕಿ ನೀಡಿ ಉಳಿದ 5 ಕೆಜಿ ಅಕ್ಕಿಗೆ ಬದಲಾಗಿ 175 ರೂ.ಗಳನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತಿತ್ತು ಆದರೆ ಮಾರ್ಚ್ ತಿಂಗಳಿಂದ ಹಣಕ್ಕೆ ಬದಲು 5 ಕೆಜಿ ಅಕ್ಕಿ ಕೊಡಲು ಸಿದ್ದರಾಮಯ್ಯ ಸರ್ಕಾರ ನಿರ್ಧಾರ ಮಾಡಿದೆ. ಇದರಿಂದ ಬಡವರು 3 ಹೊತ್ತು ಊಟ ಮಾಡಬಹು ದಾಗಿದೆ ಎಂದರು. ನ್ಯಾಯಬೆಲೆ ಅಂಗಡಿ ಮಾಲೀಕರು ನಿಯಮಾನುಸಾರ ಅಕ್ಕಿ ವಿತರಿಸಬೇಕು. ಹಿಂದುಳಿದವರು, ಅಲ್ಪ ಸಂಖ್ಯಾತರ ಬಗ್ಗೆ ಸಿದ್ದರಾಮಯ್ಯ ಅಪಾರ ಕಾಳಜಿ ಹೊಂದಿದ್ದಾರೆ ಎಂದರು. ನ್ಯಾಯಬೆಲೆ ಅಂಗಡಿ ಮಾಲೀಕ ಬಿ.ಮಂಟೇಲಿಂಗಪ್ಪ, ಗ್ರಾಪಂ ಅಧ್ಯಕ್ಷ ನಿಂಗರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಭಾಗ್ಯ, ಮಹದೇವ, ಶಿವರಾಜು, ಕಾಂಗ್ರೆಸ್ ಮುಖಂಡ ಪುಟ್ಟರಾಜು, ಚಿಕ್ಕಸ್ವಾಮಿ, ರಾಜಪ್ಪ, ಸತೀಶ್, ಸಿದ್ದರಾಜು, ಮುದ್ದಪ್ಪ ಇತರರಿದ್ದರು.

# ಅರಣ್ಯ ಹಕ್ಕು ಸಮಿತಿ ನಾಮಫಲಕ ಅನಾವರಣ


ಲಕ್ಷ್ಮಿಪುರ ಹಾಡಿಯಲ್ಲಿ ನಾಮಫಲಕ ಮತ್ತು ಬಿರ್ಸಾಮುಂಡಾ ಭಾವಚಿತ್ರ ಅನಾವರಣ ಮಾಡಲಾಯಿತು.

ಹೆಚ್.ಡಿ.ಕೋಟೆ, ಮಾ.23– ಬ್ರಿಟಿಷ್ ಸರ್ಕಾರ 1927ರಲ್ಲಿ ಭಾರತದ ಅರಣ್ಯ ಕಾಯ್ದೆ ಜಾರಿಗೊಳಿಸಿ ಕಾಡಿನಲ್ಲಿದ್ದ ಆದಿವಾಸಿಗಳ ಮೇಲೆ ದಬ್ಬಾಳಿಕೆ ನಡೆಸಿತು ಎಂದು ಬುಡಕಟ್ಟು ಕೃಷಿಕರ ಸಂಘ ಮತ್ತು ಗ್ರೀನ್ ಇಂಡಿಯಾ ಟ್ರಸ್ಟ್ ಅಧ್ಯಕ್ಷ ವಿಜಯಕುಮಾರ್ ತಿಳಿಸಿದರು.

ತಾಲೂಕಿನ ಲಕ್ಷ್ಮಿಪುರ ಹಾಡಿಯಲ್ಲಿ ಅರಣ್ಯ ಹಕ್ಕು ಸಮಿತಿ ನಾಮಫಲಕ ಮತ್ತು ಬಿರ್ಸಾ ಮುಂಡಾ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದ ಅವರು, ಮತ್ತೆ 1972ರಲ್ಲಿ ಸರ್ಕಾರ ಅರಣ್ಯ ಕಾಯ್ದೆ ಜಾರಿ ತಂದು ಕಾಡಿನೊಳಗೆ ಕಾಡು ಪ್ರಾಣಿಗಳ ಜೊತೆ ಸ್ವಚ್ಛಂದವಾಗಿದ್ದ ಆದಿವಾಸಿಗಳಿಗೆ ಯಾವುದೇ ಮೂಲ ಸೌಕರ್ಯ ಕಲ್ಪಿಸದೆ ಕಾಡಿನಿಂದ ಹೊರಗೆ ಕಳಿಸಿದ್ದಾರೆ. 1980ರಲ್ಲಿ ಅರಣ್ಯ ಹುಲಿ ಯೋಜನೆ ಕಾನೂನು ತಂದು ಆದಿವಾಸಿಗಳನ್ನು ಅತಂತ್ರ ಸ್ಥಿತಿಗೆ ತರಲಾಯಿತು. ಈಗ ನಿರಂತರ ಹೋರಾಟದ ಫಲವಾಗಿ ಪಾರಂಪರಿಕ ಬುಡಕಟ್ಟು ಅರಣ್ಯ ಹಕ್ಕು ಕಾಯ್ದೆ 2006 ನಿಯಮ, 2007 ಮತ್ತು 2008 ತಿದ್ದುಪಡಿ 2012ರ ಕಾಯ್ದೆ ಪ್ರಕಾರ ಜಮೀನಿಗೆ 'ಎ' ಫಾರಂ ಅರ್ಜಿ, ಸಮುದಾಯದ ಹಕ್ಕುಗಳಿಗಾಗಿ 'ಬಿ' ಫಾರಂ ಅರ್ಜಿ, ಅರಣ್ಯ ಸಂಪನ್ಮೂಲ ಹಕ್ಕುಗಾಗಿ 'ಸಿ' ಫಾರಂ ಅರ್ಜಿಗಳನ್ನು ಭರ್ತಿಮಾಡಿ ಹಾಡಿ ಸಮಿತಿ ಸಭೆಯಲ್ಲಿ ಅನುಮೋದನೆ ಮಾಡುವ ಬಗ್ಗೆ ತಿಳಿಸಲಾಯಿತು ಎಂದರು.

ಈ ವೇಳೆ ನೂರಲಕುಪ್ಪೆ ಗ್ರಾಪಂ ಅಧ್ಯಕ್ಷೆ ಸುನೀತಾ, ಹಾಡಿ ಅರಣ್ಯ ಹಕ್ಕು ಸಮಿತಿ ಅಧ್ಯಕ್ಷ ವೆಂಕಟಯ್ಯ, ಪಿಡಿಓ ಪ್ರಭಾಕರ್, ಗ್ರಾಪಂ ಸದಸ್ಯರಾದ ಸೋಮಣ್ಣ, ಮಹದೇವಸ್ವಾಮಿ, ಗ್ರೀನ್ ಇಂಡಿಯಾ ಟ್ರಸ್ಟ್ ಸಂಯೋಜಕ ಡಿ.ಎಂ.ಬಸವರಾಜು, ಚಿಕ್ಕನಾಯಕ, ಜ್ಯೋತಿ, ನಿಸರ್ಗ ಫೌಂಡೇಶನ್ ಸಂಸ್ಥೆ ವೆಂಕಟಯ್ಯ, ರತ್ನಮ್ಮ, ಮಹದೇವಮ್ಮ, ರಘು ಇದ್ದರು.

# ಸಂಗೊಳ್ಳಿ ರಾಯಣ್ಣನ ಶೌರ್ಯ ಯುವಕರಿಗೆ ಮಾದರಿ

ತಿ.ನರಸೀಪುರ, ಮಾ.23– ಕ್ರಾಂತಿವೀರ, ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣನ ಶೌರ್ಯ, ಪ್ರಾಮಾಣಿಕತೆ ಹಾಗೂ ನಿಷ್ಠೆ ಇಂದಿನ ಯುವಕರಿಗೆ ಮಾದರಿ ಎಂದು ಗ್ರಾಪಂ ಮಾಜಿ ಅಧ್ಯಕ್ಷ ರಾಘವೇಂದ್ರ ತಿಳಿಸಿದರು.

ತಾಲೂಕಿನ ಕುಪ್ಯ ಗ್ರಾಮದಲ್ಲಿ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆಯಿಂದ ನಿರ್ಮಾಣಗೊಂಡಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಗೊಳ್ಳಿ ರಾಯಣ್ಣ ಸಮುದಾಯದ ಎಲ್ಲಾ ವರ್ಗಗಳ ಜನರನ್ನು ಒಟ್ಟುಗೂಡಿಸಿ, ಯುವಸೈನ್ಯ ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದ ಯೋಧ. ನಾವು ಹುತಾತ್ಮರನ್ನು ಮರೆಯಬಾರದು. ಅವರನ್ನು ಸದಾ ಸ್ಮರಿಸಬೇಕು ಎಂದರು. ಗ್ರಾಪಂ ಮಾಜಿ ಅಧ್ಯಕ್ಷೆ ಭಾಗ್ಯಮ್ಮ ಮಾತನಾಡಿದರು.

**ಅದ್ಧೂರಿ ಮೆರವಣಿಗೆ:** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ರಾಯಣ್ಣರ 800 ಕೆಜಿ ತೂಕದ ಕಂಚಿನ ಪ್ರತಿಮೆಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಈ ವೇಳೆ ಯುವಕರು, ಬಾಲಕರು ರಾಯಣ್ಣ ಪರ ಜೈಕಾರ ಕೂಗಿದರು. ಗ್ರಾಮದ ಪ್ರತಿ ಮನೆಯಲ್ಲೂ ರಾಯಣ್ಣನ ಪ್ರತಿಮೆಗೆ ಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ 2 ಗಂಟೆ ವೇಳೆಗೆ ಗ್ರಾಮದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪ್ರತಿಮೆ ಪ್ರತಿಷ್ಠಾಪಿಸಲಾಯಿತು.


ಸಂಗೊಳ್ಳಿ ರಾಯಣ್ಣ ಪ್ರತಿಮೆ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀಜೈಭುವನೇಶ್ವರಿ ಕನ್ನಡ ಯುವ ವೇದಿಕೆ ಗೌರವಾಧ್ಯಕ್ಷ ಕೆ.ಟಿ.ರಮೇಶ್, ಅಧ್ಯಕ್ಷ ಡಿ. ಶಂಕರ್, ಖಜಾಂಚಿ ಎಂ.ಚಂದ್ರ, ಕಾರ್ಯದರ್ಶಿ ಎಂ.ನಾಗೇಂದ್ರ ಪ್ರಸಾದ್, ಸಹ ಕಾರ್ಯದರ್ಶಿ ಎನ್.ರಮೇಶ್, ಸಂಘಟನಾ ಕಾರ್ಯದರ್ಶಿ ಗೋವಿಂದ, ಉಪಾಧ್ಯಕ್ಷ ಸೋಮಣ್ಣ, ಕಾರ್ಯಾಧ್ಯಕ್ಷ ಮಹೇಂದ್ರ, ನಿರ್ದೇಶಕರಾದ ನಿರಂಜನ, ಬಸವರಾಜು, ದಯಾನಂದ, ಶಿವಣ್ಣ, ಬಿ.ನಾಗರಾಜು, ಎಂ.ರಾಜೇಶ್, ಪುಟ್ಟರಾಜು, ಸಿದ್ದೇಶ್, ಭಾಸ್ಕರ್, ಪುಟ್ಟಸ್ವಾಮಿ, ಕೆ.ಶ್ರೀಧರ್, ಎಸ್.ರೇವಣ್ಣ, ಎನ್.ಸುರೇಶ್, ವಾಸು, ಗಣೇಶ್, ನಟರಾಜು, ಎಂ.ಮಹದೇವ, ಗ್ರಾಪಂ ಅಧ್ಯಕ್ಷ ಗವಿಸಿದ್ದಯ್ಯ, ಗ್ರಾಪಂ ಸದಸ್ಯರು ಹಾಗೂ ಕುಪ್ಯ ಗ್ರಾಮಸ್ಥರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಮ್ಮೇಳನಕ್ಕೆ ತೆರಳಿದ ಲಿಂಗಾಯತ ಮುಖಂಡರು



ಮೈಸೂರಿನಲ್ಲಿ ನಡೆದ ಶರಣ ಸಾಹಿತ್ಯ ಸಮ್ಮೇಳನಕ್ಕೆ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿಯಿಂದ 50ಕ್ಕೂ ಹೆಚ್ಚು ವೀರಶೈವ ಲಿಂಗಾಯತ ಸಮಾಜದ ಬಂಧುಗಳು ತೆರಳಿದರು. ಈ ವೇಳೆ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಕುಮಾರಸ್ವಾಮಿ, ಗ್ರಾಮದ ಶಿವಕುಮಾರ ಸ್ವಾಮಿಗಳ ಸಂಘದ ಅಧ್ಯಕ್ಷ ತೋಟಪ್ಪಶೆಟ್ಟಿ, ಮಹದೇವ್, ಶಾಂತಕುಮಾರ್, ಶಂಕರ್, ಮಹದೇವಪ್ಪ ಗಿರೀಶ್, ಶಂಕರ್, ಶಿವಕುಮಾರ್, ವೀರಪ್ಪ ಮಲ್ಲೇಶ್ ಇನ್ನಿತರರಿದ್ದರು.

# ಸಾಹಿತಿ ಮುಳ್ಳೂರು ನಾಗರಾಜ್ ರಸ್ತೆ ಉದ್ಘಾಟನೆ

ನಂಜನಗೂಡು, ಮಾ.23– ಸಾಹಿತಿ ಮುಳ್ಳೂರು ನಾಗರಾಜ್ ಅವರು ಅಂಬೇಡ್ಕರ್ ಅವರ ತತ್ವ, ಆದರ್ಶಗಳಂತೆ ನಡೆದು ಶೋಷಿತರ ಪರ ಹಲವು ಹೋರಾಟ ನಡೆಸಿ ಜನಮಾನಸದಲ್ಲಿ ಉಳಿದಿದ್ದಾರೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಸಾಹಿತಿ ಮುಳ್ಳೂರು ನಾಗರಾಜ್ ರಸ್ತೆ ಉದ್ಘಾಟಿಸಿ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಗರದ ಭಾರ್ಗವಿ ಚಿತ್ರಮಂದಿರದಿಂದ ಊಟಿ ರಸ್ತೆ ಚರ್ಚ್‌ವರೆಗಿನ ರಸ್ತೆಗೆ ಸಾಹಿತಿ ಮುಳ್ಳೂರು ನಾಗರಾಜ್ ಹೆಸರನ್ನು ನಾಮಕರಣ ಮಾಡಲಾಗಿದೆ. ಅವರ ಸಾಹಿತ್ಯದಿಂದ ಸ್ಫೂರ್ತಿ ಪಡೆದ ಯುವ ಜನತೆ, ಶೋಷಿತರ ಪರವಾಗಿ ಅವರು ನಡೆಸಿದ ಹೋರಾಟ ಸ್ಮರಿಸುತ್ತಾರೆ. ಅವರು ಕಾಲವಾದರೂ ಸಹ ಅವರ ಹೋರಾಟದ ದಾರಿ ಇನ್ನೂ ಜೀವಂತವಾಗಿದೆ ಎಂದರು.

ಜಾನಪದ ಕಲಾವಿದ ನರಸಿಂಹಮೂರ್ತಿ, ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ್ ಮಾತನಾಡಿದರು. ಮುಳ್ಳೂರು ನಾಗರಾಜ್ ಪತ್ನಿ ಪುಟ್ಟಲಕ್ಷ್ಮಮ್ಮ ಅವರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಕೇಶವಮೂರ್ತಿ, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹೆನಾಬಾನು, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ರಾಮು, ಜಿಪಂ ಮಾಜಿ ಸದಸ್ಯರಾದ ಪುಷ್ಪ, ಶಶಿರೇಖಾ, ರಂಗಸ್ವಾಮಿ, ಎಂ.ಎಸ್.ಶೇಖರ್ ಇದ್ದರು.



ಸಾಹಿತಿ ಮುಳ್ಳೂರು ನಾಗರಾಜ್ ರಸ್ತೆಯನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

# ದೇವರಸನಹಳ್ಳಿ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಮಾ.23– ಕಳೆದ 19 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ತಾಲೂಕಿನ ದೇವರಸನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯನ್ನು 10 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ದೇವರಸನಹಳ್ಳಿ ಗ್ರಾಮದಲ್ಲಿ 10 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮಗಳಿಗೆ ಮೂಲ ಸೌಕರ್ಯ ಒದಗಿಸುವುದು ಜನಪ್ರತಿನಿಧಿಗಳ ಜವಾಬ್ದಾರಿ. ಆದರೆ ದೇವರಸನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಶಿಥಿಲಗೊಂಡು ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ರಸ್ತೆ ಅಭಿವೃದ್ಧಿಪಡಿಸುವಂತೆ ಸಾಕಷ್ಟು ಬಾರಿ ಇಲ್ಲಿನ ಜನರು ಬೇಡಿಕೆ ಇಟ್ಟಿದ್ದರೂ ಅಭಿವೃದ್ಧಿಗೆ ಮುಂದಾಗಿರಲಿಲ್ಲ. ನನ್ನ ತಂದೆ ಆರ್.ಧ್ರುವನಾರಾಯಣ್ ಅವರು ಅಭಿವೃದ್ಧಿ ಮಾನದಂಡವಾಗಿಟ್ಟುಕೊಂಡು ಹೇಗೆ ಸೇವೆ ಸಲ್ಲಿಸಿದ್ದರೋ ಹಾಗೆ ನನ್ನದು ರಾಜಕೀಯ ಕಡಿಮೆ. ಅಭಿವೃದ್ಧಿ ಜಾಸ್ತಿ. ಹೀಗಾಗಿ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದೇನೆ ಎಂದರು.


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

**200 ಕೋಟಿಗೂ ಹೆಚ್ಚು ಅನುದಾನ:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಂಜನಗೂಡು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿದ್ದಾರೆ. ಇದರ ಫಲವಾಗಿ ಈಗಾಗಲೇ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 25 ಕೋಟಿ ಸೇರಿದಂತೆ ಕ್ಷೇತ್ರದಲ್ಲಿ 200 ಕೋಟಿಗಿಂತಲೂ ಹೆಚ್ಚಿನ ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ತಡೆ ಇಲ್ಲದಂತೆ ನಡೆಯುತ್ತಿವೆ. ಅಲ್ಲದೆ ಗ್ಯಾರಂಟಿ ಯೋಜನೆಗಳು ಜನರು ಬದುಕು ಕಟ್ಟಿಕೊಳ್ಳಲು ಆಧಾರ ಸ್ತಂಭವಾಗಿವೆ. ನಮ್ಮ ಸರ್ಕಾರ ಸದಾ ಜನತೆ ಒಳತಿಗಾಗಿ ಕಾರ್ಯ ನಿರತವಾಗಿದೆ ಎಂದರು.

ನಾವು ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಆಶೀರ್ವಾದದಿಂದ ರಾಜ್ಯದಲ್ಲೇ ಮೊದಲ ಬಾರಿಗೆ ಅಪೆಂಡಿಕ್ಸ್–ಈ ಅನುದಾನದ ಅಡಿ ಕ್ಷೇತ್ರಕ್ಕೆ 15 ಕೋಟಿ ಅನುದಾನ ಮಂಜೂರು ಮಾಡಿಸಿದ್ದೇನೆ ಅದರಲ್ಲಿ 10 ಕೋಟಿ ವೆಚ್ಚದಲ್ಲಿ ನಗರದ ಹಳ್ಳದ ಕೇರಿಯಿಂದ ದೇವರಸನಹಳ್ಳಿ, ಉಪ್ಪಿನಹಳ್ಳಿ ಗ್ರಾಮದವರೆಗೆ 5.1 ಕಿಮೀ ಉದ್ದದ ರಸ್ತೆ ಅಭಿವೃದ್ಧಿ ಮಾಡಲಾಗುವುದು. ಅಲ್ಲದೇ ದೇವರಸನಹಳ್ಳಿ ಮತ್ತು ಉಪ್ಪಿನಹಳ್ಳಿ ಗ್ರಾಮ ಸೇರಿದಂತೆ 2300 ಮೀಟರ್ ಸಿಸಿ ಚರಂಡಿ ನಿರ್ಮಾಣ ಮಾಡಲಾಗುವುದು. ಹಾಗೂ 12 ಕಡೆ ಕಲ್ವರ್ಟ್ ನಿರ್ಮಾಣ ಸೇರಿದಂತೆ ಸುಸಜ್ಜಿತ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಕಾಮಗಾರಿ ಶೀಘ್ರ ಮುಕ್ತಾಯಗೊಳ್ಳಲಿದ್ದು ಈ ಭಾಗದ ಜನರ ಬಹು ವರ್ಷದ ಬೇಡಿಕೆ ಈಡೇರಲಿದೆ ಎಂದರು.

> ಉಪ ಚುನಾವಣೆ ಸಂದರ್ಭ ದೇವರಸನಹಳ್ಳಿ ರಸ್ತೆ ಅಭಿವೃದ್ಧಿಗಾಗಿ 2 ಕೋಟಿ ಅನುದಾನ ಮೀಸಲಿಡಲಾಗಿತ್ತು. ಆದರೆ 2018ರ ಚುನಾವಣೆ ನಂತರ ಅದನ್ನು ಬೇರಡೆಗೆ ವರ್ಗಾವಣೆ ಮಾಡಲಾಯಿತು. ಜೊತೆಗೆ ಗ್ರಾಮ ವಿಕಾಸ ಯೋಜನೆಯಡಿ ದೇವರಹಸನಹಳ್ಳಿ ಗ್ರಾಮಕ್ಕೆ ಮಂಜೂರಾಗಿದ್ದ ಒಂದು ಕೋಟಿ ಅನುದಾನ ಸರಿಯಾಗಿ ಬಳಕೆಯಾಗಲಿಲ್ಲ. ನಂಜನಗೂಡಿನ ಪಕ್ಕದಲ್ಲಿರುವ ದೇವರಸನಹಳ್ಳಿ ಗ್ರಾಮದ ಅಭಿವೃದ್ಧಿಗಾಗಿ ಶಾಸಕ ದರ್ಶನ್ ಅವರು ವಿಶೇಷ ಆಸಕ್ತಿ ವಹಿಸಿದ್ದು 10 ಕೋಟಿ ಅನುದಾನವನ್ನು ಮುಖ್ಯ ರಸ್ತೆ ಅಭಿವೃದ್ಧಿಗೆ ನೀಡಿದ್ದಾರೆ. ಜೊತೆಗೆ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಒಕ್ಕಲಿಗ ಭವನಕ್ಕೆ 10 ಲಕ್ಷ ಅನುದಾನ ನೀಡುವುದು ಸೇರಿದಂತೆ ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. – **ಕೇಶವಮೂರ್ತಿ**, ಮಾಜಿ ಶಾಸಕ.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ವಿಧಾನಸಭಾ ಉಸ್ತುವಾರಿ ಸೋಮೇಶ್, ಮುಖಂಡರಾದ ಶ್ರೀನಿವಾಸಮೂರ್ತಿ, ವಿಜಯ್ ಕುಮಾರ್, ನಾಗರಾಜಯ್ಯ, ಇಬ್ಬಾಲ ಕೆಂಡಗಣ್ಣಪ್ಪ ಸಿದ್ದಲಿಂಗು, ರಾಜೇಶ್, ಮಹದೇವಸ್ವಾಮಿ, ಅಶೋಕ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಚಂದನ್‌ಗೌಡ, ಗ್ರಾಪಂ ಅಧ್ಯಕ್ಷೆ ಸೌಭಾಗ್ಯ, ಉಪಾಧ್ಯಕ್ಷ ನಂಜಪ್ಪ, ಗ್ರಾಪಂ ಸದಸ್ಯರಾದ ಮುದ್ದುಮಾದಶೆಟ್ಟಿ, ನಾರಾಯಣಸ್ವಾಮಿ, ದೊಡ್ಡಮ್ಮ, ಟಿಎಪಿಸಿಎಂಎಸ್ ಉಪಾಧ್ಯಕ್ಷ ರಾಜು, ತಾಪಂ ಇಓ ಜೆರಾಲ್ಡ್ ರಾಜೇಶ್, ಲೋಕೋಪಯೋಗಿ ಇಲಾಖೆ ಎಇಇ ಬಸವರಾಜು, ಎಇ ರೇವಣ್ಣ ಸೇರಿದಂತೆ ಇತರರಿದ್ದರು.

# ಶ್ರೀಶನೇಶ್ವರಸ್ವಾಮಿ ಪೂಜಾ ಮಹೋತ್ಸವ


ಶ್ರೀಶನೇಶ್ವರಸ್ವಾಮಿ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಮಾ.23– ಪಟ್ಟಣದಲ್ಲಿ ಶ್ರೀಶನೇಶ್ವರಸ್ವಾಮಿ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಶ್ರೀಶನೇಶ್ವರಸ್ವಾಮಿ ಹಾಗೂ ನವಗ್ರಹ ದೇವಸ್ಥಾನವನ್ನು ತಳಿರು ತೋರಣ, ರಂಗೋಲಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯೇ ದೇವಾಲಯದಲ್ಲಿ ಹೋಮ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಮಹಾ ಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ತೊಗಟವೀರ ಕ್ಷತ್ರಿಯ ಸಮಾಜದಿಂದ ನಡೆದ ಪೂಜಾ ಮಹೋತ್ಸವದಲ್ಲಿ ಎಲ್ಲಾ ಕೋಮಿನ ಯಜಮಾನರು, ಭಕ್ತರು ಪಾಲ್ಗೊಂಡಿದ್ದರು. ನಂತರ ಶ್ರೀಚೌಡೇಶ್ವರಿ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ಸಂಜೆ ಶ್ರೀಶನೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಪೂಜಾ ಕಾರ್ಯಕ್ರಮವನ್ನು ಪುರೋಹಿತ್ ಗೋಪಿನಾಥ್, ಹರೀಶ್, ಸುಕೃತ್ ನೆರವೇರಿಸಿದರು.

## ಐಪಿಎಲ್ ಹಂಗಾಮ

# 44 ರನ್‌ಗಳಿಂದ ರಾಜಸ್ಥಾನ್ ಮಣಿಸಿದ ಹೈದರಾಬಾದ್



ಹೈದರಾಬಾದ್, ಮಾ.23– ಕಳೆದ ಸೀಸನ್‌ನಲ್ಲಿ ಪ್ರಚಂಡ ಬ್ಯಾಟಿಂಗ್ ಮೂಲಕ ಸುದ್ದಿಯಾಗಿದ್ದ ಸನ್‌ರೈಸರ್ ಹೈದರಾಬಾದ್ 2025ರ ಐಪಿಎಲ್‌ನಲ್ಲೂ ಇದೇ ಅಬ್ಬರವನ್ನು ಮುಂದುವರಿಸಿದೆ. ಅಭಿಷೇಕ್ ಶರ್ಮ–ಟ್ರ್ಯಾವಿಸ್ ಹೆಡ್ ಜೋಡಿಯ ಸ್ಫೋಟಕ ಆರಂಭ, ಇಶಾನ್ ಕಿಶನ್ ಅವರ ಸಿಡಿಲಬ್ಬರ ಶತಕ ಸಾಹಸದಿಂದ ತವರಿನ ಅಂಗಳದಲ್ಲಿ ರನ್ ಪ್ರವಾಹವನ್ನೇ ಹರಿಸಿದ ಹೈದರಾಬಾದ್, 44 ರನ್ನುಗಳಿಂದ ರಾಜಸ್ಥಾನ್ ರಾಯಲ್ಸ್ ತಂಡವನ್ನು ಮಣಿಸಿತು. ಎದುರಾಳಿ ತಂಡಗಳಿಗೆ ಅಪಾಯದ ಸೂಚನೆಯನ್ನು ರವಾನಿಸಿತು.

ಈ ಬಾರಿ 300 ರನ್ ತನ್ನ ಗುರಿ ಎಂದು ಹೇಳಿಕೊಂಡಿದ್ದ ಹೈದರಾಬಾದ್, ರಾಜಸ್ಥಾನದಿಂದ ಪಡೆದ ಬ್ಯಾಟಿಂಗ್ ಅವಕಾಶವನ್ನು ಎರಡೂ ಕೈಗಳಲ್ಲಿ ಬಾಚಿಕೊಂಡಿತು. ಮುನ್ನೂರರ ಗಡಿಯತ್ತ ಓಟವನ್ನೂ ಬೆಳೆಸಿತು. ಅಂತಿಮವಾಗಿ 6ಕ್ಕೆ 286ರ ತನಕ ಸಾಗಿ ನಿಂತಿತು. ಇದು ಐಪಿಎಲ್ ಚರಿತ್ರೆಯ 2ನೇ ಸರ್ವಾಧಿಕ ಗಳಿಕೆ. ಮೊದಲ ಸ್ಥಾನವನ್ನೂ ಹೈದರಾಬಾದ್ ತಂಡವೇ ಅಲಂಕರಿಸಿದೆ. ಕಳೆದ ವರ್ಷ ಆರ್‌ಸಿಬಿ ವಿರುದ್ಧ 3ಕ್ಕೆ 287 ರನ್ ಗಳಿಸಿದ್ದು ದಾಖಲೆ. ಇದರೊಂದಿಗೆ ಐಪಿಎಲ್ ಚರಿತ್ರೆಯ ಟಾಪ್–5 ಸ್ಕೋರ್‌ಗಳ ಯಾದಿಯಲ್ಲಿ ಹೈದರಾಬಾದ್ ನಾಲ್ಕನ್ನು ಅಲಂಕರಿಸಿದಂತಾಯಿತು.

ಹೈದರಾಬಾದ್ ಟಿ20 ಇತಿಹಾಸದಲ್ಲಿ ಅತ್ಯಧಿಕ 4 ಸಲ 250 ಪ್ಲಸ್ ರನ್ ಪೇರಿಸಿದ ದಾಖಲೆಯನ್ನೂ ತನ್ನದಾಗಿಸಿಕೊಂಡಿತು. ಸರ್ರೆ ಕೌಂಟಿ ಮತ್ತು ಭಾರತ ತಂಡ ತಲಾ 3 ಬಾರಿ ಈ ಸಾಧನೆಗೈದು ದ್ವಿತೀಯ ಸ್ಥಾನಿಯಾಗಿವೆ.

ಆರಂಭಿಕ ಆಘಾತಕ್ಕೆ ಸಿಲುಕಿದರೂ ದಿಟ್ಟ ಜವಾಬು ನೀಡಿದ ರಾಜಸ್ಥಾನ್ 6 ವಿಕೆಟಿಗೆ 244 ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ಕೀಪರ್ ಧ್ರುವ ಜುರೆಲ್ 35 ಎಸೆತಗಳಿಂದ ಸರ್ವಾಧಿಕ 70 ರನ್ (5 ಫೋರ್, 6 ಸಿಕ್ಸರ್), ಸಂಜು ಸ್ಯಾಮ್ಸನ್ 37 ಎಸೆತಗಳಿಂದ 66 ರನ್ ಸಿಡಿಸಿದರು (7 ಬೌಂಡರಿ, 4 ಸಿಕ್ಸರ್). ಕೊನೆಯಲ್ಲಿ ಹೆಟ್‌ಮೈರ್ (42), ಶುಭಂ ದುಬೆ ಅಜೇಯ 34 ರನ್ ಬಾರಿಸಿ ಮಿಂಚಿದರು.

ಸನ್‌ರೈಸರ್ ಹೈದರಾಬಾದ್ ಪರ ಅಭಿಷೇಕ್ ಶರ್ಮ 24, ಟ್ರ್ಯಾವಿಸ್ ಹೆಡ್ 67, ಇಶಾನ್ ಕಿಶನ್ ಔಟಾಗದೆ 106, ನಿತೀಶ್ ರೆಡ್ಡಿ 30, ಹೆನ್ರಿಚ್ ಕ್ಲಾಸೆನ್ 34, ಅನಿಕೇತ್ ವರ್ಮ 7 ರನ್ ಗಳಿಸಿದರೆ, ಈ ತಂಡಕ್ಕೆ 18 ಇತರೆ ರನ್‌ಗಳು ಲಭಿಸಿತು.

ರಾಜಸ್ಥಾನ್ ರಾಯಲ್ಸ್ ಪರ ತುಷಾರ್ ದೇಶಪಾಂಡೆ 3, ಮಹೀಶ್ ತೀಕ್ಷಣ 2, ಸಂದೀಪ್ ಶರ್ಮ 1 ವಿಕೆಟ್ ಪಡೆದರು.

ರಾಜಸ್ಥಾನ್ ರಾಯಲ್ಸ್ ಪರ ಯಶಸ್ವಿ ಜೈಸ್ವಾಲ್ 1, ಸಂಜು ಸ್ಯಾಮ್ಸನ್ 66, ರಿಯಾನ್ ಪರಾಗ್ 4, ನಿತೀಶ್ ರಾಣಾ 11, ಧ್ರುವ ಜುರೆಲ್ 70, ಶಿಮ್ರಾನ್ ಹೆಟ್ ಮೈರ್ 42, ಶುಭಂ ದುಬೆ ಔಟಾಗದೆ 34, ಜೋಫ್ರಾ ಆರ್ಚರ್ ಔಟಾಗದೆ 1 ರನ್ ಗಳಿಸಿದರು. ಈ ತಂಡಕ್ಕೆ 13 ಇತರೆ ರನ್‌ಗಳು ಲಭಿಸಿತು. ಸನ್‌ರೈಸರ್ ಹೈದರಾಬಾದ್ ಮೊಹಮ್ಮದ್ ಶಮಿ 1, ಸಿಮರ್ಜೀತ್ ಸಿಂಗ್ 2, ಆಡಮ್ ಝಂಪಾ 1, ಹರ್ಷಲ್ ಪಟೇಲ್ 2 ವಿಕೆಟ್ ಪಡೆದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | **(ದೂ: 2521923)** |
| ಖಡ್ಗಂ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | **(ದೂ: 2422871)** |
| ಸಲಾರ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | **(ದೂ: 2497199)** |
| ಬಡಾಸ್ ರವಿಕುಮಾರ್ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | **(ಮೊ:9900820093)** |
| ಮಯೂರ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಅಪ್ಪು (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಸ್ತ್ರಂ ದಿ ಸೀಕ್ರೆಟ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಬರ್ಗೆಟ್ ಬಸ್ಯಾ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಫಾರೆಸ್ಟ್(ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಭಗೀರಥ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 2 | ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 3 | ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ. |
| ಸ್ಕ್ರೀನ್ 4 | ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ. |
| ಸ್ಕ್ರೀನ್ 2 | ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ. |
| ಸ್ಕ್ರೀನ್ 3 | ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ರೋಚಕ ಪಂದ್ಯದಲ್ಲಿ ಮುಂಬೈ ವಿರುದ್ಧ ಜಯ ಸಾಧಿಸಿದ ಚೆನ್ನೈ



ಚೆನ್ನೈ, ಮಾ.23–ಕಳೆದ ಬಾರಿ ಕೊನೆಯ ಸ್ಥಾನಕ್ಕೆ ಕುಸಿದಿದ್ದ ಮುಂಬೈ ಇಂಡಿಯನ್ಸ್ 18ನೇ ಐಪಿಎಲ್‌ನಲ್ಲೂ ಸೋಲಿನ ಆರಂಭ ಕಂಡಿದೆ. ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯವನ್ನು 4 ವಿಕೆಟ್‌ಗಳಿಂದ ಕಳೆದುಕೊಂಡಿದೆ.

ಮುಂಬೈ 9 ವಿಕೆಟಿಗೆ 155 ರನ್ ಗಳಿಸಿದರೆ, ಚೆನ್ನೈ 19.1 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 158ರನ್ ಗಳಿಸಿ ಗೆಲುವಿನ ಆರಂಭ ಮಾಡಿತು. ಚೇಸಿಂಗ್ ವೇಳೆ ನಾಯಕ ಋತುರಾಜ್ ಗಾಯಕ್ವಾಡ್ 53 ರನ್ ಹೊಡೆದರೆ, ಒಂದೆಡೆ ನಿಂತು ಕ್ರೀಸ್ ಆಕ್ರಮಿಸಿಕೊಂಡ ರಚಿನ್ ರವೀಂದ್ರ ಔಟಾಗದೆ 65 ರನ್ ಗಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.


ಅಹ್ಮದ್‌ದ್ವಯರಾದ ನೂರ್ ಅಹ್ಮದ್ (4 ವಿಕೆಟ್) ಮತ್ತು ಖಲೀಲ್ ಅಹ್ಮದ್ (3 ವಿಕೆಟ್) ಮುಂಬೈಗೆ ಕಡಿವಾಣ ಹಾಕಿದರು. ಖಲೀಲ್ ಅಹ್ಮದ್ ಮೊದಲ ಓವರ್‌ನಲ್ಲೇ ರೋಹಿತ್ ಶರ್ಮ ಅವರನ್ನು ಶೂನ್ಯಕ್ಕೆ ವಾಪಸ್ ಕಳುಹಿಸಿದರು. ಮುಂದಿನ ಓವರ್‌ನಲ್ಲಿ ನೂತನ ಆಟಗಾರ ರಿಯಾನ್ ರಿಕಲ್ಟನ್ (13) ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಹೀಗೆ 21 ರನ್ನಿಗೆ ಆರಂಭಿಕರಿಬ್ಬರೂ ಪೆವಿಲಿಯನ್ ಸೇರಿಕೊಂಡರು.

4ನೇ ವಿಕೆಟ್‌ಗೆ ಜತೆಗೂಡಿದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ತಿಲಕ್ ವರ್ಮ 51 ರನ್ ಒಟ್ಟುಗೂಡಿಸುವಲ್ಲಿ ಯಶಸ್ವಿಯಾದರು. ತಿಲಕ್ ವರ್ಮ ಸರ್ವಾಧಿಕ 31 ರನ್ (25 ಎಸೆತ, 2 ಬೌಂಡರಿ, 2 ಸಿಕ್ಸರ್) ಮಾಡಿದರೆ, ಸೂರ್ಯಕುಮಾರ್ ಗಳಿಕೆ 29 ರನ್. ಇವರಿಬ್ಬರನ್ನೂ ನೂರ್ ಅಹ್ಮದ್ ಔಟ್ ಮಾಡುವುದರೊಂದಿಗೆ ಚೆನ್ನೈ ಮತ್ತೆ ತಿರುಗಿ ಬಿತ್ತು. ಕೊನೆಯಲ್ಲಿ ದೀಪಕ್ ಚಹರ್ ಸಿಡಿದು ನಿಂತ ಪರಿಣಾಮ ಮುಂಬೈ ಮೊತ್ತ ನೂರೈವತ್ತರ ಗಡಿ ದಾಟಿತು. ಚಹರ್ 15 ಎಸೆತಗಳಿಂದ 28 ರನ್ (2 ಬೌಂಡರಿ, 2 ಸಿಕ್ಸರ್) ಬಾರಿಸಿ ಅಜೇಯರಾಗಿ ಉಳಿದರು.

**ಇಂದಿನ ಪಂದ್ಯ**

**ಡೆಲ್ಲಿ ಕ್ಯಾಪಿಟಲ್ಸ್**
**V/S**
**ಲಕ್ನೋ ಸೂಪರ್ ಜೈಂಟ್ಸ್**
ಸಮಯ: ಸಂಜೆ 7.30
ಸ್ಥಳ: ಡಾ. ವೈ.ಎಸ್. ರಾಜಶೇಖರ್ ರೆಡ್ಡಿ ಮೈದಾನ, ವಿಶಾಖಪಟ್ಟಣ

## ‘ಕಾದ ಕಂಗಳ ಕಂಪನ’, ‘ಪ್ರೀತಿಯೆಂದರೆ’ ಕವನ ಸಂಕಲನ ಬಿಡುಗಡೆ




ಲೇಖಕಿ ಎನ್.ಆರ್.ರೂಪಶ್ರೀ ರಚಿತ ‘ಕಾದ ಕಂಗಳ ಕಂಪನ’ ಹಾಗೂ ‘ಪ್ರೀತಿಯೆಂದರೆ’ ಪುಸ್ತಕಗಳನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.23(ಎಸ್‌ಪಿಎನ್)– ಇಲ್ಲಿನ ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಲೇಖಕಿ ಎನ್.ಆರ್.ರೂಪಶ್ರೀ ರಚಿತ ‘ಕಾದ ಕಂಗಳ ಕಂಪನ’ ಹಾಗೂ ‘ಪ್ರೀತಿಯೆಂದರೆ’ ಕವನ ಸಂಕಲನಗಳನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ಎರಡು ಕವನ ಸಂಕಲನ ಬಿಡುಗಡೆಗೊಳಿಸಿದ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ‘ಕಾದ ಕಂಗಳ ಕಂಪನ’ ಮತ್ತು ‘ಪ್ರೀತಿಯೆಂದರೆ’ ಕವನ ಸಂಕಲನದಲ್ಲಿ ಪುರುಷರ ಕುರಿತು ಹಲವು ಪದ್ಯಗಳನ್ನು ರಚಿಸಿದ್ದಾರೆ. ಈ ಪುಸ್ತಕದಲ್ಲಿ ಪುರುಷ ಮತ್ತು ಸ್ತ್ರೀ ಸಮಾಜದ ಬಗ್ಗೆ ಹಲವು ಪ್ರಕಾರಗಳನ್ನು ಗುರುತಿಸಿದ್ದಾರೆ ಎಂದರು.

ಲೇಖಕ ರಾಜು ಅಡಕಳ್ಳಿ ಅವರು ‘ಕಾದ ಕಂಗಳ ಕಂಪನ’ ಕವನ ಸಂಕಲನ ಕುರಿತು ಮಾತನಾಡಿದರು. ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ ಅವರು ‘ಪ್ರೀತಿಯೆಂದರೆ’ ಕಥಾ ಸಂಕಲನ ಕುರಿತು ಮಾತನಾಡಿದರು.

ವೇದಿಕೆಯಲ್ಲಿ ಬೆನಕ ಬುಕ್ಸ್ ಬ್ಯಾಂಕ್ ಪ್ರಕಾಶನ ಗಣೇಶ ಕೋಡೂರು, ಗಾಯಕ ಶ್ರೀಹರ್ಷ ಪ್ರಭಾಕರ್, ವಿದುಷಿ ಎಸ್.ವಿ.ಪನ್ನಗ, ಸದ್ವಿದ್ಯಾ ಪ್ರೌಢಶಾಲೆಯ ಮುಖ್ಯಶಿಕ್ಷಕ ವಿದ್ವಾನ್ ರಾಮಚಂದ್ರ ಭಟ್, ಶಿಕ್ಷಕಿ ಚಂದ್ರಕಲಾ ಕುಮಾರ್, ನಾದಶ್ರೀ ಆರ್. ಭಟ್ ಉಪಸ್ಥಿತರಿದ್ದರು.

ಹೊಮ್ಮ ಮಂಜುನಾಥ್, ವಿಜಯಲಕ್ಷ್ಮಿ ಭಟ್, ಅನಂತ ತಾಮ್ಹನ್ಕರ್, ಸುಮಾ ಪಂಚವಳ್ಳಿ, ಡಾ.ನಾರಾಯಣ ಹೆಗಡೆ, ಸೌಗಂಧಿಕಾ ಜೋಯಿಸ್, ಪ್ರಸನ್ನ ಹೆಗಡೆ, ಯಶೋಧಾ ರಾಮಕೃಷ್ಣ, ಶೋಭಾ ನಾಗಭೂಷಣ್, ಬಿ.ಕೆ.ಮೀನಾಕ್ಷಿ, ಕಾಳಹುಂಡಿ ಶಿವಕುಮಾರ್, ಕೆ.ವಿ.ವಾಸು ಸ್ವರಚಿತ ಕವನ ವಾಚಿಸಿದರು.

## ಸಮಸ್ಯೆಯನ್ನು ಮೆಟ್ಟಿ ನಿಲ್ಲುವ ಗುಣ, ಶಕ್ತಿ ಹೆಣ್ಣಿಗಿದೆ

### ಕೋರ್ಟ್ ಆವರಣದಲ್ಲಿ ಅಂತರರಾಷ್ಟ್ರೀಯ ದಿನಾಚರಣೆ




ಮೈಸೂರಿನ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾ.ಉಷಾರಾಣಿ ಮಾತನಾಡಿದರು.

ಮೈಸೂರು, ಮಾ.23(ಜಿಎ)– ಸಮಾಜದಲ್ಲಿ ಸಾವಿರಾರು ಸಮಸ್ಯೆಗಳು ಎದುರಾಗಬಹುದು.ಅದನ್ನು ಮೆಟ್ಟಿ ನಿಲ್ಲುವ ಗುಣ ಹಾಗೂ ಶಕ್ತಿ ಹೆಣ್ಣಿನಲ್ಲಿದೆ. ಸಮಸ್ಯೆಗಳಿಗೆ ಸಿಲುಕಿದಾಗ ಹೆದರಿಕೊಂಡು ಕುಳಿತುಕೊಳ್ಳಬಾರದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ತಿಳಿಸಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಮೈಸೂರು ವಕೀಲರ ಸಂಘದ ವತಿಯಿಂದ ಸಂಘದ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ಎಂತಹ ಪರಿಸ್ಥಿತಿ ಎದುರಾದರೂ, ಆತ್ಮಾಭಿಮಾನಿ, ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಧೈರ್ಯವಾಗಿ ಸಮಸ್ಯೆಗಳನ್ನು ಎದುರಿಸಬೇಕು ಎಂದು ಕರೆಕೊಟ್ಟರು.

ಹೆಣ್ಣು ಮನಸು ಮಾಡಿದರೆ ಏನಾದರೂ ಸಾಧಿಸಬಹುದು ಎಂಬುವುದನ್ನು ತಿಳಿದುಕೊಳ್ಳಬೇಕು. ನಮ್ಮ ಊರಿನಿಂದ ಪ್ರತಿ ದಿನ ಐದಾರು ಕಿ.ಮೀ.ನವರೆಗೆ ಕಾಡಿನಲ್ಲಿ ನಡೆದುಕೊಂಡು ಶಾಲೆಗೆ ಹೋಗುತ್ತಿದ್ದೇವೆ. ನಾನು ನ್ಯಾಯಾಧೀಶರಾಗಲು ಮನೆಯವರ ಪ್ರೋತ್ಸಾಹ ಮುಖ್ಯವಾಯಿತು. ಹೆಣ್ಣಿಗೆ ಕಲಿಯಲು ಪ್ರೋತ್ಸಾಹ ನೀಡಬೇಕು ಎಂದರು.

ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡಿ ಒಳ್ಳೆಯ ಉದ್ಯೋಗ ಪಡೆದರೂ, ಸಂಸ್ಕೃತಿ, ಆಚಾರ–ವಿಚಾರಗಳನ್ನು ಮರೆಯಬಾರದು. ಹೆಣ್ಣು ಮಕ್ಕಳಿಗೆ ಮನೆಯಲ್ಲಿ ಸಂಸ್ಕೃತಿ ಜೊತೆಯಲ್ಲಿ, ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ಬಾಹ್ಯಾಕಾಶಕ್ಕೆ ಹೋಗಿ ಬಂದ ಗಗನಯಾತ್ರಿ ಸುನಿತ ವಿಲಿಯಮ್ಸ್ ಅವರ ಸಾಧನೆ ಹಾಗೂ ಧೈರ್ಯ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾಗಲಿದೆ. ಅವರು ಅಲ್ಲಿಯ ಒತ್ತಡದಲ್ಲಿದ್ದರು, ಎಲ್ಲವನ್ನು ತಾಳ್ಮೆಯಿಂದ ಎದುರಿಸಿ ವಾಪಸ್ ಭೂಮಿಗೆ ಬಂದರು. ಅಂತಹ ಗುಣಗಳನ್ನು ಮಹಿಳೆಯರು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಡಿಸಿಪಿ ಎಸ್.ಜಾಹ್ನವಿ, ಮೈಸೂರು ವಕೀಲರ ಸಂಘ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ವಿ.ವಿನೋದ, ಹಿರಿಯ ಸಮಿತಿ ಸದಸ್ಯೆ ಆರ್.ಕ್ಷ್ಮಾ ಕುಮಾರಿ ಮತ್ತಿತರರು ಉಪಸ್ಥಿತರಿದ್ದರು.

### ಸಹಕಾರ ಸಂಘಕ್ಕೆ ಆಯ್ಕೆ



ಮೈಸೂರಿನ ಶ್ರೀ ವಿದ್ಯಾಶಂಕರ ಗೃಹ ನಿರ್ಮಾಣ ಸಹಕಾರ ಸಂಘದ 2025–30ನೇ ಸಾಲಿಗೆ ಆಡಳಿತ ಮಂಡಳಿ ಚುನಾವಣೆಯಲ್ಲಿ ಜಿಪಂ ಮಾಜಿ ಸದಸ್ಯ ಎಸ್.ಮಾದೇಗೌಡ ಹಾಗೂ ಎಸ್.ಶಂಕರಪ್ಪ ನೇತೃತ್ವದಲ್ಲಿ 9 ಅಭ್ಯರ್ಥಿಗಳು ಚುನಾಯಿತರಾಗಿದ್ದು, ನಾಲ್ವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನೂತನ ನಿರ್ದೇಶಕರಾದ ಎಸ್.ಮಾದೇಗೌಡ, ಎಸ್.ಶಂಕರಪ್ಪ, ಸಿ.ಮಹೇಶ್, ಎಂ.ಪಿ.ಮಹದೇವಪ್ಪ ಆರ್.ನಿತ್ಯಾನಂದ ಪಟೇಲ್, ಎಂ ಶಿವಣ್ಣ, ಸಚಿನ್ ಗೌಡ, ನಂಜೇಗೌಡ, ಸಿ.ಎನ್ ಚೇತನ್, ಮಂಜುನಾಥ್, ಕೋಮಲ, ಜಯಲಕ್ಷ್ಮೀ ಹಾಗೂ ರೇಣುಕಾ ಅವರನ್ನು ಅಭಿನಂದಿಸಲಾಯಿತು.

### ಉಚಿತ ಮದ್ಯ ವರ್ಜನ ಶಿಬಿರ

ಮೈಸೂರು, ಮಾ.23– ನಗರದ ಶ್ರೀರಾಂಪುರದಲ್ಲಿನ ಚೈತನ್ಯ ಫೌಂಡೇಷನ್‌ನ ಎರಡನೇ ವಾರ್ಷಿಕೋತ್ಸವದ ಪ್ರಯುಕ್ತ ನಾಳೆ(ಮಾ.24)ಯಿಂದ 21 ದಿನಗಳ ಕಾಲ ಉಚಿತ ಮಾದಕ ವಸ್ತು ಹಾಗೂ ಮದ್ಯ ವರ್ಜನ ಶಿಬಿರ ನಡೆಯಲಿದ್ದು, ಹೆಚ್ಚಿನ ಮಾಹಿತಿಗೆ ಮೊ.ಸಂ. 6361744190/9164469570 ಸಂಪರ್ಕಿಸಬಹುದು.

## ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ‘ವಿಶ್ವ ಗುಬ್ಬಚ್ಚಿ ದಿನ’ ಆಚರಣೆ




ಮೈಸೂರು, ಮಾ. 23– ಎಸ್.ಬಿ. ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ವಿಜ್ಞಾನ ವಿಭಾಗದ ವತಿಯಿಂದ ‘ವಿಶ್ವ ಗುಬ್ಬಚ್ಚಿ ದಿನಾಚರಣೆ’ಯನ್ನು ಆಚರಿಸಲಾಯಿತು. ನಮ್ಮ ಸುತ್ತಲಿನ ಪಕ್ಷಿಗಳು ಮತ್ತು ಅವುಗಳ ಪರಿಸರ ವಿಷಯವಾಗಿ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರವು ಗುಬ್ಬಚ್ಚಿಗಳ ಸಂಖ್ಯೆ ಮತ್ತು ಇತರೆ ಪಕ್ಷಿಗಳನ್ನು ಸಂರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಪರಿಸರವಾದಿ ಹಾಗೂ ವನ್ಯಜೀವಿ ರಕ್ಷಕ ಪ್ರದೀಪ್ ಎ.ಎಸ್. ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದ್ದು, ಇತರೆ ಪಕ್ಷಿಗಳು ಕೂಡ ಕಡಿಮೆಯಾಗುತ್ತಾ ಬರುತ್ತಿವೆ. ಕಾರಣ ವಾಸಸ್ಥಾನದ ಅಸುರಕ್ಷತೆ, ಆಹಾರ ಧಾನ್ಯಗಳ ಕೊರತೆ ಮತ್ತು ಪರಿಸರ ಮಾಲಿನ್ಯದಿಂದಾಗಿ ಗುಬ್ಬಚ್ಚಿಗಳ ಅವನತಿಗೆ ಕಾರಣವಾಗುತ್ತಿವೆ ಎಂದರು.

ಅವುಗಳ ಉಳಿವಿಗಾಗಿ ಗೂಡು ಕಟ್ಟುವ ಸ್ಥಳಗಳನ್ನು ಒದಗಿಸುವುದು, ಕೀಟನಾಶಕಗಳ ಬಳಕೆಗಳನ್ನು ಕಡಿಮೆ ಮಾಡುವ ಮೂಲಕ ಪಕ್ಷಿಗಳನ್ನು ಸಂರಕ್ಷಿಸಬಹುದು ಎಂದು ತಿಳಿಸಿದರು.

ಇಂದಿನ ಯುವಜನತೆ ಪಕ್ಷಿಗಳ ಸಂರಕ್ಷಣಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಪ್ರೋತ್ಸಾಹಿಸಿದರು. ಪಕ್ಷಿಗಳ ಉಳಿವಿನ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುನಿತಾ ಎಂ.ಎಚ್. ನಿರೂಪಿಸಿ, ಸ್ವಾಗತಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜರಿದ್ದರು.

# ಕೂಡಲೇ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಸದಿದ್ದರೆ ಕೋರ್ಟ್ ಮೊರೆ

### ಆಮ್ ಆದ್ಮಿ ಪಾರ್ಟಿಯ ರಾಜ್ಯಾಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಎಚ್ಚರಿಕೆ



ಮೈಸೂರು, ಮಾ.23(ಜಿಎ)–ರಾಜ್ಯ ಸರ್ಕಾರ ಬೃಹತ್ ಮೈಸೂರು ಮಹಾನಗರಪಾಲಿಕೆ ರಚನೆ ಹೆಸರಿನಲ್ಲಿ ಪಾಲಿಕೆ ಚುನಾವಣೆಯನ್ನು ಮುಂದೂಡುತ್ತಿದ್ದು, ಕೂಡಲೇ ಚುನಾವಣೆ ನಡೆಸಿ ಎಂಬ ಜನಾಭಿಪ್ರಾಯಕ್ಕೆ ಮನ್ನಣೆ ನೀಡದಿದ್ದರೆ ನ್ಯಾಯಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ಚಿಂತನೆ ನಡೆಸಬೇಕಾಗುತ್ತದೆ ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯಾಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಹೋರಾಟ ಸಮಿತಿ ಏರ್ಪಡಿಸಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾಂಗ್ರೆಸ್, ಬಿಜೆಪಿ, ಜಾ.ದಳ ಈ ಮೂರು ಪಕ್ಷಗಳ ಸ್ಥಳೀಯ ಮುಖಂಡರು, ಕಾರ್ಯಕರ್ತರಿಗೆ ಬೃಹತ್ ಮಹಾ ನಗರಪಾಲಿಕೆ ರಚನೆ ಬದಲಿಗೆ ಶಿಘ್ರ ಚುನಾವಣೆ ನಡೆಯುವುದು ಬೇಕಿದೆ. ಆದರೆ, ಪಕ್ಷದ ನಾಯಕತ್ವದ ವಿರುದ್ಧ ಧ್ವನಿ ಎತ್ತಲಾಗದೆ ಪರಿತಪಿಸುತ್ತಿದ್ದಾರೆ ಎಂದರು.

ಚುನಾವಣಾ ಆಯೋಗ ಕೂಡ ರಾಜ್ಯ ಸರ್ಕಾರದ ಮರ್ಜಿಗೆ ಕಾಯದೆ, ಅವಧಿ ಮುಗಿದಿರುವ ಸ್ಥಳೀಯ ಸಂಸ್ಥೆಗಳಿಗೆ ಶೀಘ್ರ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದ ಅವರು, ಸದ್ಯ ಮೂರು ಪಾರ್ಟಿಗಳವರು ಜನಹಿತ ಮರೆತು ವೈಯಕ್ತಿಕ ಹಿತಾಸಕ್ತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ ಈ ಮೂವರಲ್ಲಿ ಯಾರೂ ಹಿತವರಲ್ಲ. ಆದ್ದರಿಂದ ರಾಜ್ಯದಲ್ಲಿ ಪರ್ಯಾಯ ಪಾರ್ಟಿಗಳ ಅವಶ್ಯಕತೆ ಇದೆ ಎಂದು ಹೇಳಿದರು.

ಎಸ್‌ಡಿಪಿಐನ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಬೃಹತ್ ಮೈಸೂರು ಮಹಾ ನಗರಪಾಲಿಕೆ ರಚನೆ ಸಂಬಂಧ ಸಾರ್ವಜನಿಕ ಚರ್ಚೆಯೇ ನಡೆದಿಲ್ಲ. ಬದಲಿಗೆ ರಿಯಲ್ ಎಸ್ಟೇಟ್ ನವರ ಲಾಬಿಗೆ ಮಣೆ ಹಾಕಲು ಸರ್ಕಾರ ಬೃಹತ್ ಮೈಸೂರು ಮಹಾ ನಗರ ಪಾಲಿಕೆ ರಚನೆಯ ಹೆಸರೇಳುತ್ತಿದೆ. ಸದ್ಯ ಇರುವ 65 ವಾರ್ಡ್‌ಗಳಿಗೇ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಲಾಗದವರು ಬೃಹತ್ ಮಹಾ ನಗರ ಪಾಲಿಕೆ ಮಾಡಿದರೆ ನಾಗರಿಕ ಸೌಕರ್ಯ ಕಲ್ಪಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ನಗರದ ಮೂರು ಜನ ಶಾಸಕರೂ ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಪಾಲಿಕೆ ಚುನಾವಣೆ ನಡೆಯದಂತೆ ತಡೆಯುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಜಾಪ್ರಭುತ್ವವಾದಿಯಾಗಿದ್ದರೆ ತಕ್ಷಣ ಚುನಾವಣೆ ನಡೆಸಲಿ ಎಂದು ಒತ್ತಾಯಿಸಿದರು.

ಇತಿಹಾಸ ತಜ್ಞ ಪ್ರೊ.ನಂಜರಾಜೇ ಅರಸು ಮಾತನಾಡಿ, ಕಳೆದ ಹದಿನೇಳು ತಿಂಗಳುಗಳಿಂದ ಮೈಸೂರು ಮಹಾ ನಗರಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲ. ಮೈಸೂರಿನ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಯಾರ ಬಳಿ ಹೇಳಿಕೊಳ್ಳಬೇಕು ಎಂದು ಪ್ರಶ್ನಿಸಿದರು. ವಿಧಾನಸಭೆಗೆ ಅವಧಿ ಮುಗಿದ ಕೂಡಲೇ ಚುನಾವಣೆ ನಡೆಸಲಾಗುತ್ತದೆ, ಇಲ್ಲೇಕೆ ಸಾಧ್ಯವಾಗುತ್ತಿಲ್ಲ? ಬೃಹತ್ ಮೈಸೂರು ಮಹಾ ನಗರಪಾಲಿಕೆ ರಚನೆ ಹೆಸರಲ್ಲಿ ಸರ್ಕಾರ ಮೈಸೂರಿನ ನಾಗರಿಕರ ಮೂಗಿಗೆ ತುಪ್ಪ ಸವರಲು ಹೊರಟಿದೆ. ಬೃಹತ್ ಮಹಾ ನಗರಪಾಲಿಕೆ ರಚನೆ ಮಾಡಿದರೆ ಈಗಿರುವ 65 ವಾರ್ಡ್ ಬದಲಿಗೆ 99 ವಾರ್ಡ್ ರಚನೆ ಮಾಡಲಾಗುತ್ತದೆ. ಲ್ಯಾಂಡ್ ಮಾಫಿಯಾ, ಲೇಔಟ್ ಮಾಫಿಯಾದವರು ಅವರ ಆಸ್ತಿಯ ಮೌಲ್ಯ ಹೆಚ್ಚಿಸಿಕೊಳ್ಳಲು ಈ ಪ್ರಸ್ತಾವನೆಯನ್ನು ಮುಂದಿಟ್ಟಿದ್ದಾರೆ. ಇದಕ್ಕೆ ಸರ್ಕಾರ ಮನ್ನಣೆ ನೀಡಬಾರದು ಎಂದರು.

ಮೈಸೂರಿಗೆ ಪಾರಂಪರಿಕ ನಗರಿ, ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ ಎಂಬ ಅನ್ವರ್ಥ ನಾಮಗಳಿದೆ. ಈಗಾಗಲೇ ಆ ಹೆಸರನ್ನು ಹಾಳು ಮಾಡಿದ್ದೀರಿ, ಬೃಹತ್ ಮೈಸೂರು ಮಹಾ ನಗರಪಾಲಿಕೆ ರಚನೆ ಹೆಸರಲ್ಲಿ ಇನ್ನಷ್ಟು ಗಬ್ಬು ಎಬ್ಬಿಸದೆ, ಅವಧಿ ಮುಗಿದಿರುವ ನಗರಪಾಲಿಕೆಗೆ ಕೂಡಲೇ ಚುನಾವಣೆ ನಡೆಸಿ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ಸೋಮಸುಂದರ್, ಬಿಎಸ್‌ಪಿ ರಾಜ್ಯಪ್ರಧಾನ ಕಾರ್ಯದರ್ಶಿ ನಾಗಯ್ಯ, ಸೋಸಲೆ ಸಿದ್ದರಾಜು, ಕನ್ನಡ ವೇದಿಕೆಯ ಸುರೇಶ್ ಬಾಬು ಉಪಸ್ಥಿತರಿದ್ದರು.

### ಗೌರಮ್ಮ ಬಿ.ಶಿವಣ್ಣ ನಿಧನ



ಮೈಸೂರು,ಮಾ.23– ಮೈಸೂರಿನ ಇರ್ವಿನ್ ರಸ್ತೆ ಸಮೀಪದ ದೊಡ್ಡ ಒಕ್ಕಲಗೇರಿ ನಿವಾಸಿ ಗೌರಮ್ಮ ಬಿ.ಶಿವಣ್ಣ (86) ವಯೋಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ಪತ್ರಕರ್ತ ಮತ್ತು ಲೇಖಕ ಎಸ್.ಪ್ರಕಾಶ್‌ಬಾಬು ಅವರ ತಾಯಿ. ಮೃತರು ಪ್ರಕಾಶ್‌ಬಾಬು ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪಾರ್ಥಿವ ಶರೀರವನ್ನು ಮೃತರ ಸ್ವಗೃಹವಾದ ಮೈಸೂರಿನ ಇರ್ವಿನ್ ರಸ್ತೆಯ ಸಮೀಪದ ದೊಡ್ಡ ಒಕ್ಕಲಗೇರಿಯಲ್ಲಿ ಅಂತಿಮ ದರ್ಶನಕ್ಕಾಗಿ ಇಡಲಾಗಿದೆ. ನಾಳೆ (ಮಾ.24) ಸೋಮವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸಂತೆಯಲ್ಲಿ ಕೋಳಿ ಮರಿ ತರಲು ಹೋಗಿ ಬಾತುಕೋಳಿ ಮರಿ ತಂದಿದ್ದ...!

## ಸಹೋದರ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ತುಂಟಾಟದ ಬಗ್ಗೆ ನೆನಪಿನ ಬುತ್ತಿ ಬಿಚ್ಚಿಟ್ಟ ತಾರಿಣಿ ಚಿದಾನಂದಗೌಡ

ಮೈಸೂರು, ಮಾ. 23(ಆರ್‌ಕೆ)– ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ (ಎಂಎಲ್‌ಎ) ವತಿಯಿಂದ ಇಂದು ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಡಾ. ಕೃಷ್ಣಮೂರ್ತಿ ಚಂದರ್ ಅವರು ಅನುವಾದ ಮಾಡಿರುವ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಮಾಯಾಲೋಕ' ಕಾದಂಬರಿಯ ಇಂಗ್ಲಿಷ್ ಕೃತಿಯನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಚಿದಾನಂದಗೌಡ ಅವರು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಇಂಗ್ಲಿಷ್ ಅವತರಣಿಕೆಯ ಮೊದಲ ಪ್ರತಿಯನ್ನು ಅನುವಾದಕ ಡಾ. ಕೃಷ್ಣಮೂರ್ತಿ ಚಂದರ್ ಅವರು ಕುವೆಂಪು ಪುತ್ರಿ ತಾರಿಣಿ ಚಿದಾನಂದಗೌಡ ಅವರಿಗೆ ಸಮರ್ಪಿಸಿದರು. ಮೊದಲ ಪುಸ್ತಕ ಸ್ವೀಕರಿಸಿ ಪ್ರತಿಕ್ರಿಯಿಸಿದ ತಾರಿಣಿ ಅವರು, ಸಹೋದರ ಪೂರ್ಣಚಂದ್ರ ತೇಜಸ್ವಿ ತಾನು ಬರೆದಿದ್ದ 'ಮಾಯಾಲೋಕ'ದ ಪ್ರಥಮ ಪ್ರತಿಯನ್ನು ತನ್ನ ಪ್ರೀತಿಯ ಬರಹದೊಂದಿಗೆ ನನಗೆ ಕೊಟ್ಟಿದ್ದರು ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ನಾನು ಆ ಪುಸ್ತಕವನ್ನು ಅರ್ಧ ಓದಿದ್ದೆ, ಒಮ್ಮೆ ಕುಟುಂಬ ಸಮೇತ ತಾಯಿ ಮನೆಗೆ ಬಸ್ಸಿನಲ್ಲಿ ಹೋಗುವಾಗ ಆ ಪುಸ್ತಕವನ್ನೂ ಕೊಂಡೊಯ್ಯುತ್ತಿದ್ದೆವು. ಬಸ್ಸಿನಲ್ಲಿ ನನ್ನ ಮತ್ತು ನನ್ನ ಯಜಮಾನರ ಎರಡೂ ಸೂಟ್‌ಕೇಸ್‌ಗಳನ್ನೂ ಯಾರೋ ಕಳ್ಳತನ ಮಾಡಿಬಿಟ್ಟರು. ಅದರೊಂದಿಗೆ ಪೂರ್ಣಚಂದ್ರ ತೇಜಸ್ವಿ ಕೊಟ್ಟಿದ್ದ 'ಮಾಯಾಲೋಕ' ಪುಸ್ತಕವೂ ಮಾಯವಾಯಿತು ಎಂದು ತಾರಿಣಿ ಅವರು ಬೇಸರ ವ್ಯಕ್ತಪಡಿಸಿದರು.

'ಪ್ರೀತಿಯ ಸಹೋದರಿಗೆ ಸಹೋದರನ ಕಾಣಿಕೆ' ಇದನ್ನು ಓದಿ ಪ್ರತಿಕ್ರಿಯೆ ನೀಡುವುದು ಎಂದು ತಾನೇ ಬರೆದುಕೊಟ್ಟಿದ್ದ ಕಾದಂಬರಿಯ ಮೊದಲ ಕೃತಿ ಹಾಳಾಯಿತು. ಆದರೆ, ಅದೇ ಕಾದಂಬರಿಯ ಇಂಗ್ಲಿಷ್ ಅನುವಾದಿತ ಕೃತಿಯ ಮೊದಲ ಪುಸ್ತಕವನ್ನು ಡಾ. ಕೃಷ್ಣಮೂರ್ತಿ ಚಂದರ್ ನನಗೆ ನೀಡಿರುವುದು ತುಂಬಾ ಸಂತೋಷವಾಗಿದೆ ಎಂದ ತಾರಿಣಿ ಅವರು, ಕನ್ನಡ ಕೃತಿಯನ್ನು ಅರ್ಧಭಾಗ ಓದಿದ್ದೆ. ಈ ಕೃತಿಯನ್ನು ಪೂರ್ಣ ಓದುತ್ತೇನೆ ಎಂದು ಅಕ್ಕರೆಯಿಂದ ನುಡಿದರು.

ನಮ್ಮದು ತುಂಬಿದ ಕೃಷಿಕ ಕುಟುಂಬ. ಊರಲ್ಲಿ ಕೋಳಿ, ಕುರಿ, ನಾಯಿ, ದನ, ಎಮ್ಮೆಗಳನ್ನು ಸಮೃದ್ಧಿಯಾಗಿ ಸಾಕುತ್ತಿದ್ದರು. ಸಹೋದರ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ತುಂಬಾ ತುಂಟ ಹಾಗೂ ತಮಾಷೆ ಮಾಡುತ್ತಿದ್ದ. ಹೊರಗಡೆ ತಿರುಗಾಡಬೇಕೆಂಬ ಹಂಬಲದಿಂದ ಒಮ್ಮೆ ಸಂತೆಗೆ ಹೋಗಿ ಕೋಳಿ ಮರಿ ತರುತ್ತೇನೆಂದು ಮನೆಯಲ್ಲಿ ಹಣ ಪಡೆದು ಮತ್ತೊಬ್ಬ ಸಹೋದರನೊಂದಿಗೆ ಹೋಗಿದ್ದ ತೇಜಸ್ವಿ, ಸಂತೆಯಲ್ಲಿ ಕೋಳಿ ಮರಿಗಳಿಗೆ ಹೆಚ್ಚಿನ ಬೆಲೆ ಹೇಳಿದರೆಂಬ ಕಾರಣಕ್ಕೆ ಪಕ್ಕದಲ್ಲೇ ಅದರರ್ಧ ಬೆಲೆಗೆ ಸಿಕ್ಕಿದವೆಂದು ಬಾತುಕೋಳಿ ಮರಿ ತಂದಿದ್ದ ಎಂದು ತಾರಿಣಿ ಹಳೇ ಪ್ರಸಂಗವನ್ನು ನೆನಪಿಸಿಕೊಂಡರು.

ಮನೆಯಲ್ಲಿ ಕೇಳಿದಾಗ ಅಷ್ಟು ಸಣ್ಣ ಕೋಳಿ ಮರಿಗೆ ಅಷ್ಟೊಂದು ಬೆಲೆ ಹೇಳಿದರು. ಅದಕ್ಕೆ ಅದರರ್ಧ ಬೆಲೆಗೆ ಸಿಕ್ಕಿದ ದೊಡ್ಡ ಆಕಾರದಲ್ಲಿದ್ದ ಬಾತುಕೋಳಿ ಮರಿಯನ್ನೇ ತಂದೆವು ಎಂದು ತೇಜಸ್ವಿ ತಿಳಿಸಿದಾಗ ಮನೆಯವರೆಲ್ಲಾ ನಕ್ಕು ನಕ್ಕು ಉಳ್ಳಾಡಿದೆವು ಎಂದ ಅವರು, ನಂತರ ದಿನಾ ಆ ಮರಿಗಳನ್ನು ಓಡಿಸಿಕೊಂಡು ಓಡಾಡುತ್ತಿದ್ದಾಗ ನಾವು ಓಡಿಸಬೇಡಿ ಸುಸ್ತಾಗುತ್ತದೆ ಎಂದಿದ್ದಕ್ಕೆ ಓಡಿಸಿಕೊಂಡು ಹೋದರೆ ಮರಿಗಳು ಮೊಟ್ಟೆ ಇಡುತ್ತವೆ ಎಂದು ಯಾರೋ ಹೇಳಿದ್ದರು. ಅದಕ್ಕೆ ಓಡಿಸುತ್ತಿದ್ದೇವೆ ಎಂದು ಉತ್ತರಿಸಿದ್ದ ಎಂದರು.


ರಜೆಯಲ್ಲಿ ಅಜ್ಜಿ ಮನೆಗೆ ಹೋಗಿದ್ದಾಗ ಅಲ್ಲಿ ಹಸುವೊಂದು ಕರುವಿಗೆ ಜನ್ಮ ನೀಡುತ್ತಿತ್ತು. ಹಸುವಿಗೆ ಅಡಚಣೆಯಾಗಬಾರದೆಂದು ಸಣ್ಣವರಾಗಿದ್ದ ನಮ್ಮನ್ನೆಲ್ಲಾ ಮನೆಯಿಂದ ಹೊರಗೆ ಆಟವಾಡಲು ಕಳುಹಿಸಿದ್ದರು. ಕರು ಜನಿಸಿದ ಬಳಿಕ ಸ್ವಚ್ಛಗೊಳಿಸಿ, ತಾಯಿ ಬಳಿ ಕರುವಿಗೆ ಹಾಲುಣಿಸಿದ ಬಳಿಕ ಹಿರಿಯರು ಹುಡುಗರನ್ನು ಕರೆಯಿರಿ ನೋಡಲಿ ಎನ್ನುತ್ತಿದ್ದಂತೆಯೇ ಅಲ್ಲೇ ಅಟ್ಟದ ಮೇಲಿಂದ ನಾವು ಇಲ್ಲೇ ಇದ್ದೇವೆ ಎಂದು ತೇಜಸ್ವಿ ಸಹೋದರರು ಹೇಳುತ್ತಿದ್ದಂತೆಯೇ ಮನೆಯವರಿಗೆಲ್ಲಾ ಅಚ್ಚರಿಯಾಯಿತು. ಅಲ್ಲಿಗೆ ಹೇಗೆ, ಯಾವಾಗ ಬಂದರು ಎಂಬುದು ಯಕ್ಷಪ್ರಶ್ನೆಯಾಗಿತ್ತು ಎಂದು ತಾರಿಣಿ ಅವರು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಬಾಲ್ಯದ ತುಂಟತನದ ಕುರಿತು ಸ್ವಾರಸ್ಯಗಳನ್ನು ವಿವರಿಸಿದರು.

ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ. ಕೆ.ಸಿ. ಬೆಳ್ಳಿಯಪ್ಪ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ. ಕೆ. ಚಿದಾನಂದಗೌಡರು ಕೃತಿ ಕುರಿತು ಮಾತನಾಡಿದರೆ, ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಅವರು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕುರಿತು ಮಾತನಾಡಿದರು.



ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಕೃಷ್ಣಮೂರ್ತಿ ಚಂದರ್ ಅನುವಾದಿಸಿರುವ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಮಾಯಾಲೋಕ' ಇಂಗ್ಲೀಷ್ ಅವತರಣಿಕೆಯನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಅವರು (ಎಡದಿಂದ 3ನೇಯವರು) ಬಿಡುಗಡೆ ಮಾಡಿದರು. (ಎಡದಿಂದ) ಅನುವಾದಕ ಡಾ. ಕೃಷ್ಣಮೂರ್ತಿ ಚಂದರ್, ಕುವೆಂಪು ಪುತ್ರಿ ತಾರಿಣಿ ಚಿದಾನಂದಗೌಡ ಹಾಗೂ ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ. ಕೆ.ಸಿ. ಬೆಳ್ಳಿಯಪ್ಪರನ್ನು ಚಿತ್ರದಲ್ಲಿ ಕಾಣಬಹುದು.

# ಮೈಸೂರು ಮೃಗಾಲಯದಲ್ಲಿ ಜಿರಾಫೆ, ಜೀಬ್ರಾ ಜನನ




ಮೈಸೂರು, ಮಾ.23(ಎಂಟಿವೈ)– ಬಿರು ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿಗಳ ಹಿತ ಕಾಯುವ ನಿಟ್ಟಿನಲ್ಲಿ ವಿಶೇಷ ಆರೈಕೆ ಮಾಡುವ ಮೂಲಕ ಗಮನ ಸೆಳೆದಿದ್ದ ಮೈಸೂರು ಮೃಗಾಲಯ ಇದೀಗ ಹೊಸ ಅತಿಥಿಗಳ ಆಗಮನದಿಂದಾಗಿ ವನ್ಯಜೀವಿ ಪ್ರೇಮಿಗಳು ಹಾಗೂ ಪ್ರವಾಸಿಗರು ಸಂಭ್ರಮಿಸುವಂತೆ ಮಾಡಿದೆ.

ಬೇಸಿಗೆ ಝಳದಿಂದ ಮೈಸೂರು ಮೃಗಾಲಯದಲ್ಲಿರುವ ಪ್ರಾಣಿ–ಪಕ್ಷಿ ಸಂಕುಲವನ್ನು ರಕ್ಷಿಸುವ ನಿಟ್ಟಿನಲ್ಲಿ ವಾಟರ್ ಜೆಟ್ ಬಳಸಿ ನೀರು ಚಿಮುಕಿಸುವ ಮೂಲಕ ಪ್ರಾಣಿಗಳ ದೇಹ ತಂಪಾಗಿಸುವ ಕ್ರಮದೊಂದಿಗೆ ಹೆಚ್ಚು ನೀರಿನಂಶವಿರುವ ಹಣ್ಣು–ತರಕಾರಿ, ಐಸ್ ಬ್ಲಾಕ್ ನೀಡಿ, ಏರ್‌ಕೂಲರ್, ಫ್ಯಾನ್ ಬಳಸಿ, ಓಆರ್‌ಎಸ್ ನೀಡುವ ಮೂಲಕ ಪ್ರಾಣಿ–ಪಕ್ಷಿ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದ್ದ ಮೈಸೂರು ಮೃಗಾಲಯದಲ್ಲಿ ಬೇಸಿಗೆ ವೇಳೆಯೇ ಸಂಭ್ರಮದ ವಾತಾವರಣ ನಿರ್ಮಾಣವಾಗಿದ್ದು, ಮೃಗಾಲಯದ ಸಿಬ್ಬಂದಿಗಳಲ್ಲಿ ಸಂತಸ ಮನೆ ಮಾಡಿದೆ.

**ಜಿರಾಫೆಗೆ ಮರಿ ಜನನ:** ಮೃಗಾಲಯದಲ್ಲಿರುವ ಬಬ್ಲಿ ಹೆಸರಿನ ಜಿರಾಫೆ ಕಳೆದ 5 ದಿನದ ಹಿಂದೆ ಗಂಡು ಮರಿಗೆ ಜನ್ಮ ನೀಡಿದೆ. ಮೈಸೂರು ಮೃಗಾಲಯದಲ್ಲಿ ಕಳೆದ ಕೆಲ ದಶಕಗಳಿಂದ ಜಿರಾಫೆ ಸಂತತಿ ಸಂರಕ್ಷಣೆಯಲ್ಲಿ ಅತ್ಯಂತ ಹೆಚ್ಚಿನ ಕಾಳಜಿ ಪ್ರದರ್ಶಿಸುತ್ತಿರುವುದರಿಂದ ಮೃಗಾಲಯದಲ್ಲಿ ಜಿರಾಫೆಗಳ ಸಂಖ್ಯೆ ಹೆಚ್ಚಾಗುವ ಮೂಲಕ ದೇಶದ ಗಮನ ಸೆಳೆಯುತ್ತಿದೆ. ಈಗಾಗಲೇ ಬೇರೆ ಬೇರೆ ಮೃಗಾಲಯಗಳಿಗೆ ಜಿರಾಫೆಯನ್ನು ಕೊಡುಗೆ ನೀಡಿರುವ ಮೈಸೂರಿನ ಮೃಗಾಲಯವು ಇದೀಗ ಮತ್ತೊಂದು ಜಿರಾಫೆ ಮರಿಯನ್ನು ಹೊಂದಿದೆ. ತಾಯಿ ಮತ್ತು ಮರಿ ಆರೋಗ್ಯದಿಂದ ಕೂಡಿದ್ದು, ಮರಿಯ ಆರೈಕೆಯಲ್ಲಿ ಸಿಬ್ಬಂದಿ ಹೆಚ್ಚಿನ ಕಾಳಜಿ ವಹಿಸಿದ್ದಾರೆ.

**ಜೀಬ್ರಾಗೆ ಜನನ:** ಪ್ರಾಣಿ–ಪಕ್ಷಿ ಸಂಕುಲದ ಸಂರಕ್ಷಣೆಯಲ್ಲಿ ಮೈಸೂರು ಮೃಗಾಲಯವು ಹೆಚ್ಚಿನ ಕಾಳಜಿ ವಹಿಸುತ್ತಿರುವುದರಿಂದ ವಿದೇಶಿ ಪ್ರಾಣಿಗಳೂ ಸೇರಿದಂತೆ ಅಳಿವಿನಂಚಿನಲ್ಲಿರುವ ಪ್ರಾಣಿ–ಪಕ್ಷಿಗಳ ಸಂತಾನೋತ್ಪತ್ತಿಯಲ್ಲಿ ಮೈಸೂರು ಮೃಗಾಲಯವು ಮುಂಚೂಣಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯದಲ್ಲಿದ್ದ ಜೀಬ್ರಾ ಜೋಡಿ ಮರಿಯೊಂದಕ್ಕೆ ಜನ್ಮ ನೀಡಿದ್ದು, ಆ ಮರಿಗೆ ವಿಶೇಷ ಆರೈಕೆ ಮಾಡಲಾಗುತ್ತಿದೆ.

**ಗೊರಿಲ್ಲಾ ಆಗಮನ:** ಗೊರಿಲ್ಲಾ ಹೊಂದಿರುವ ಮೃಗಾಲಯಗಳಲ್ಲಿ ಮೈಸೂರು ಮೃಗಾಲಯ ಮುಂಚೂಣಿಯಲ್ಲಿದೆ. ಬೆರಳೆಣಿಕೆಯಷ್ಟು ಮೃಗಾಲಯದಲ್ಲಿ ಮಾತ್ರ ಗೊರಿಲ್ಲಾ ಇದ್ದು, ಮೈಸೂರು ಮೃಗಾಲಯವು ಆ ಪಟ್ಟಿಯಲ್ಲಿ ಸೇರಿದೆ. ಕಳೆದ ಕೆಲ ವರ್ಷದ ಹಿಂದೆ ಗಂಡು ಗೊರಿಲ್ಲಾವೊಂದನ್ನು ಮೈಸೂರಿನ ಮೃಗಾಲಯಕ್ಕೆ ತರಲಾಗಿತ್ತು. ಆದರೆ ಅದಕ್ಕೆ ಜೋಡಿ ಕಟ್ಟುವ ನಿಟ್ಟಿನಲ್ಲಿ ಕಳೆದ ಐದಾರು ವರ್ಷದಿಂದ ಹೆಣ್ಣು ಗೊರಿಲ್ಲಾವನ್ನು ಮೈಸೂರಿಗೆ ತರಲು ಪ್ರಯತ್ನಿಸಲಾಗುತ್ತಿತ್ತು. ಆದರೆ ಇದೀಗ ಸತತ ಪರಿಶ್ರಮದಿಂದ ಮೈಸೂರಿನ ಮೃಗಾಲಯಕ್ಕೆ 2 ಹೆಣ್ಣು ಗೊರಿಲ್ಲಾಗಳನ್ನು ತರಲಾಗಿದೆ. ಇಂಗ್ಲೆಂಡಿನ ಬ್ಲಾಕ್‌ಫೂಲ್ ಮೃಗಾಲಯದಿಂದ 12 ಮತ್ತು 14 ವರ್ಷದ ಹೆಣ್ಣು ಗೊರಿಲ್ಲಾವನ್ನು ಬಿಗಿ ಭದ್ರತೆಯಲ್ಲಿ ಮಾ.12ರಂದು ಮೈಸೂರು ಮೃಗಾಲಯಕ್ಕೆ ಸುರಕ್ಷಿತವಾಗಿ ತರಲಾಗಿದೆ.

### ಇಂಗ್ಲೆಂಡ್‌ನಿಂದ ಗೊರಿಲ್ಲಾಗಳ ಆಗಮನ

ಮೈಸೂರಿನ ಪರಿಸರಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಇಂಗ್ಲೆಂಡ್‌ನಿಂದ ತಂದಿರುವ ಎರಡು ಹೆಣ್ಣು ಗೊರಿಲ್ಲಾಗಳನ್ನು ಕ್ವಾರಂಟೈನ್‌ನಲ್ಲಿಟ್ಟು ಅವುಗಳ ಆರೋಗ್ಯದ ಬಗ್ಗೆ ತೀವ್ರ ನಿಗಾ ಇಡಲಾಗಿದೆ. ಗೊರಿಲ್ಲಾಗಳೊಂದಿಗೆ ಇಂಗ್ಲೆಂಡ್‌ನ ಮೃಗಾಲಯದಿಂದ ಕೆಲ ಸಿಬ್ಬಂದಿ ಬಂದಿದ್ದು, ಮೈಸೂರು ಮೃಗಾಲಯದ ಗೊರಿಲ್ಲಾ ಪಾಲಕರಿಗೆ ತರಬೇತಿ ನೀಡುತ್ತಿದ್ದಾರೆ. ಅಲ್ಲದೇ ಇಂಗ್ಲೆಂಡ್‌ನಿಂದ ಗೊರಿಲ್ಲಾಗಳನ್ನು ಮೈಸೂರು ಮೃಗಾಲಯದ ಸಿಬ್ಬಂದಿಗೆ ಪರಿಚಯಿಸುವ ಸಂವಹನ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇನ್ನು ಒಂದು ತಿಂಗಳವರೆಗೂ ಕ್ವಾರಂಟೈನ್‌ನಲ್ಲಿ ಇಟ್ಟು ವಿಶೇಷ ಆರೈಕೆ ಮಾಡಿದ ನಂತರ ಹಂತ ಹಂತವಾಗಿ ಮೈಸೂರು ಮೃಗಾಲಯದಲ್ಲಿರುವ ಗಂಡು ಗೊರಿಲ್ಲಾವನ್ನು ಪರಿಚಯಿಸುವ ಪ್ರಕ್ರಿಯೆ ನಡೆಸಲಾಗುತ್ತಿದೆ. ಅಲ್ಲದೇ ಪ್ರವಾಸಿಗರ ವೀಕ್ಷಣೆಗೂ ತಿಂಗಳ ನಂತರವಷ್ಟೇ ಅವಕಾಶ ನೀಡಲಾಗುತ್ತದೆ.

# ನಾಳೆ ಹಿರಿಯ ನಟ ದಿವಂಗತ

## ಕೆ.ಎಸ್.ಅಶ್ವಥ್‌ರ ನೂರರ ನೆನಪು

ಮೈಸೂರು, ಮಾ.23(ಜಿಎ)–ಹಿರಿಯ ನಟ ದಿವಂಗತ ಕೆ.ಎಸ್.ಅಶ್ವಥ್ ಅವರ ಜನ್ಮಶತಾಬ್ಧಿ ಅಂಗವಾಗಿ ಮಾ.25ರಂದು ಸಂಜೆ 4.30ಕ್ಕೆ ನಗರದ ಕಲಾಮಂದಿರದಲ್ಲಿ ಡಾ.ಕೆ.ಎಸ್. ಅಶ್ವಥ್ ನೂರರ ನೆನಪು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1955ರಲ್ಲಿ ಸ್ತ್ರೀರತ್ನ ಚಲನಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಬಳಿಕ ಪೋಷಕ ಪಾತ್ರಗಳ ಮೂಲಕ ಜನರ ಮನದಲ್ಲಿ ಉಳಿದಿದ್ದಾರೆ. ನಾಗರಹಾವು ಚಿತ್ರದ ಚಾಮಯ್ಯ ಮೇಷ್ಟ್ರು ಪಾತ್ರದಿಂದಾಗಿ ನಂತರವೂ ಚಾಮಯ್ಯ ಮೇಷ್ಟ್ರು ಎಂದೇ ಕರೆಸಿಕೊಳ್ಳುತ್ತಿದ್ದರು. ನಮ್ಮ ಮಕ್ಕಳು, ಮುತ್ತಿನ ಹಾರ ಮೊದಲಾದ 350ಕ್ಕೂ ಚಿತ್ರದಲ್ಲಿ ನಟಿಸಿದ್ದು, ರಾಜ್‌ಕುಮಾರ್ ಅವರ ಚಿತ್ರಗಳಲ್ಲಿನ ಪಾತ್ರ ಅಚ್ಚಳಿಯದೇ ಉಳಿದಿವೆ. ಹೀಗಾಗಿ ಇವರನ್ನು ಸ್ಮರಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಾಡಿನ ಗಣ್ಯರಿಂದ ನುಡಿನಮನ, ಛಾಯಾಚಿತ್ರ ಪ್ರದರ್ಶನ, ಕರ್ನಾಟಕ ಸುಗಮ ಸಂಗೀತ ಪರಿಷತ್ ಗಾಯಕರಿಂದ ಗೀತ ನಮನ ನಡೆಯಲಿದ್ದು, ಹಿರಿಯರಾದ ಡಾ.ರವಿಚಂದ್ರನ್, ಶ್ರೀನಾಥ್, ದೊಡ್ಡಣ್ಣ, ಹಿರಿಯ ಪತ್ರಕರ್ತ ರಂಗನಾಥ್ ಭಾರದ್ವಾಜ್, ಬಿ.ಗಣಪತಿ, ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕೆ.ಎಸ್.ಅಶ್ವಥ್ ಅವರ ಪುತ್ರ, ಹಿರಿಯ ನಟ ಶಂಕರ್ ಅಶ್ವಥ್, ನಾಗರಾಜ್ ವಿ.ಭೈರಿ, ಮಂಡ್ಯ ಸತ್ಯ, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಇಂದು ರಾಜ್ಯದ ಕೆಲವೆಡೆ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದ ಕೆಲವೆಡೆ ಸೋಮವಾರವೂ ಗುಡುಗುಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಚಿಕ್ಕಮಗಳೂರು, ಕೊಡಗು, ಹಾಸನ ಹಾಗೂ ಮೈಸೂರು ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ತುಂತುರು ಮಳೆ ಆಗಬಹುದು. ಕೆಲ ಜಿಲ್ಲೆಗಳಲ್ಲಿ ಮಂಗಳವಾರ ಹಾಗೂ ಬುಧವಾರವೂ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



# ಗ್ರಾಮ ಸ್ವರಾಜ್ಯವಾಗುವ ಬದಲು ವೃದ್ಧಾಶ್ರಮಗಳಾಗುತ್ತಿರುವ ಹಳ್ಳಿಗಳು

## ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅತೀವ ಕಳವಳ




ಮೈಸೂರಿನ ಬಿಲ್ಡರ್ ಅಸೋಸಿಯೋಷನ್ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಜಿಲ್ಲೆ–317ಜಿ ವತಿಯಿಂದ ಆಯೋಜಿಸಿದ್ದ ಪ್ರಾಂತ್ಯ–6, 7ರ ಪ್ರಾಂತೀಯ ಸಮ್ಮೇಳನವನ್ನು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು.

ಮೈಸೂರು, ಮಾ.23(ಜಿಎ)–ಮಹಾತ್ಮ ಗಾಂಧೀಜಿ ಅವರು ದೇಶ ಗ್ರಾಮ ಸ್ವರಾಜ್ಯವಾಗಬೇಕು ಎಂದು ಬಯಸಿದ್ದರು. ಆದರೆ ಪ್ರಸ್ತುತ ಹಳ್ಳಿಗಳು ವೃದ್ಧಾಶ್ರಮವಾಗಿ ರೂಪುಗೊಳ್ಳುತ್ತಿದ್ದು, ಇದನ್ನು ಸರಿಪಡಿಸುವ ಕಾರ್ಯ ಮಾಡಬೇಕು ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

ಮೈಸೂರಿನ ಬಿಲ್ಡರ್ ಅಸೋಸಿಯೋಷನ್ ಸಭಾಂಗಣದಲ್ಲಿ ಅಂತರ ರಾಷ್ಟ್ರೀಯ ಲಯನ್ಸ್ ಜಿಲ್ಲೆ–317ಜಿ ವತಿಯಿಂದ ಆಯೋಜಿಸಿದ್ದ ಪ್ರಾಂತ್ಯ–6, 7ರ ಪ್ರಾಂತೀಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಲಯನ್ಸ್ 195 ದೇಶಗಳಲ್ಲಿ ಕಾರ್ಯಚಟುವಟಿಕೆ ಹೊಂದಿದೆ. ದೇಶದ ಎಲ್ಲಾ ನಗರ, ಹಳ್ಳಿಗಳಲ್ಲಿ ಲಯನ್ಸ್ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಲಯನ್ಸ್ ಸಂಸ್ಥೆ ಸೇವೆ ಹಾಗೂ ದೇಶ ಭಕ್ತಿಯನ್ನು ಬಿತ್ತುತ್ತಿದೆ ಎಂದರು.

ದೇಶದಲ್ಲಿ 6.65 ಲಕ್ಷ ಹಳ್ಳಿಗಳು ಇವೆ. 4 ಸಾವಿರ ಮಹಾನಗರಗಳು ಮಾತ್ರ ಇವೆ. ದೇಶದಲ್ಲಿ ಬಹುಪಾಲು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿ ಗ್ರಾಮ ಸ್ವರಾಜ್ಯವಾಗಬೇಕು ಎಂದು ಗಾಂಧಿ ಬಯಸಿದ್ದರು. ಆದರೆ ಪ್ರಸ್ತುತ ಹಳ್ಳಿಗಳು ವೃದ್ಧಾಶ್ರಮವಾಗಿ ರೂಪುಗೊಳ್ಳುತ್ತಿದ್ದು, ಇದನ್ನು ಸರಿಪಡಿಸುವ ಕಾರ್ಯ ಮಾಡಬೇಕು ಆಶಿಸಿದರು.

ಹಳ್ಳಿಗಳ ಅಭಿವೃದ್ಧಿ ವಿಚಾರದಲ್ಲಿ ಕೇವಲ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ. ಹಳ್ಳಿಗಳ ಅಭಿವೃದ್ಧಿ ವಿಚಾರದಲ್ಲಿ ನಮ್ಮ ಕೊಡುಗೆ ಏನು ಎಂದು ಆಲೋಚಿಸಬೇಕು. ಪ್ರತಿಯೊಂದು ಸಂಘ ಸಂಸ್ಥೆಗಳು, ಜನರು ಹಾಗೂ ಸಮಾಜ ಎಲ್ಲರೂ ಸೇರಿ ಹಳ್ಳಿಯನ್ನು ಕಟ್ಟಬೇಕು ಎಂದರು.

ಪ್ರಸ್ತುತ ಸಾಕಷ್ಟು ಸರ್ಕಾರಿ ಶಾಲೆಗಳು ಮುಚ್ಚುತ್ತಿರುವುದು ಬೇಸರದ ಸಂಗತಿ. ನನ್ನ ಊರು ನಾಗತಿಹಳ್ಳಿ ಶಾಲೆಗೆ ಇದೀಗ ಶತಮಾನೋತ್ಸವ ಸಂಭ್ರಮದಲ್ಲಿ ಇದೆ. ನಮ್ಮ ಸಂಪಾದನೆಯಲ್ಲಿ ಒಂದು ಭಾಗವನ್ನು ಹಳ್ಳಿ ಹಾಗೂ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೀಡಬೇಕು ಎಂದು ಸಲಹೆ ನೀಡಿದರು. ಯೂರೋಪ್, ಫ್ರಾನ್ಸ್ ಹಳ್ಳಿಗಳಲ್ಲಿ ತಿರುಗಾಡಿದ ನಂತರ ಭಾರತದ ಹಳ್ಳಿಗಳು ಏತಕ್ಕೆ ಹೀಗೆ ಇವೆ ಎಂಬ ಸಂಕಟ ಉಂಟಾಗುತ್ತದೆ. ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ ದೇಶದಲ್ಲಿ ಕೆಲವೇ ಕೆಲವು ಹಳ್ಳಿಗಳು ಮಾತ್ರ ಯೋಗ್ಯ ವಾಗಿದೆ. ಹಾಗಾಗಿ ಹಳ್ಳಿಗಳನ್ನು ಕಟ್ಟುವ ಕಾರ್ಯವನ್ನು ಎಲ್ಲರೂ ಮಾಡಬೇಕು. ಹಳ್ಳಿಯ ಜನರನ್ನು ಆರ್ಥಿಕ ಸ್ವಾವಲಂಬಿಯಾಗಿ ರೂಪಿಸಬೇಕು ಎಂದರು.

ಪ್ರಾಂತ್ಯ 6ರ ಪ್ರಾಂತೀಯ ಅಧ್ಯಕ್ಷ ಶಿವರಾಮು ಮಾತನಾಡಿ, ಲಯನ್ ಸಂಸ್ಥೆ 200 ದೇಶಗಳು, 48 ಸಾವಿರ ಸಂಸ್ಥೆಗಳು ಇವೆ. ಸಂಸ್ಥೆಯು ಶತಮಾನದ ಇತಿಹಾಸ ಹೊಂದಿದೆ ಎಂದರು.

ಪ್ರಾಂತ್ಯ 7 ಪ್ರಾಂತೀಯ ಅಧ್ಯಕ್ಷ ಉಮೇಶ್ ಮಾತನಾಡಿ, ನಮ್ಮ ಸಂಸ್ಕೃತಿ ಉಳಿಯಲು ಹಳ್ಳಿಗಳು ಕಾರಣ. ಹಳ್ಳಿಗಳಲ್ಲಿ ಇಂದಿಗೂ ಹಬ್ಬ ಹರಿದಿನಗಳು ನಡೆದುಕೊಂಡು ಬರುತ್ತಿದೆ. ಗ್ರಾಮೀಣ ಸಂಸ್ಕೃತಿ ಉಳಿಸಲು ಎಲ್ಲರೂ ಶ್ರಮಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಲಯನ್ ಡಾ.ಎನ್.ಕೃಷ್ಣೇಗೌಡ, ಲಯನ್ ಕೆ.ದೇವೇಗೌಡ, ಶಿವರಾಮಮೂರ್ತಿ, ಉಮೇಶ್, ಚಂದ್ರಶೇಖರ್, ಜಯರಾಮು, ಶ್ರೀನಿವಾಸ್, ಜಯಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



